ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 19 | ಮೇ 3-9, 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com



ಹೋರಾಟ ಜೀವಿ ಕಾಮ್ರೇಡ್ ಕೆ. ವೀರಮಣಿ






ಭಾರತಕ್ಕೆ ಉಸಿರುಗಟ್ಟುತ್ತಿದೆ

ಮೋದಿ ಸರ್ಕಾರವೇ ಒಂದು ದೊಡ್ಡ ಹಗರಣ





ಹಸಿದ ಹೊಟ್ಟೆಗೆ ಅನ್ನ ಕೇಳಿದರೆ ಸಾಯಿರಿ ಎಂದ ಮಂತ್ರಿ ಇರಬೇಕೇ?




ಲಸಿಕೆ ನೀತಿಗೆ ಸುಪ್ರಿಂ ಚಾಟಿ



ಕಾಗೋಡು ಸತ್ಯಾಗ್ರಹ 70

ತುರ್ತಾಗಿ ಆಕ್ಸಿಜನ್ ಖಾತ್ರಿಪಡಿಸಿ–ಉಚಿತ ಲಸಿಕೆಗಳನ್ನು ಒದಗಿಸಿ

ಬಿಕ್ಕಟ್ಟು ಸುನಾಮಿಯಾಗುತ್ತಿದೆ–ಪ್ರಧಾನ ಮಂತ್ರಿಗಳಿಗೆ ಯೆಚುರಿ ಪತ್ರ



ದೇಶದೆಲ್ಲೆಡೆಗಳಲ್ಲೂ ಎಲ್ಲ ಆಸ್ಪತ್ರೆಗಳಿಗೂ, ರೋಗಿಗಳಿಗೂ ವೈದ್ಯಕೀಯ ಆಕ್ಸಿಜನ್‌ನ ಅಬಾಧಿತ ಪೂರೈಕೆಯನ್ನು ಖಾತ್ರಿಪಡಿಸುವುದು ಮತ್ತು ಲಸಿಕೆಗಳನ್ನು ಉಚಿತವಾಗಿ ಮತ್ತು ಸಾರ್ವತ್ರಿಕವಾಗಿ ಒದಗಿಸುವುದು ಸದ್ಯ ಅತ್ಯಂತ ತುರ್ತಿನ ಆವಶ್ಯಕತೆಯಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಎಪ್ರಿಲ್ 24ರಂದು ಪತ್ರ ಬರೆದಿದ್ದಾರೆ. ಇದನ್ನು ದುಂದುವೆಚ್ಚಗಳನ್ನೆಲ್ಲ ರದ್ದು ಮಾಡಿ ಮಾಡಬಹುದಾಗಿದೆ, ಎಷ್ಟೇ ಬೆಲೆ ತೆತ್ತಾದರೂ ಮಾಡಲೇಬೇಕಾಗಿದೆ ಎಂದು ಅತ್ಯಂತ ಯಾತನೆಯಿಂದ, ಕಳಕಳಿಯಿಂದ ಹೇಳುತ್ತ, ಇಲ್ಲವಾದರೆ **"ನಿಮ್ಮ ಸರಕಾರ ಮುಂದುವರೆಯುವ ನೈತಿಕ ಅಧಿಕಾರವನ್ನು ಕಳಕೊಳ್ಳುತ್ತದೆ"** ಎಂದು ತಮ್ಮ ಪತ್ರದಲ್ಲಿ ಯೆಚುರಿ ಎಚ್ಚರಿಸಿದ್ದಾರೆ. ಅವರ ಪತ್ರದ ಪೂರ್ಣ ಒಕ್ಕಣಿಕೆಯನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಪ್ರಧಾನ ಮಂತ್ರಿಗಳೇ,

ನಾನು ಅಪಾರ ನೋವು, ಯಾತನೆ ಮತ್ತು ಕಳವಳದಿಂದ ನಿಮಗೆ ಬರೆಯುತ್ತಿದ್ದೇನೆ. ಕೊವಿಡ್–19ರ ಎರಡನೇ ಅಲೆ ಸೃಷ್ಟಿಸಿರುವ ಅಭೂತಪೂರ್ವ ಆರೋಗ್ಯ ಮತ್ತು ಮಾನವ ಹಿತದ ಬಿಕ್ಕಟ್ಟು ಒಂದು ಸುನಾಮಿಯಾಗಿ ಪರಿವರ್ತನೆಗೊಳ್ಳುತ್ತಿದೆ. ಈ ಸನ್ನಿವೇಶ ಕೇಂದ್ರ ಸರಕಾರದ ನಿಲುವು ಮತ್ತು ನಡೆಯಿಂದಾಗಿ ಉಲ್ಬಣಗೊಳ್ಳುತ್ತಿದೆ. ಇದರ ವಿವರಗಳಿಗೆ ಹೋಗುವ ಸಮಯವಿದಲ್ಲ, ಏಕೆಂದರೆ, ನಾವೀಗ ನಮ್ಮ ಸಾವಿರಾರು ನಲ್ಮೆಯ ದೇಶಬಾಂಧವರ ಸಾವುಗಳಿಗೆ ಸಂತಾಪ ಪಡುತ್ತಿದ್ದೇವೆ. ಇವು ಖಂಡಿತ ತಡೆಯಬಹುದಾಗಿದ್ದ ಸಾವುಗಳು.

ನಾನು, ತುರ್ತಾಗಿ ಎರಡು ವಿಷಯಗಳನ್ನು ಅತ್ಯಂತ ಆದ್ಯತೆಯಿಂದ ಖಾತ್ರಿಪಡಿಸಬೇಕೆಂದು ನಿಮಗೆ ಬರೆಯುತ್ತಿದ್ದೇನೆ: ದೇಶಾದ್ಯಂತ ಎಲ್ಲ ಆಸ್ಪತ್ರೆಗಳಿಗೆ ಮತ್ತು ರೋಗಿಗಳಿಗೆ ವೈದ್ಯಕೀಯ ಆಕ್ಸಿಜನ್‌ನ ಅಬಾಧಿತ ಪೂರೈಕೆಯನ್ನು, ಯಾವುದೇ ಬೆಲೆ ತೆತ್ತಾದರೂ ಪಡೆದು ಖಾತ್ರಿಪಡಿಸಬೇಕು; ಮತ್ತು ಎಲ್ಲ ರಾಜ್ಯ ಸರಕಾರಗಳಿಗೆ ಒಂದು ಉಚಿತ ಮತ್ತು ಸಾರ್ವತ್ರಿಕ ಲಸಿಕೆ ಕಾರ್ಯಕ್ರಮಕ್ಕಾಗಿ ಲಸಿಕೆಗಳನ್ನು ಒದಗಿಸಬೇಕು, ಇದಕ್ಕಾಗಿ ಇನ್ನಷ್ಟು ಸಾವುಗಳನ್ನು ತಡೆಯಲು ಭಾರತೀಯ ಲಸಿಕೆಗಳ ಉತ್ಪಾದನೆಯನ್ನು ತುರ್ತು ಉಪಬಂಧಗಳ ಅಡಿಯಲ್ಲಿ ತರಬೇಕು ಮತ್ತು ಎಲ್ಲ ಲಭ್ಯ ಮೂಲಗಳಿಂದ ಆಮದು ಮಾಡಬೇಕು.

ಈ ನಿರ್ಧಾರಗಳನ್ನು ಕೈಗೊಳ್ಳಲು ಹಣಕಾಸು ಪರಿಗಣನೆಗಳು ಇರಬಹುದು ಎಂಬುದು ನನಗೆ ತಿಳಿಯುತ್ತದೆ. ತಕ್ಷಣವೇ ಲಸಿಕೆ ಕಾರ್ಯಕ್ರಮಕ್ಕೆ ಬಜೆಟಿನಲ್ಲಿ ನೀಡಿರುವ ರೂ.35,000 ಕೋಟಿ ಯನ್ನು ವೆಚ್ಚ ಮಾಡಬೇಕು. ಈಗಿಂದೀಗಲೇ ದಿಲ್ಲಿಯಲ್ಲಿ ಹೊಸ ಸೆಂಟ್ರಲ್ ವಿಸ್ತಾದ ಪರಿಯೋಜನೆಯನ್ನು ಮತ್ತು ಎಲ್ಲ ದುಂದು ವೆಚ್ಚಗಳನ್ನು ರದ್ದು ಮಾಡಬೇಕು ಮತ್ತು ಪಿಎಂ–ಕೇರ್ಸ್ ನಿಧಿಯ ಅಡಿಯಲ್ಲಿ ಸಂಗ್ರಹಿಸಿರುವ ಎಲ್ಲ ಹಣವನ್ನು ಪಾರದರ್ಶಕವಾಗಿ ಬಿಡುಗಡೆ ಮಾಡಬೇಕು ಹಾಗು ಅದನ್ನು ಆಕ್ಸಿಜನ್ ಮತ್ತು ಲಸಿಕೆಗಳ ಪೂರೈಕೆಗೆ ವರ್ಗಾಯಿಸಬೇಕು ಎಂದು ನಾನು ಅತ್ಯಂತ ಕಳಕಳಿಯಿಂದ ನಿಮ್ಮನ್ನು ಕೋರುತ್ತೇನೆ.

ಒಂದು ವೇಳೆ ನೀವು ನಮ್ಮ ದೇಶಬಾಂಧವರಿಗೆ ಆಕ್ಸಿಜನ್ ಮತ್ತು ಲಸಿಕೆಗಳನ್ನು ಒದಗಿಸಿ ಇನ್ನಷ್ಟು ಸಾವುಗಳನ್ನು ತಡೆಯಲು ಅಸಮರ್ಥರಾದರೆ, ನಿಮ್ಮ ಸರಕಾರ ಮುಂದುವರೆಯುವ ನೈತಿಕ ಅಧಿಕಾರವನ್ನು ಕಳಕೊಳ್ಳುತ್ತದೆ. ಈ ಆರೋಗ್ಯ ಮತ್ತು ಮಾನವ ಹಿತಕ್ಕೆ ಬಂದಿರುವ ವಿಪತ್ತನ್ನು ತಡೆಯಲು ಸಾಧ್ಯವಿದೆ ಮತ್ತು ಅದನ್ನು ತಪ್ಪಿಸಲೇ ಬೇಕು. ಇದು ನಿಮ್ಮ ಸರಕಾರ ನೆರವೇರಿಸಲೇ ಬೇಕಾದ ಮೂಲ ಜವಾಬ್ದಾರಿ. ಇದುವರೆಗೆ ನಿಮ್ಮ ಸರಕಾರ ಇದರಲ್ಲಿ ವಿಫಲವಾಗಿದೆ.

ಇನ್ನಷ್ಟು ಸಮಯ ಕಳೆಯಲು ಸಾಧ್ಯವಿಲ್ಲ, ತಕ್ಷಣವೇ ಕ್ರಮಗಳನ್ನು ಕೈಗೊಳ್ಳಿ–ಎಡಪಕ್ಷಗಳ ಆಗ್ರಹ

ಕೊವಿಡ್ ಮಹಾಸೋಂಕಿನ ವಿರುದ್ಧ್ಲ ಮತ್ತು ಶ್ರಮಿಕ ಜನಗಳ ಹಕ್ಕುಗಳ ರಕ್ಷಣೆಯ ಕಾರ್ಮಿಕ ವರ್ಗದ ಸಮರದಲ್ಲಿ ಎಡಪಕ್ಷಗಳು ಸೇರಿಕೊಳ್ಳುತ್ತವೆ ಎಂದು ಮೇದಿನದ ಸಂದರ್ಭದಲ್ಲಿ ಭಾರತದ ಐದು ಎಡಪಕ್ಷಗಳು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಹೇಳಿವೆ.

ಭಾರತ ಇಂದು ಸ್ವಾತಂತ್ರ್ಯಾನಂತರದ ಅತೀ ಕೆಟ್ಟ ಮಾನವ ಆರೋಗ್ಯ ಬಿಕ್ಕಟ್ಟಿನ ಹಿಡಿತಕ್ಕೆ ಒಳಗಾಗಿದೆ. ಅಷ್ಟೇ ಅಲ್ಲ, ಈ ಮಹಾಸೋಂಕಿನ ಪಿಡುಗು ಇನ್ನಷ್ಟು ತೀವ್ರಗೊಳ್ಳುತ್ತಿದೆ. ಇದನ್ನು ಎದುರಿಸಲು, ಜನಗಳ ಜೀವಗಳು ಮತ್ತು ಜೀವನೋಪಾಯಗಳನ್ನು ರಕ್ಷಿಸಲು ಕೇಂದ್ರ ಸರಕಾರ ಸಮರೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದಿರುವ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಷನ್, ಫರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ಈ ಕೆಳಗಿನ ಕ್ರಮಗಳನ್ನು ತಕ್ಷಣವೇ ಕೈಗೊಳ್ಳುವಂತೆ ಆಗ್ರಹಿಸಿವೆ:

1. ಆಕ್ಸಿಜನ್ ಅನ್ನು ಅಗತ್ಯವಿರುವ ಎಲ್ಲ ಆಸ್ಪತ್ರೆಗಳಿಗೆ ಮತ್ತು ಜನಗಳಿಗೆ ಖಾತ್ರಿಪಡಿಸಬೇಕು.
2. ದೇಶಾದ್ಯಂತ ಒಂದು ಉಚಿತ ಸಾರ್ವತ್ರಿಕ ಲಸಿಕೀಕರಣ ಕಾರ್ಯವನ್ನು ಆರಂಭಿಸಬೇಕು.
3. ಲಸಿಕೆಗಳನ್ನೂ, ಜೀವ ಉಳಿಸುವ ಔಷಧಿಗಳನ್ನೂ ಅವನ್ನು ತಯಾರಿಸಬಲ್ಲ ಸಾಮರ್ಥ್ಯ–ಸೌಕರ್ಯಗಳು ಇರುವ ಎಲ್ಲರೂ ಉತ್ಪಾದಿಸಲು ಸಾಧ್ಯವಾಗುವಂತೆ ಕಾಯ್ದೆಯ 'ಕಡ್ಡಾಯ ಲೈಸೆನ್ಸಿಂಗ್' ಉಪಬಂಧವನ್ನು ಬಳಸಿಕೊಳ್ಳಬೇಕು.
4. ಆವಶ್ಯಕ ಔಷಧಿಗಳ ಮತ್ತು ಆಕ್ಸಿಜನ್‌ನ ಬೆಲೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಮತ್ತು ಅವುಗಳ ಕಳ್ಳ ದಾಸ್ತಾನು ಹಾಗೂ ಕಾಳಸಂತೆಯನ್ನು ನಿಗ್ರಹಿಸಬೇಕು.
5. ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಇಲ್ಲದ ಎಲ್ಲ ಕುಟುಂಬಗಳಿಗೆ ರೂ.7500 ನೇರ ನಗದು ವರ್ಗಾವಣೆ ಮತ್ತು ಅಗತ್ಯ ಇರುವ ಎಲ್ಲರಿಗೆ ಉಚಿತ ಆಹಾರಧಾನ್ಯಗಳ ವಿತರಣೆಯನ್ನು ಮಾಡಬೇಕು.

ಸರಕಾರ ತಕ್ಷಣವೇ ಆಸ್ಪತ್ರೆ ಹಾಸಿಗೆಗಳು, ವೆಂಟಿಲೇಟರುಗಳು, ಐಸಿಯು ಹಾಸಿಗೆಗಳು, ವಿಶೇಷವಾಗಿ ಸೋಂಕು ತ್ವರಿತವಾಗಿ ಹರಡುತ್ತಿರುವ ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯಗೊಳಿಸಬೇಕು.

ಈ ಸರಕಾರ ಒಂದಿಡೀ ವರ್ಷವನ್ನು ವ್ಯರ್ಥಗೊಳಿಸಿದೆ. ಎಡಪಕ್ಷಗಳ ಸಲಹೆ–ಸೂಚನೆಗಳಿಗೆ ಕಿವಿಗೊಡಲಿಲ್ಲ. ಬದಲಿಗೆ ಸ್ಲೋಂಕನ್ನು ದೊಡ್ಡ ಮಟ್ಟದಲ್ಲಿ ಹರಡುವ ಮಹಾ ಸಮಾರಂಭಗಳನ್ನು ಉತ್ತೇಜಿಸಿತು ಎಂದಿರುವ ಎಡಪಕ್ಷಗಳು , ಭಾರತ ಈಗ ಇನ್ನಷ್ಟು ಸಮಯ ಕಳೆಯಲು ಸಾಧ್ಯವಿಲ್ಲ, ಸರಕಾರ ಈಗ ಮಾಡಬಹುದಾದ ಕನಿಷ್ಟ ಕೆಲಸ ಎಂದರೆ ಈ ಮೇಲಿನ ಬೇಡಿಕೆಗಳನ್ನು ಪೂರೈಸುವುದು, ಇಲ್ಲವಾದರೆ ಕೇಂದ್ರ ಸರಕಾರ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಸಂಪೂರ್ಣವಾಗಿ ಕಳಕೊಳ್ಳುತ್ತದೆ ಎಂದು ಎಚ್ಚರಿಸಿವೆ.



ಕಾಮ್ರೇಡ್ ಎಸ್‌ಪಿ. ಕಶ್ಯಪ್ ನಿಧನ

ಉತ್ತರಪ್ರದೇಶದ ಹಿರಿಯ ಸಿಪಿಐ(ಎಂ) ಮುಖಂಡ ಎಸ್.ಪಿ. ಕಶ್ಯಪ್ ಕೊವಿಡ್‌ನಿಂದಾಗಿ ಉಂಟಾದ ಕ್ಲಿಷ್ಟತೆಗಳಿಂದಾಗಿ ಎಪ್ರಿಲ್ 23ರಂದು ನಿಧನರಾಗಿದ್ದಾರೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದ ಅವರು ಹಿಂದೆ ಹಲವು ವರ್ಷಗಳ ಕಾಲ ರಾಜ್ಯ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದರು.

ಶಿಕ್ಷಕ ವೃತ್ತಿಯಿಮದ ನಿವೃತ್ತರಾದ ಮೇಲೆ ಪಕ್ಷಕ್ಕೆ ಪೂರ್ಣಕಾಲ ದುಡಿಯಲಾರಂಭಿಸಿದ ಅವರು ಪಕ್ಷದ ಶಿಕ್ಷಣದ ರಂಗದಲ್ಲಿ ಮಹತ್ವದ ಕೆಲಸ ಮಾಡಿದವರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಶ್ರದ್ಧಾಂಜಲಿ ಅರ್ಪಿಸುತ್ತ, ಅವರು ಅಸಾಧಾರಣ ವಿದ್ವತ್ತಿನ ಮಾರ್ಕ್ಸ್‌ವಾದಿ ಚಿಂತಕರಾಗಿದ್ದರು, ಸಾಮಾನ್ಯ ಕಾರ್ಯಕರ್ತರಿಗೂ ಸುಲಭವಾಗಿ ಅರ್ಥವಾಗುವ ಸರಳ ಭಾಷೆಯಲ್ಲಿ ಅವರು ಪಕ್ಷದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು ಎಂದು ನೆನಪಿಸಿಕೊಂಡಿದ್ದಾರೆ.

"ಐಕ್ಯ ಹೋರಾಟಗಳನ್ನು ಮುಂದೊಯ್ಯುತ್ತೇವೆ, ತೀವ್ರಗೊಳಿಸುತ್ತೇವೆ" ಜಂಟಿ ಮೇ ದಿನಾಚರಣೆ: ಕಾರ್ಮಿಕರು–ರೈತರ ಸಭೆಯ ನಿರ್ಧಾರ

ಎಪ್ರಿಲ್ 28 ರಂದು ನಡೆದ ಕೇಂದ್ರೀಯ ಕಾರ್ಮಿಕ ಸಂಘಟನೆಗಳು, ಜಂಟಿ ವೇದಿಕೆ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಜಂಟಿ ಸಭೆ ಕೇಂದ್ರ ಸರಕಾರದ ಜನ–ವಿರೋದಿ, ರೈತ–ವಿರೋಧಿ ಮತ್ತು ಕಾರ್ಮಿಕ–ವಿರೋದಿ ವಿನಾಶಕಾರೀ ಧೋರಣೆಗಳ ವಿರುದ್ಧ ಜಂಟಿ ಹೋರಾಟವನ್ನು ಮುಂದೊಯ್ಯಲು ಮತ್ತು ತೀವ್ರಗೊಳಿಸಲುಎಂದು ನಿರ್ಧರಿಸಿದೆ.

ರೈತ ಕೃಷಿಯನ್ನು ಮತ್ತು ರಾಷ್ಟ್ರೀಯ ಅರ್ಥವ್ಯವಸ್ಥೆಯ ದೇಶೀ ತಯಾರಕ ಸಾಮರ್ಥ್ಯವನ್ನು ಧ್ವಂಸಗೊಳಿಸುವ ವಿನಾಶಕಾರೀ ಧೋರಣೆಗಳ ವಿರುದ್ಧ ಹೋರಾಟಗಳಲ್ಲಿ ದೇಶದ ಎರಡು ಪ್ರಧಾನ ಉತ್ಪಾದಕ ಶಕ್ತಿಗಳಾದ ರೈತರು ಮತ್ತು ಕಾರ್ಮಿಕರ ನಡುವೆ ಸೌಹಾರ್ದದ ಬಂಧಗಳು ಗಟ್ಟಿಗೊಂಡಿವೆ ಎಂದು ಸಭೆ ಗಮನಿಸಿತು. ಮೂರು ಪ್ರತಿಗಾಮಿ ಕೃಷಿ ಕಾಯ್ದೆಗಳು ಮತ್ತು ಎಲ್ಲ ಉದ್ದಿಮೆಗಳು, ಸೇವೆಗಳ ಮತ್ತು ದೇಶದ ಸಂಪನ್ಮೂಲಗಳ ಮಾತ್ರವಲ್ಲ, ಶಿಕ್ಷಣ ಮತ್ತು ಆರೋಗ್ಯ ವಲಯದ ವಿಚಾರಶೂನ್ಯ ಖಾಸಗೀಕರಣದ ಧಾವಂತದಲ್ಲಿದೆ ಈ ಸರಕಾರ. ಅದೇ ವೇಳೆಗೆ ಕಾರ್ಮಿಕ ಸಂಹಿತೆಗಳ ಮೂಲಕ, ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ ಮತ್ತು ಇತರ ಪ್ರಜಾಪ್ರಭುತ್ವ ಹಕ್ಕುಗಳ ದಮನದ ಮೂಲಕ ಗುಲಾಮಗಿರಿಯ ಪರಿಸ್ಥಿತಿಗಳನ್ನು ಹೇರಲಾಗುತ್ತಿದೆ, ದೇಶ ಫ್ಯಾಸಿಸ್ಟ್ ಆಶಯದ ಸರ್ವಾಧಿಕಾಶಾಹೀ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಸಭೆ ಖಂಡಿಸಿತು.

ಇಂತಹ ಬರ್ಬರ ಮತ್ತು ವಿನಾಶಕಾರೀ ನಿಲುವುಗಳು ಕೊವಿಡ್ ಮಹಾಸೋಂಕಿನ ಎರಡನೇ ಅಲೆಯನ್ನು ನಿಭಯಿಸುವಲ್ಲಿಯೂ ಬಿಂಬಿತವಾಗುತ್ತಿದೆ. ಇದರಿಂದ ತಪ್ಪಿಸಬಹುದಾಗಿದ್ದ ಸಾವು–ನೋವುಗಳು ಇಡೀ ದೇಶವನ್ನು ಆವರಿಸಿಕೊಳ್ಳುವಂತಾಗಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕಳಚಿ ಹಾಕಿದ ಪರಿಣಾಮವಾಗಿ ಉಂಟಾಗಿರುವ ಅಗಣಿತ ಸಮಸ್ಯೆಗಳು ಒಂದು ಕಡೆಯಾದರೆ, ಈ ಸರಕಾರ ಪ್ರಕಟಿಸಿರುವ ಪ್ರತಿಗಾಮಿ ಲಸಿಕೆ ಧೋರಣೆ ಕೂಡ ಜನಗಳನ್ನು ಬಲಿಗೊಡುವ ಲಾಭಕೋರತನಕ್ಕೆ ಉತ್ತೇಜನೆ ಕೊಡುತ್ತಿದೆ ಎಂದಿರುವ ಸಭೆ ಮೋದಿ ಸರಕಾರದ ಇಂತಹ ಬರ್ಬರ ಧೋರಣೆಗಳನ್ನು ಕಾಮಿಕರು ಮತ್ತು ರೈತರು ಬಲವಾಗಿ ಖಂಡಿಸುವದಾಗಿ ಹೇಳಿದೆ.

ಮೇದಿನವನ್ನು ರೈತರು ಮತ್ತು ಕಾರ್ಮಿಕರು ಜಂಟಿಯಾಗಿ ಆಚರಿಸಬೇಕು ಎಂದು ಸಭೆ ಕರೆ ನೀಡಿದೆ. ಸಾಧ್ಯವಾದಷ್ಟು ಹೆಚ್ಚು ಸ್ಥಳಗಳಲ್ಲಿ ಕಾರ್ಮಿಕರ, ರೈತರ ಮತ್ತು ಜನಗಳ ಹಕ್ಕುಗಳನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಮೇದಿನಾಚರಣೆ ನಡೆಸಲಾಗುವುದು ಎಂದಿರುವ ಸಭೆ ಈ ಕೆಳಗಿನ ಬೇಡಿಕೆಗಳ ಮೇಲೆ ಗಮನ ಕೇಂದ್ರೀಕರಿಸಲಾಗುವುದು ಎಂದಿದೆ:

1. ಕಾರ್ಮಿಕ ಸಂಹಿತೆಗಳು, ಕೃಷಿ ಕಾಯ್ದೆಗಳು, ವಿದ್ಯುತ್ ತಿದ್ದುಪಡಿ ಮಸೂದೆ ರದ್ದಾಗಬೇಕು.
2. ವಿನಾಶಕಾರೀ ಲಸಿಕೆ ಧೋರಣೆ ರದ್ದಾಗಬೇಕು, ಎಲ್ಲರಿಗೂ ಉಚಿತ, ಸಾರ್ವತ್ರಿಕ, ಸಾಮೂಹಿಕ ಲಸಿಕೀಕರಣವನ್ನು ಖಾತ್ರಿಪಡಿಸಬೇಕು
3. ಎಲ್ಲ ಕೃಷಿ ಉತ್ಪನ್ನಗಳಿಗೆ ಸಿ2+50% ದರದಲ್ಲಿ ಕನಿಷ್ಟ ಬೆಂಬಲ ಬೆಲೆಗಳ ಮತ್ತು ಆ ಬೆಲೆಗಳಲ್ಲಿ ಖರೀದಿಯ ಖಾತ್ರಿ.
4. ಖಾಸಗೀಕರಣ/ಶೇರು ಹಿಂಪಡಿಕೆ ಮತ್ತು ಕಾರ್ಪೊರೇಟೀಕರಣದ ನಡೆ ನಿಲ್ಲಬೇಕು.

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಮತ್ತೆ ಮೇ ಮಧ್ಯಭಾಗದಲ್ಲಿ ಸಭೆ ಸೇರಿ ಜಂಟಿ ಕಾಯಾಚರಣೆಗಳ ಮುಂದಿನ ದಾರಿಯನ್ನು ಮೂರ್ತಗೊಳಿಸುತ್ತಾರೆ ಎಂದು ಈ ಸಭೆಯ ನಂತರ ನೀಡಿರುವ ಪತ್ರಿಕಾ ಹೇಳಿಕೆ ತಿಳಿಸಿದೆ.

ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ಈ ಜಂಟ ಹೇಳಿಕೆಗೆ ಸಹಿ ಮಾಡಿದ್ದಾರೆ.

ಸಂಪಾದಕೀಯ

ಮಂತ್ರಿ ಕತ್ತಿ ರಾಜಿನಾಮೆ ಕೊಡಲಿ

ಉದ್ಧಟತನ ಮಾತುಗಳಿಗೆ ಕುಖ್ಯಾತರಾಗಿರುವ ಆಹಾರ ಮತ್ತು ನಾಗರಿಕ ಪೂರೈಕೆ ಮಂತ್ರಿಗಳಾದ ಉಮೇಶ್ ಕತ್ತಿಯವರು ಇತ್ತೀಚೆಗೆ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಇವರು ಉತ್ತರ ಕರ್ನಾಟಕದ ಹಿರಿಯ ಸಚಿವರೂ ಹೌದು. ಪಡಿತರ ಅಕ್ಕಿಯನ್ನು 2 ಕೆ.ಜಿ.ಗೆ ಇಳಿಸಿಬಿಟ್ಟಿದ್ದಿರಲ್ಲಾ ಅದು ಸಾಕಾಗುತ್ತಾ ಎಂದು ಬೆಳಗಾವಿಯಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬರು ಅವರನ್ನು ಪ್ರಶ್ನೆ ಮಾಡಿದಾಗ, ನಿನಗೆ ಸಾಕಾಗದಿದ್ದರೆ ಎಲ್ಲಾದರೂ ಹೋಗಿ ಸತ್ತು ಬಿಡು ಎಂದು ಕತ್ತಿಯವರು ದುರಂಕಾರದ ಮಾತುಗಳನ್ನು ಹೇಳಿದ್ದಾರೆ. ಸಚಿವರ ಈ ಉದ್ಧಟತನದ ಮಾತುಗಳು ವ್ಯಾಪಕ ಖಂಡನೆಗೆ ಗುರಿಯಾಗಿವೆ.

ಸಚಿವರಾದ ಉಮೇಶ್ ಕತ್ತಿಯವರು ಈ ರೀತಿ ಬೇಜವಾಬ್ದಾರಿಯುತ ಮಾತನಾಡುವುದು ಇದೇ ಮೊದಲ ಸಲವಲ್ಲ. ಮನೆಯಲ್ಲಿ ದ್ವಿಚಕ್ರ ವಾಹನ ಹೊಂದಿದವರಿಗೆ ಪಡಿತರ ಚೀಟಿಯನ್ನು ಕೊಡಲಾಗುವುದಿಲ್ಲ ಎಂದು ಹೇಳಿದವರು ಇವರೇ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಆಗಬೇಕೆಂದು ಆಗಾಗ ಪ್ರಸ್ತಾಪಿಸಿ ಕನ್ನಡಿಗರ ಖಂಡನೆಗೆ ಆಗಗ ಒಳಗಾಗುತ್ತಿರುವವರು ಇವರೇ.

ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಜನಜೀವನ ಚಿಂತಾಜನಕವಾಗುತ್ತಿದೆ. ಜನಸಾಮಾನ್ಯರು ಪೌಷ್ಟಿಕ ಆಹಾರದ ಕೊರತೆಯನ್ನು ಅನುಭವಿಸುತ್ತಿದ್ದು ರೋಗ ನಿರೋಧಕ ಶಕ್ತಿಯ ಕೊರತೆಯಿಂದ ಸಾವನ್ನಪ್ಪುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಗುಣಮಟ್ಟದ ಆಹಾರವನ್ನು ಪೂರೈಸಿ ಜನರನ್ನು ಕಾಪಾಡುವುದು ಸರ್ಕಾರದ ಆದ್ಯತೆಯ ಕರ್ತವ್ಯ. ಈಗ ನೀಡಲಾಗುತ್ತಿರುವ ಪಡಿತರವನ್ನು ಅಗತ್ಯ ಪ್ರಮಾಣದಲ್ಲಿ ಹೆಚ್ಚಿಸುವುದನ್ನು ಬಿಟ್ಟು ಪಡಿತರ ಅಕ್ಕಿಯನ್ನು ಕಡಿತ ಮಾಡಲು ಮಂತ್ರಿಗಳು ಯೋಚಿಸುತ್ತಿರುವುದು ಅಕ್ಷಮ್ಯವಾಗಿದೆ.

ಸಾವಿರಾರು ಜನ ಸಾವನ್ನಪ್ಪುತ್ತಿರುವುದಕ್ಕೆ ಸರ್ಕಾರದ ಬೇಜವಾಬ್ದಾರಿತನವೇ ಕಾರಣವಾಗಿದೆ. ಒಳ್ಳೆಯ ಹಾಗೂ ಅಗತ್ಯ ಪ್ರಮಾಣದಲ್ಲಿ ಆಹಾರ ದೊರೆಯದೆ ಜನಗಳು ರೋಗ ನಿರೋಧಕ ಶಕ್ತಿಯನ್ನು ಬಲಪಡಿಸಲು ಹೇಗೆ ಸಾಧ್ಯ? ಕಳೆದ ಸಲ ಕೋವಿಡ್ ಸೋಂಕಿತರು ದೊಡ್ಡ ಪ್ರಮಾಣದಲ್ಲಿ ಮರಣ ಹೊಂದಲು ಒಳ್ಳೆಯ ಗುಣಮಟ್ಟ ಆಹಾರ ಅಗತ್ಯ ಪ್ರಮಾಣದಲ್ಲಿ ದೊರೆಯದಿರುವುದು ಒಂದು ಪ್ರಮುಖ ಕಾರಣವಾಗಿದೆ. ಇದರಿಂದ ಸರ್ಕಾರ ಪಾಠ ಕಲಿತು ಜನರಿಗೆ ನೀಡುವ ಪಡಿತರವನ್ನು ಕಡಿತ ಮಾಡುವ ಬದಲಾಗಿ ಅದರ ಪ್ರಮಾಣ ಹೆಚ್ಚಿಸಬೇಕು. ಒಂದು ಕುಟುಂಬಕ್ಕೆ 10 ಕೆ.ಜಿ. ಅಕ್ಕಿಯನ್ನು ವಿತರಣೆ ಮಾಡಬೇಕು. ಹಾಗೂ ಅವರವರ ಬೇಡಿಕೆಯಂತೆ ಗೋಧಿ, ಜೋಳ, ರಾಗಿ ಅಲ್ಲದೆ ಬೇಳೆ, ಸಕ್ಕರೆ, ಅಡುಗೆ ಎಣ್ಣೆ ಮೊದಲಾದ ಅಗತ್ಯ ವಸ್ತುಗಳನ್ನು ಪೂರೈಸಬೇಕು. ಆಹಾರದ ಕಿಟ್‌ಗಳನ್ನು ಹಾಗೂ ಔಷಧಿ ಕಿಟ್‌ಗಳನ್ನು ನೀಡಬೇಕು. ಕೇವಲ ಆಹಾರದಾನ್ಯ ಕೊಟ್ಟರೆ ಸಾಲದು ತಿಂಗಳಿಗೆ ಕನಿಷ್ಟ ರೂ. 7500 ದರದಲ್ಲಿ ಆರ್ಥಿಕ ನೆರವು ನೀಡಬೇಕು.

ಹಲವಾರು ತಿಂಗಳುಗಳಿಂದ ದಿನಗೂಲಿ, ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರಿಗೆ ಬಾಕಿ ಇರುವ ವೇತನವನ್ನು ಸಂದಾಯ ಮಾಡಬೇಕು. ಕತ್ತಿಯವರ ಬೇಜವಾಬ್ಧಾರಿತನದ ಮಾತುಗಳಿಗೆ ವ್ಯಕ್ತವಾದ ಜನರ ಆಕ್ರೋಶವನ್ನು ಗಂಭೀರವಾಗಿ ಪರಿಗಣಿಸಬೇಕು. ಕತ್ತಿಯವರ ಪರ ಮುಖ್ಯಮಂತ್ರಿ ಕ್ಷಮೆ ಕೇಳಿರುವುದು ಸಾಲದು: ಇದು ಕತ್ತಿಯವರ ಹುಟ್ಟುಗುಣ್ಣ ಎಂಬಂತೆ ಕಾಣುತ್ತದೆ; ಮುಖ್ಯಮಂತ್ರಿಗಳು ಕತ್ತಿಯವರನ್ನು ಮುಲಾಜಿಲ್ಲದೆ ಸಚಿವ ಸಂಪುಟದಿಂದ ಕೈಬಿಡಬೇಕು.

ಜಿಂದಾಲ್ ಗೆ ಮಾರಾಟ ಮಾಡಿದ ಭೂ ಬೆಲೆಯಿಂದ ಸರಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ–ಸಿಪಿಐಎಂ ಖಂಡನೆ

ರಾಜ್ಯದ ಜನತೆಯನ್ನು ದುರುದ್ದೇಶದಿಂದಲೇ ಮಾರಣಾಂತಿಕ ಸಂಕಷ್ಟಕ್ಕೆ ದೂಡಿದ ರಾಜ್ಯ ಸರಕಾರ ಇಡೀ ರಾಜ್ಯದ ಜನತೆ ಆತಂಕದಲ್ಲಿರುವಾಗಲೇ ಒಳಗಿಂದೊಳಗೆ ಜನತೆಗೆ ತಿಳಿಸದೇ ಮೋಸದಿಂದ, 3,600 ಎಕರೆ ಜಮೀನುಗಳನ್ನು ಕೇವಲ ತಲಾ ಎಕರೆಗೆ 1.2 ಲಕ್ಷದಿಂದ 1.5 ಲಕ್ಷ ರೂಗಳಿಗೆ ಮಾರಾಟವೂ ಸೇರಿದ ಗುತ್ತಿಗೆ ಒಪ್ಪಂದದಂತೆ ಜಿಂದಾಲ್ ಕಂಪನಿಗೆ ಮಾರಾಟ ಮಾಡಿ ಸರಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಗಳ ನಷ್ಟ ಉಂಟು ಮಾಡಿರುವ ಶ್ರೀ ಯೆಡೆಯೂರಪ್ಪನವರ ಮಂತ್ರಿ ಮಂಡಲದ ವಂಚನೆಯ ಕ್ರಮವನ್ನು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ಬಲವಾಗಿ ಖಂಡಿಸುತ್ತದೆ. ಮಾತ್ರವಲ್ಲಾ ತಕ್ಷಣವೇ ಈ ಮೋಸದ ಮಾರಾಟವನ್ನು ವಾಪಾಸು ಪಡೆಯಬೇಕೆಂದು ಬಲವಾಗಿ ಒತ್ತಾಯಿಸಿದೆ.



ರಾಜ್ಯ ಸರಕಾರ 27 ಎಪ್ರೀಲ್ 2021 ರಂದು ನಡೆದ ಮಂತ್ರಿ ಮಂಡಲದ ಸಭೆಯಲ್ಲಿ ಈ ಅಕ್ರಮದ ನಿರ್ಣಯ ಕೈಗೊಂಡಿದೆ. ಈ ಹಿಂದೆ ಇಂತಹದ್ದೇ ಕ್ರಮವಹಿಸಿದಾಗ ಜನತೆಯ ತೀವ್ರ ಪ್ರತಿರೋಧದಿಂದಾಗಿ ವಾಪಾಸು ಪಡೆಯಲಾಗಿತ್ತು. ಈಗ ಪುನಃ ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ, ಅದೇ ಅಕ್ರಮ ದರಕ್ಕೆ ಮಾರಾಟ ಮಾಡಲು ಕ್ರಮವಹಿಸಿದೆ.

ಜಿಂದಾಲ್ ಕಂಪನಿಯಿಂದ ಕೇವಲ 10 ಕಿ.ಮೀ ದೂರದಲ್ಲಿ ಲಕ್ಷ್ಮಿ ಮಿತ್ತಲ್ ಕಂಪನಿಗೆ ನೀಡಿದ ಜಮೀನುಗಳ ಬೆಲೆಯನ್ನು ಸರಕಾರವೇ ಕೆಐಎಡಿಬಿ ಮೂಲಕ 2010 ರಲ್ಲಿ ತಲಾ ಎಕರೆಗೆ 8, 10 ಹಾಗೂ 12 ಲಕ್ಷ ರೂಗಳೆಂದು ನಿಗದಿಸಿ ರೈತರಿಂದ ಖರೀದಿಸಿದೆ. ಈ ಜಮೀನುಗಳ ಕೆಲ ಭಾಗಗಳನ್ನು ಕೆಐಎಡಿಬಿ ತಲಾ ಎಕರೆಗೆ 54 ಲಕ್ಷ ರೂಗಳೆಂದು ನಿಗದಿಸಿ ಸಣ್ಣ ಕೈಗಾರಿಕೆಗಳಿಗೆ ಮಾರಾಟ ಮಾಡುತ್ತಿದೆ. ಸದರಿ ಜಮೀನುಗಳ ಭೂ ಬೆಲೆ, ಮೋಸದ ಬೆಲೆಯೆಂದು ಹಾಗೂ ಅದು ಅತ್ಯಂತ ಕಡಿಮೆಯೆಂದು ಜಿಲ್ಲಾ ನ್ಯಾಯಾಲಯದಲ್ಲಿ ರೈತರು ದಾವೆ ಹೂಡಿದಾಗ ಜಿಲ್ಲಾ ನ್ಯಾಯಾಲಯವು ಸದರಿ ಜಮೀನುಗಳಿಗೆ ತಲಾ ಎಕರೆಗೆ 30 ಲಕ್ಷಕ್ಕೂ ಅಧಿಕ ರೂ. ಗಳ ಬೆಲೆಯನ್ನು ನಿಗದಿಸಿದೆ. ಅದೇ ರೀತಿ, ಜಿಂದಾಲ್ ಕಂಪನಿಯ ಬಳಿಯೇ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಾಗಿ ತಲಾ ಎಕರೆ ಜಮೀನನ್ನು 32 ಲಕ್ಷ ರೂ. ಗಳಿಗೆ ಖರೀದಿಸಲಾಗಿದೆ. ಸ್ವತಃ ಜಿಂದಾಲ್ ಕಂಪನಿಯೇ ತಲಾ ಎಕರೆಗೆ 6 ಲಕ್ಷ ರೂ. ಗಳ ಬೆಲೆಯಲ್ಲಿ ಕೆರೆ ನಿರ್ಮಾಣಕ್ಕೆಂದು ಖರೀದಿಸಿದೆ.

ಪರಿಸ್ಥಿತಿ ಹೀಗಿರುವಾಗ, ಪ್ರತಿ ಎಕರೆಗೆ ಕೇವಲ 1.2 ಮತ್ತು 1.5 ಲಕ್ಷ ರೂಗಳಿಗೆ ಮಾರಾಟಕ್ಕೆ ಮುಂದಾಗಿರುವುದು ಅಕ್ಷಮ್ಯವಾಗಿದೆ. ಮಾತ್ರವಲ್ಲಾ, ಇದರಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದಕ್ಕೆ ಅವಕಾಶಗಳಿವೆ. ವಾಸ್ತವಿಕವಾಗಿ ಈ ಪ್ರದೇಶದಲ್ಲಿ ಸರಕಾರ ನಿಗದಿಸಿದ ಬೆಲೆಗೆ 30*40 ಚ.ಅಡಿ. ನಿವೇಶನದ ಜಾಗವು ದೊರೆಯುವುದಿಲ್ಲ.

ಇಡೀ ರಾಜ್ಯದ ಜನತೆ ಕೋವಿಡ್ ಸಂಕಷ್ಟದಲ್ಲಿದೆ. ಆಸ್ಪತ್ರೆ, ಬೆಡ್, ವೆಂಟಿಲೇಟರ್, ಆಮ್ಲಜನಕ, ಶೂಶ್ರುಕರ ಭಾರೀ ಕೊರತೆಯನ್ನು ಎದುರಿಸುತ್ತಿರುವಾಗ ಮತ್ತು ಅದಕ್ಕಾಗಿ ಹೂಡಲು ಸರಕಾರದ ಬಳಿ ಬಜೆಟ್ ಕೊರತೆ ಇದೆ ಎನ್ನುವಾಗ ಈ ರೀತಿಯ ಅಕ್ರಮವು ಖಂಡಿತಾ ಅಕ್ಷಮ್ಯವಾಗಿದೆ ಎಂದು ಸಿಪಿಐ(ಎಂ) ಪಕ್ಷವು ಆರೋಪಿಸಿದೆ.

ಉಚಿತ ಲಸಿಕೆ ಹಾಗೂ ಅಗತ್ಯ ನೆರವು ಕೇಂದ್ರ ಸರಕಾರ ಒದಗಿಸಲಿ – ಸಿಪಿಐಎಂ ಒತ್ತಾಯ



ಇಡೀ ದೇಶವೇ ಸಂಕಷ್ಟದಲ್ಲಿದೆ. ರಾಜ್ಯಗಳಿಗೆ ನೀಡಬೇಕಾದ ಕೋವಿಡ್ ಪರಿಹಾರದ ನೆರವನ್ನು ಮತ್ತು ಜಿ.ಎಸ್.ಟಿ ಬಾಕಿ ಹಣವನ್ನು ಕೇಂದ್ರ ಸರಕಾರ ನೀಡದೇ ಸತಾಯಿಸುತ್ತಿರುವುದನ್ನು ಮತ್ತು ಇದೀಗ ಕೇಂದ್ರ ಸರಕಾರಕ್ಕೆ ಕೇವಲ 150 ರೂಗಳಿಗೆ ಸಿಗುವ ಕೋವಿಡ್ ಲಸಿಕೆಯನ್ನು ರಾಜ್ಯಗಳು 400 ರೂಗಳಿಗೆ ತಲಾ ಡೋಸ್ ಖರೀದಿಸುವಂತೆ ಒತ್ತಾಯಿಸುವ ಕೇಂದ್ರ ಸರಕಾರದ ದೌರ್ಜನ್ಯದ ಕ್ರಮಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ.ರಾಜ್ಯಕ್ಕೆ ಕೊಡಬೇಕಾದ ಎಲ್ಲ ಬಾಕಿ ಹಣವನ್ನು ಮತ್ತು ಕೋವಿಡ್ ನೆರವನ್ನು ತಕ್ಷಣ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತದೆ ಮತ್ತು ರಾಜ್ಯಗಳ ಜನತೆಗೆ ಉಚಿತ ಕೋವಿಡ್ ಲಸಿಕೆಯನ್ನು ಕೇಂದ್ರ ಸರಕಾರವೇ ಒದಗಿಸಬೇಕೆಂದು ಪ್ರಧಾನ ಮಂತ್ರಿಗಳನ್ನು ಬಲವಾಗಿ ಆಗ್ರಹಿಸುತ್ತದೆ. ಇದಕ್ಕಾಗಿ ದೇಶದಾದ್ಯಂತ ಸಂಗ್ರಹಿಸಲಾದ ಸಾವಿರಾರು ಕೋಟಿ ರೂಗಳ ಭಾರೀ ಮೊತ್ತ ಪ್ರಧಾನ ಮಂತ್ರಿ ಕೇರ್ಸ್ ಫಂಡನ್ನು ಬಳಸಬೇಕೆಂದು ಒತ್ತಾಯಿಸಿದೆ.

ತಜ್ಞರ ಮುನ್ನೆಚ್ಚರಿಕೆಯ ಸೂಚನೆಯ ನಡುವೆಯೂ, ತಮ್ಮ ಸರಕಾರದ ಜವಾಬ್ದಾರಿ ರಹಿತ ನಡೆಯಿಂದ ಕೋವಿಡ್ ಎರಡನೇ ಅಲೆಗೆ ಜನತೆ ದೊಡ್ಡ ಸಂಖ್ಯೆಯಲ್ಲಿ ಸಾವಿಗೀಡಾಗುವಂತಾಗಿದೆ ಮತ್ತು ಅದು ಅತ್ಯಂತ ವೇಗವಾಗಿ ಹರಡಲು ಕಾರಣವಾಗಿದೆ. ಕರ್ನಾಟಕದಲ್ಲಿ ಹೆಚ್ಚಾಗುತ್ತಿರುವ ಸೋಂಕಿತರ ಸಂಖ್ಯೆಯ ವೇಗವನ್ನು ಗಮನಿಸಿದಲ್ಲಿ ರಾಜ್ಯದಲ್ಲಿನ ಈಗಿನ ಆಸ್ಪತ್ರೆ ಮತ್ತು ಶೂಶ್ರುಸೆಯ ವ್ಯವಸ್ಥೆ ಸಾಲದಾಗಿದೆ. ಅದಕ್ಕಾಗಿ, ಶಾಲಾ, ಕಾಲೇಜ್, ಹಾಸ್ಟೆಲ್ ಮತ್ತು ಕಲ್ಯಾಣ ಮಂಟಪ, ಹೋಟೆಲ್ ಮುಂತಾದವುಗಳನ್ನು ಬಳಸಿಕೊಳ್ಳಲು ಕೇಂದ್ರ ಸರಕಾರದ ನೆರವು ಅಗತ್ಯವಿದೆ.

ಪುಟ 4 ಕ್ಕೆ

ರೈತರ ಬೆಳೆಗಳಿಗೆ ಸೂಕ್ತ ಬೆಂಬಲ ಬೆಲೆ ನೀಡಿ ಖರೀದಿಸಲು ಪ್ರಾಂತ ರೈತ ಸಂಘ ಆಗ್ರಹ

ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸಿ ಮತ್ತು ತಕ್ಷಣವೇ ಖರೀದಿ ಕೇಂದ್ರಗಳನ್ನು ತೆರೆದು ಭತ್ತ, ಶೇಂಗಾ, ಈರುಳ್ಳಿ ಖರೀದಿಸಬೇಕು ಮತ್ತು ರೇಷ್ಮೇ ಗೂಡಿಗೆ ಸೂಕ್ತವಾದ ಬೆಂಬಲ ಘೋಷಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್ಎಸ್) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಈ ಬಗ್ಗೆ ಕೆಪಿಆರ್ಎಸ್ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಮತ್ತು ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ಅವರು ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಕೂಡಲೇ ರೈತರ ಸಮಸ್ಯೆಗಳ ಕಡೆ ಗಮನ ಹರಿಸಬೇಕೆಂದು ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯವು ಕೋವಿಡ್ –19 ಬಿಕ್ಕಟ್ಟಿನಿಂದ ತೀವ್ರವಾಗಿ ಬಾದಿಸಲ್ಪಟ್ಟಿದೆ. ಈಗ ರಾಜ್ಯ ಸರಕಾರವು ಮತ್ತೊಮ್ಮೆ ಹದಿನೈದು ದಿನಗಳ ಕಾಲ ದಿಢೀರ್ ಎಂದು ಲಾಕ್‌ಡೌನ್ ಘೋಷಿಸಿರುವುದರಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಸಂಘಟನೆ ಆರೋಪಿಸಿದೆ.



ಕಳೆದ ವರ್ಷದ ಮುಂಗಾರು ಬೆಳೆಗಳಿಗೆ ರಾಜ್ಯ ಸರಕಾರ ಕನಿಷ್ಟ ಬೆಂಬಲ ಬೆಲೆಗೆ ಯಾವುದೇ ಬೋನಸ್ ಘೋಷಿಸಲಿಲ್ಲ. ಮಾತ್ರವಲ್ಲಾ, ಕೇಂದ್ರ ಸರಕಾರ ಘೋಷಿಸಿದ ಕನಿಷ್ಠ ಬೆಂಬಲ ಬೆಲೆಗೂ ಖರೀದಿಸುವ ಕಾರ್ಯವನ್ನು ಮಾಡಲಿಲ್ಲ. ಹೀಗಾಗಿ ರಾಜ್ಯದ ಭತ್ತ, ತೊಗರಿ, ಜೋಳ, ರಾಗಿ, ಮೆಕ್ಕೆಜೋಳ, ಈರುಳ್ಳಿ, ಹತ್ತಿ, ಒಣವ್ಂಣಸಿನ್ ಕಾಯಿ ಮುಂತಾದ ಬೆಳೆಗಾರರು ತಲಾ ಕ್ವಿಂಟಾಲ್ ಬೆಳೆಗೆ ಸರಾಸರಿ 1,000 ರೂ. ಗಳಿಗೂ ಅಧಿಕ ನಷ್ಟವನ್ನು ತಲಾ ಎಕರೆಗೆ ಕನಿಷ್ಠವೆಂದರೂ 15 ರಿಂದ 35 ಸಾವಿರ ರೂ. ಗಳ ನಷ್ಟ ಹೊಂದಿದ್ದಾರೆ.

2020-21						
ಕ್ರ. ಸಂ.	ಬೆಳೆಗಳು	ನಿಗದಿತ ಕನಿಷ್ಠ ಬೆಂಬಲ ಬೆಲೆ	ಮುಂಗಾರು ಮಾರುಕಟ್ಟೆ ದರ	ಹಿಂಗಾರು ಮಾರುಕಟ್ಟೆ ದರ	ಕನಿಷ್ಠ ನಷ್ಟ - ರೂ.	
					ಮುಂಗಾರು	ಹಿಂಗಾರು
01	ಭತ್ತ	1,200 1,400	1,880	1,200 1,400	480	480
02	ರಾಗಿ	1,700	3,295		1,600	
03	ಜೋಳ	2,000	2,620		620	
04	ತೊಗರಿ	5,500	6,000		500	
05	ಶೇಂಗಾ	4,200	4,890	4,500	690	390
06	ಹತ್ತಿ	4,800	5,150		350	
07	ಈರುಳ್ಳಿ	3,000		950		
08	ಮೆಕ್ಕೆಜೋಳ	1,400	1,700		300	

ಭತ್ತಕ್ಕೆ ಕೇಂದ್ರ ಸರಕಾರ 1880 ರೂಪಾಯಿಗಳನ್ನು ಘೋಷಿಷಿದೆ. ಕರ್ನಾಟಕ ಸರಕಾರ ಯಾವುದೇ ಬೋನಸ್ ಘೋಷಿಸಲಿಲ್ಲ. ಪಕ್ಕದ ಕೇರಳ ರಾಜ್ಯ ಪ್ರತಿ ಕ್ವಿಂಟಾಲ್ ಗೆ 900 ರೂ ಬೋನಸ್ ಘೋಷಿಸಿದೆ. ಕರ್ನಾಟಕದಲ್ಲಿ ಮುಂಗಾರು ಹಾಗೂ ಈಗ ಹಿಂಗಾರುಗಳಲ್ಲಿ ಮಾರುಕಟ್ಟೆಯಲ್ಲಿ ಭತ್ತಕ್ಕೆ ಸಿಕ್ಕಿರುವುದು ಮತ್ತು ಸಿಗುತ್ತಿರುವುದು ತಲಾ ಕ್ವಿಂಟಾಲ್‌ಗೆ ಕೇವಲ 1200 ರೂ. ಗಳಿಂದ 1400 ರೂ. ಗಳು ಮಾತ್ರ.

ಕೇರಳ ಸರಕಾರ ಘೋಷಿಸಿದ ಬೋನಸ್ ಸೇರಿಸಿ ಲೆಕ್ಕಿಸಿದರೇ ಕರ್ನಾಟಕದ ಭತ್ತ ಬೆಳೆಗಾರರು ಪ್ರತಿ ಕ್ವಿಂಟಾಲ್‌ಗೆ ಕನಿಷ್ಟ 1400 ರೂ. ಗಳ ಮತ್ತು ತಲಾ ಎಕರೆಗೆ 140್25=35,000 ರೂ. ನಷ್ಟ ಹೊಂದಿದ್ದಾರೆ. ಕೇರಳ ಸರಕಾರ ಅಲ್ಲಿನ ಭತ್ತ, ತೊಗರಿ ಮತ್ತಿತರೇ ಬೆಳೆಗಾರರಿಗೆ ಪ್ರತಿ 2.5 ಎಕರೆಗೆ 20,000 ರಿಂದ 30,000 ರೂ. ಗಳ ನೆರವು ನೀಡುತ್ತಿದೆ. ಕರ್ನಾಟಕ ಇಂತಹ ಯಾವುದೇ ನೆರವನ್ನು ನೀಡುತ್ತಿಲ್ಲ.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರಕಾರದ ನಿರ್ಲಕ್ಷ್ಯದ ಕಾರಣದಿಂದ ರಾಜ್ಯದಾದ್ಯಂತ ಹಲವು ದಶ ಸಾವಿರ ಕೋಟಿ ರೂ. ಗಳ ನಷ್ಟವನ್ನು ನಮ್ಮ ರೈತರು ಅನುಭವಿಸಿದ್ದಾರೆ ಎಂದು ಕೆಪಿಆರ್ಎಸ್ ಆರೋಪಿಸಿದೆ.

ಈಗಲೂ ಸಹ ಹಿಂಗಾರು ದಿನಗಳು ಆರಂಭವಾಗಿದ್ದು ರಾಜ್ಯದ ಭತ್ತ ಬೆಳೆಗಾರರು ಕೇಂದ್ರ ಸರಕಾರದ ಬೆಂಬಲ ಬೆಲೆಗಿಂತ ಪ್ರತಿ ಕ್ವಿಂಟಾಲ್ ಗೆ ಸುಮಾರು 500 ರೂ. ಗಳಷ್ಟು, ಶೇಂಗಾ ಬೆಳೆಗಾರರು 400 ರೂ. ಗಳಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಈರುಳ್ಳಿ ಬೆಲೆಯು ತೀವ್ರವಾಗಿ ಕುಸಿದಿದೆ. ಕಳೆದ ಎರಡು ತಿಂಗಳ ಹಿಂದೆ 3,000 ರೂ. ಗಳಿಗೆ ಮಾರಾಟವಾದರೇ ಅದೀಗ ಕೇವಲ 950 ರೂ. ಗಳಿಗೆ ಮಾರಾಟವಾಗುತ್ತಿದೆ. ರೇಷ್ಮೇ ಗೂಡು 200 ರೂ. ಗಳಿಗೆ ಕುಸಿದಿದೆ.

ಆದ್ದರಿಂದ, ಈಗಲಾದರೂ ರಾಜ್ಯ ಸರಕಾರಕ್ಕೆ ನಿಜವಾಗಲೂ ರೈತರ ಕುರಿತು ಕಿಂಚಿತ್ತಾದರೂ ಕಾಳಜಿ ಇದ್ದರೇ, ಕೂಡಲೇ ಈ ನಾಲ್ಕು ಬೆಳೆಗಳಿಗೆ ಪ್ರೋತ್ಸಾಹ ಧನವನ್ನು ಘೋಷಿಸಬೇಕು ಮತ್ತು ತಕ್ಷಣವೇ ಮಾರುಕಟ್ಟೆಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರೈತರ ಸಂರಕ್ಷಣೆಗೆ ಕ್ರಮವಹಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಒತ್ತಾಯಿಸಿದೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಿಂದ ರಾಜ್ಯಾದ್ಯಂತ ಪತ್ರ ಚಳುವಳಿ



ಮಾನ್ಯ ಮುಖ್ಯ ಮಂತ್ರಿಯವರಿಗೆ ಬೇಡಿಕೆ ಒತ್ತಾಯಿಸಿ ರಾಜ್ಯದ ಜನರಿಗೆ ಅಗತ್ಯವಾದ ಜೀವ ರಕ್ಷಕ ಔಷದಿಗಳು, ಆಕ್ಸಿಜನ್, ಮತ್ತು ಬೆಡ್ಸ್‌ಗಳನ್ನು ಖಾತ್ರಿ ಮಾಡಿ, ಉಚಿತ ಲಸಿಕೆ ನೀಡಬೇಕೆಂದು, ಕೋವಿಡ್ ಇರಲಿ, ಕೋವಿಡ್ಯೇತರ ಸಮಸ್ಯೆ ಇರಲಿ ಸಮಗ್ರ ಆರೋಗ್ಯ ಸುರಕ್ಷತೆಯನ್ನು ಖಾತ್ರಿ ಮಾಡುವಂತೆ, ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕರಿಸಿ. ಪಡಿತರ ಕಡಿತಗೊಳಿಸಿದ್ದನ್ನು ಹಿಂತೆಗೆದುಕೊಳ್ಳಬೇಕು, ತಲಾ 10 ಕೆ.ಜಿ. ಅಕ್ಕಿ ನೀಡಬೇಕು, ಉದ್ಯೋಗ ಖಾತ್ರಿ ಯಲ್ಲಿ 200 ದಿನ ಕೆಲಸ ದಿನಕ್ಕೆ 600 ರೂ. ಕೂಲಿ ನೀಡಲು ಒತ್ತಾಯಿಸಿ ಅಂಚೆ ಮೂಲಕ ಮುಖ್ಯಮಂತ್ರಿಗಳಿಗೆ ಪತ್ರವನ್ನು ರಾಜ್ಯದ ಎಲ್ಲಾ ಕಡೆಗಳಿಂದ ಕಳುಹಿಸಿದ್ದಾರೆ.

ಪಡಿತರದಲ್ಲಿ ಅಕ್ಕಿ ಕಡಿತವನ್ನು ಪ್ರಶ್ನಿಸಿದ ರೈತನಿಗೆ

ಸಾಯಿ ಎಂದ ಆಹಾರ ಸಚಿವ ಉಮೇಶ್ ಕತ್ತಿ ಕೂಡಲೆ ರಾಜಿನಾಮೆ ನೀಡಬೇಕು

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹ

ಪಡಿತರ ಅಂಗಡಿಗಳಲ್ಲಿ ನೀಡುವ ಎರಡು ಕೆ.ಜಿ ಅಕ್ಕಿ, ಮೂರು ಕೆ.ಜಿ ಜೋಳದಿಂದ ಬದುಕಲಾದೀತೆ? ಉಳಿದ ದಿನ ಉಪವಾಸದಿಂದ ಸಾಯಬೇಕೆ ಎಂದು ಪ್ರಶ್ನಿಸಿದ ಗದಗ್ ಜಿಲ್ಲೆಯ ರೈತ ಸಂಘದ ಕಾರ್ಯಕರ್ತನನ್ನು ಸಾಯಿ ಎಂದ ಆಹಾರ ಸಚಿವರ ಉದ್ಧಟತನವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯಸಮಿತಿ ತೀವ್ರವಾಗಿ ಖಂಡಿಸುತ್ತದೆ.

ಈ ಹಿಂದೆ ಕೂಡಾ ಮನೆಯಲ್ಲಿ ಟಿ.ವಿ. ಇದ್ದವರಿಗೆ ಬಿ.ಪಿ.ಎಲ್ ರೇಷನ್ ಕಾರ್ಡ್ ಹಿಂಪಡೆಯುವ ಮಾತುಗಳನ್ನಾಡಿ ನಂತರ ಜನತೆಯ ಕ್ಷಮೆ ಕೇಳಿದ್ದರು.

ಜನಪ್ರತಿನಿಧಿಗಳಾದ ಇವರು ಪಾಳೇಗಾರರಂತೆ ವರ್ತಿಸುತ್ತಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವರು ಸಚಿವರಾಗಿ ಮುಂದುವರೆಯಲು ಅನರ್ಹರು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ ಮತ್ತು ಕೂಡಲೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತದೆ.

ರಾಜ್ಯದ ಜನರು ಬರ, ನೆರೆ, ಕೋವಿಡ್ ಪರಿಣಾಮಗಳಿಂದಾಗಿ ಸಂಕಷ್ಟದಲ್ಲಿದ್ದು ಪಡಿತರ ವ್ಯವಸ್ಥೆಯ ಮೂಲಕ ನೀಡುವ ದಿನಸಿಯನ್ನು ಅವಲಂಬಿಸಿದ್ದಾರೆ. ಬಿ.ಪಿ.ಎಲ್ ಕಾರ್ಡ್ ಮೂಲಕ ನೀಡುವ ಎರಡು ಕೆ.ಜಿ ಅಕ್ಕಿ, ಮೂರು ಕೆ.ಜಿ ಜೋಳ/ರಾಗಿಯಿಂದ ಒಬ್ಬರ ಹೊಟ್ಟೆಯಾದರು ತುಂಬಲು ಸಾಧ್ಯವಾ ಎಂದು ಸಚಿವರು ವಿಚಾರ ಮಾಡಬೇಕು. ಸ್ವತಃ ಅವರು ಬಿ.ಪಿ.ಎಲ್ ಕಾರ್ಡ್ ಮೂಲಕ ನೀಡುವ ದಿನಸಿಯನ್ನು ಒಂದು ತಿಂಗಳ ಕಾಲ ತಿಂದು ತೋರಿಸಬೇಕು ಎಂದು ಸಂಘಟನೆಯು ಒತ್ತಾಯಿಸುತ್ತದೆ.

ಅನ್ನ ಭಾಗ್ಯ ಯೋಜನೆಯ ಪಡಿತರದ ಅಕ್ರಮ ಮಾರಾಟ ತಡೆಯುವಲ್ಲಿ ಕೂಡಾ ಕರ್ನಾಟಕ ರಾಜ್ಯ ಸರ್ಕಾರ ವಿಫಲವಾಗಿದೆ.

ಕೇಂದ್ರ ಬಿ.ಜೆ.ಪಿ ಸರ್ಕಾರ ಜಾರಿಗೆ ತರುತ್ತಿರುವ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಗೆ ಪೂರಕವಾಗಿ ಪಡಿತರ ವ್ಯವಸ್ಥೆಯನ್ನು ಕಳಚಿ ಹಾಕಿ ಖಾಸಗಿ ಕಾರ್ಪೊರೇಟ್ ವ್ಯಾಪಾರಕ್ಕೆ ಸಾರ್ವಜನಿಕ ಪಡಿತರದ ಫಲಾನುಭವಿಗಳನ್ನು ಬಲಿ ಕೊಡಲು ರಾಜ್ಯ ಬಿ.ಜೆ.ಪಿ ಸರ್ಕಾರ ಎಲ್ಲ ತಯಾರಿ ನಡೆಸಿದೆ.

ಕೋವಿಡ್ ಮತ್ತು ಇತರೆ ಸಾಂಕ್ರಾಮಿಕ ರೋಗ ರುಜಿನಗಳನ್ನ ಎದುರಿಸಲು ದೇಹಕ್ಕೆ ಜೀವ ನಿರೋಧಕ ಶಕ್ತಿ ಇರಬೇಕೆಂದು ಇದೇ ಸರ್ಕಾರದ ಆರೋಗ್ಯ ಇಲಾಖೆ ಹೇಳುತ್ತಿದೆ.


ಇಂಥಹ ಸಂದರ್ಭದಲ್ಲಿ ನೀಡುತ್ತಿರುವ ಪಡಿತರವನ್ನು ಕಡಿತಗೊಳಿಸಿ ಸರ್ಕಾರವೇ ಜನತೆಯನ್ನು ಸಾವಿನಂಚಿಗೆ ದೂಡುತ್ತಿರುವುದು ರಾಜ್ಯ ಬಿ.ಜೆ.ಪಿ. ಸರ್ಕಾರದಲ್ಲಿ ಸುಸ್ಪಷ್ಟವಾಗಿದೆ.

ಈ ಹಿನ್ನೆಲೆಯಲ್ಲಿ ಸಚಿವ ಉಮೇಶ್ ಕತ್ತಿ ಮತ್ತೆ ಮತ್ತೆ ಜನತೆಯ ಕ್ಷಮೆ ಕೇಳಲು ಸಹ ಅನರ್ಹರಾಗಿದ್ದು, ಕೂಡಲೆ ರಾಜೀನಾಮೆ ನೀಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿಯು ಒತ್ತಾಯಿಸುತ್ತದೆ.

ಉಚಿತ ಲಸಿಕೆ ಹಾಗೂ ಅಗತ್ಯ ನೆರವು... ಪುಟ 3 ರಿಂದ

ರಾಜ್ಯದ ಎಂಪಿಗಳ ಮೌನ ಅಕ್ಷಮ್ಯ ಮೌನ ಮುರಿಯಲು ಸಿಪಿಐಎಂ ಒತ್ತಾಯ

ರಾಜ್ಯದ ಜನತೆ ತೀವ್ರ ಸಂಕಷ್ಟದಲ್ಲಿರುವಾಗ ಮತ್ತು ಕೇಂದ್ರ ಸರಕಾರ ರಾಜ್ಯಗಳ ಮೇಲೆ ದೌರ್ಜನ್ಯ ಎಸಗುತ್ತಿರುವಾಗ ರಾಜ್ಯದ ಪಾರ್ಲಿಮೆಂಟ್ ಸದಸ್ಯರ ಬಾಯಿ ಮುಚ್ಚಿಕೊಂಡಿರುವುದು ರಾಜ್ಯದ ಜನತೆಯ ಸಂಕಷ್ಟದ ಕುರಿತು ಅವರಿಗಿರುವ ಕಳಕಳಿಯನ್ನು ತೋರುತ್ತಿದೆಯೆಂದು ಸಿಪಿಐಎಂ ಕುಟುಕಿದೆ. ಕೂಡಲೇ ರಾಜ್ಯದ ಎಲ್ಲಾ ಎಂಪಿಗಳು ಕೇಂದ್ರ ಸರಕಾರವನ್ನು ಈ ಕುರಿತು ಬಲವಾಗಿ ಒತ್ತಾಯಿಸಿ ಅಗತ್ಯ ನೆರವು ಪಡೆಯಲು ಮತ್ತು ರಾಜ್ಯದ ಜನತೆಯನ್ನು ರಕ್ಷಿಸಲು ಮೌನ ಮುರಿಯಬೇಕೆಂದು ಕರೆ ನೀಡಿದೆ.



ಲಾಕ್‌ಡೌನ್: ಸರಕಾರದಿಂದ ಅಗತ್ಯ ಕ್ರಮಗಳಿಲ್ಲ, ನಾಲ್ಕು ಘಂಟೆಯಲ್ಲಿ ವ್ಯಾಪಾರ ಮಾಡೋದು ಹೇಗೆ?

ಗುರುರಾಜ ದೇಸಾಯಿ

ಕೋವಿಡ್ ಎರಡನೇ ಅಲೆಗೆ ಬ್ರೇಕ್ ಹಾಕಲು ಹೆಣಗಾಡುತ್ತಿರುವ ರಾಜ್ಯ ಸರ್ಕಾರ, 14 ದಿನಗಳ ಲಾಕ್‌ಡೌನ್ ಜಾರಿಗೆ ತಂದಿದೆ. ಕೊರೊನಾ ಸೋಂಕು ಹರಡುವಿಕೆ ತಡೆಯಲು ಜನರು ಏನು ಮಾಡಬೇಕು? ಏನು ಮಾಡಬಾರದು? ಎಂದು ಈಗ ಹೇಳುತ್ತಿರುವ ಸರ್ಕಾರ, ಸಕಾಲದಲ್ಲಿ ಮಾಡಬೇಕಿದ್ದ ಅಗತ್ಯ ಕ್ರಮಗಳನ್ನು ಯಾಕೆ ವಹಿಸಲಿಲ್ಲ ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ಆರಂಭವಾಗಿದೆ. ಲಾಕ್ಡೌನ್ ಘೋಷಣೆಯಿಂದಾಗಿ ಸಂಕಷ್ಟ ಅನುಭವಿಸುವ ದಿನಗೂಲಿ ಕಾರ್ಮಿಕರಿಗೆ ಪರಿಹಾರ ನೀಡಬೇಕು ಎಂಬ ಕೂಗುಗಳು ಕೇಳಿ ಬರುತ್ತಿವೆ.

14 ದಿನಗಳ ಕಾಲ ಗೋಷಣೆ ಮಾಡಿರುವ ಲಾಕ್ಡೌನ್ ಗೆ ರಾಜ್ಯಾದ್ಯಂತ ಉತ್ತಮ ಬೆಂಬಲ ವ್ಯಕ್ತವಾಗಿದೆ ಸದಾ ಜನರಿಂದ ಗಿಜಿಗುಡುತ್ತಿದ್ದ ರಾಜ್ಯ ರಾಜಧಾನಿ ಬೆಂಗಳೂರು ಖಾಲಿಖಾಲಿ ಅನ್ನಿಸುತ್ತಿದೆ. ಸಾರಿಗೆ ಸಂಚಾರ ಬಂದ್ ಆಗಿದ್ದು, ಪ್ರಮುಖ ರಸ್ತೆಗಳಿಗೆ ಬ್ಯಾರಿಕೇಡ್ ಹಾಕಿ ಪೊಲೀಸರು ಕಾವಲು ಕಾಯುತ್ತಿದ್ದಾರೆ. ಇನ್ನು ಬೆಳಗ್ಗೆ 6ರಿಂದ 10ರವರೆಗೆ ಮಾತ್ರವೇ ಅಗತ್ಯ ವಸ್ತು ಮಾರಾಟ–ಖರೀದಿ ವಹಿವಾಟು ನಡೆದಿದ್ದು, ಗಡುವು ಮೀರುತ್ತಿದ್ದಂತೆ ಸ್ಥಳಕ್ಕೆ ಬಂದ ಪೊಲೀಸರು ಬಾಗಿಲು ಮುಚ್ಚಿಸಿದರು. ಈ ವೇಳೆ ತರಕಾರಿ, ಹೂವು, ಹಣ್ಣಿನ ಕೆಲ ವ್ಯಾಪಾರಿಗಳು, ಕೇವಲ ನಾಲ್ಕು ಗಂಟೆಯಲ್ಲಿ ವ್ಯಾಪಾರ ಮಾಡಿ ಮುಗಿಸಲು ಹೇಗೆ ಸಾಧ್ಯ? ಎಂದು ವ್ಯಾಪಾರಸ್ಥರು ಸರಕಾರವನ್ನು ತರಾಟೆಗೆ ತೆಗುಕೊಂಡು ಘಟನೆಗಳು ಅಲ್ಲಲ್ಲಿ ನಡೆದಿವೆ.

ಬೆಳ್ಳಂಬೆಳಗ್ಗೆ ಎದ್ದು ಮಾರ್ಕೆಟ್‌ಗೆ ಹೋಗಿ, ಬಂದಿರೋ ತರಕಾರಿ ಹುಡ್ಕೊಂಡು, ಅಂಗಡಿಗೆ ತಂದು, ಕ್ಲೀನಾಗಿ ಇಟ್ಟು, ವ್ಯಾಪಾರ ಸ್ಟಾರ್ಟ್ ಮಾಡೋ ಹೊತ್ತಿಗೆ ಎಂಟು ಗಂಟೆ ಆಗಿ ಹೋಗಿ ಬಿಡುತ್ತೆ. ಇನ್ನು ಎರಡು ಗಂಟ್ಯಾಗೆ ಎಷ್ಟು ಆಗುತ್ತೊ ಅಷ್ಟು ವ್ಯಾಪಾರ ಮಾಡ್ಬೇಕು. ವ್ಯಾಪಾರ ಆಯ್ತು ಅಂದ್ರೆ ಸರಿ. ಇಲ್ಲ ಅಂದ್ರೆ ಎಲ್ಲಾನೂ ಮೈಮೇಲೆ ಬರುತ್ತೆ. ಅಂತಾದ್ರಾಗೆ ಮತ್ತೆ ಹದಿನಾಲ್ಕು ದಿನ ಲಾಕ್‌ಡೌನ್‌ನಂಗೆ ಮಾಡಿದ್ರೆ ಜೀವಲಿದ ಗತಿ ಏನು ತರಕಾರಿ ಹಣ್ಣು ಮಾರಾಟಗಾರ್ತಿ ಬಸ್ಸಮ್ಮನವರ ಪ್ರಶ್ನೆಯಾದರೆ, ಕೃಷಿಗೆ ಯಾವುದೆ ತೊಂದರೆ ಇಲ್ಲ ಅಂತಾ ಹೇಳೋ ಸರಕಾರ ಕೇವಲ ನಾಲ್ಕು ತಾಸು ಮಾರಟಕ್ಕೆ ಅವಕಾಶಕ್ಕೆ ನೀಡಿರುವುದರಿಂದ ರೈತರನ್ನು ಆರ್ಥಿಕವಾಗಿ ಸಂಕಷ್ಟಕ್ಕೆ ತಳ್ಳುವಂತೆ ಮಾಡಿದೆ ಎಂಬುದು ರೈತ ಹೋರಾಟಗಾರ ಜೆ.ಎನ್ .ಕಾಳಿದಾಸ್ ರವರ ಆರೋಪವಾಗಿದೆ.

ಇನ್ನೂ ರಾಜ್ಯ ಸರಕಾರ ಹೇರಿರುವ ಲಾಕ್ಡೌನ್ ಬಗ್ಗೆ ಸಾರ್ವಜನಿಕ ವಲಯದಲ್ಲಿ ಆಕ್ರೋಶಕೇಳಿ ಬರುತ್ತಿದೆ. ಸರ್ವಪಕ್ಷ ಸಭೆಯಲ್ಲಿ ಲಾಕ್ಡೌನ್ ಬೇಡ ಎಂಬ ಸಲಹೆ ಬಂದರೂ ಸರಕಾರ ಏಕಪಕ್ಷೀಯವಾಗಿ ನಿರ್ಧಾರವನ್ನು ತೆಗೆದುಕೊಂಡು ಲಾಕ್ಡೌನ್ ಹೊರೆಯನ್ನು ಹಾಕಿದೆ. ಲಾಕ್ಡೌನ್ ಘೋಷಿಸುವ ಮೊದಲು ಅಗತ್ಯ ಕ್ರಮಗಳ ಕುರಿತಾಗಿ ಯೋಜನೆ ರೂಪಿಸದೆ ಇರುವುದು ಇನ್ನಷ್ಟು ಸಂಕಷ್ಟಗಳನ್ನು ತಂದೊಡ್ಡಲಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ರಾಜ್ಯಕ್ಕೆ ಕೊರೊನಾ ಕಾಲಿಟ್ಟು ಒಂದು ವರ್ಷಕ್ಕೂ ಹೆಚ್ಚು ಸಮಯ ಕಳೆದಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳಿಲ್ಲ, ವೈದ್ಯಕೀಯ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ. ಬಹಳಷ್ಟು ಕಡೆ ನಿರ್ಲಕ್ಷ ಮಾಡಲಾಗುತ್ತಿದೆ. ಕೋವಿಡ್ ಕೇಂದ್ರದಲ್ಲಿ ಒಂದು ಹಾಸಿಗೆಯ ಮೇಲೆ ಇಬ್ಬರು, ಮೂವರು ಮಲಗುವ ಸ್ಥಿತಿ ಇದೆ, ಇದು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹೇಗಿದೆ ಎಂಬುದನ್ನು ಸರಕಾರಿ ಆಸ್ಪತ್ರೆ ನೋಡಿದರೆ ಗೊತ್ತಾಗುತ್ತದೆ.

ಖಾಸಗಿ ಆಸಪ್ತರೆಗಳ ಕಥೆ ವಿಚಿತ್ರವಾಗಿದೆ. ಕೆಲ ಖಾಸಗಿ ಆಸ್ತೆಗಳು ದುಪ್ಪಟ್ಟು ಹಣವನ್ನು ಪಡೆಯುತ್ತಿವೆ. ಖಾಸಗಿ ಆಸ್ಪತ್ರೆಗಳ ಮುಂದೆ ಹಾಸಿಗೆಗಾಗಿ ಪರದಾಡುವ ಸ್ಥಿತಿ ಇದೆ. ಕರ್ನಾಟಕ ಖಾಸಗಿ ಆಸ್ಪತ್ರೆಗಳ ಕಾಯ್ದೆಯಡಿ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಸರಕಾರಕ್ಕೆ ಸಾಧ್ಯವಾಗುತ್ತಿಲ್ಲವೆ? ಸರಕಾರಕ್ಕೆ ಶಕ್ತಿ ಇಲ್ಲವೆ? ಇನ್ನೆಷ್ಟು ಸಾವನ್ನು ಸರಕಾರ ನೋಡಬೇಕು ಎಂದುಕೊಂಡಿದೆ., ಸರ್ಕಾರ ಎದ್ದು ನಿಲ್ಲುವುದು ಯಾವಾಗ? ಎಂದು ಸಾರ್ವಜನಿಕರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ.

ಸರಕಾರ ಕಾಮಗಾರಿಗಳ ಬಿಲ್ಲಗಳನ್ನು ಪೂರ್ಣಗೊಳಿಸುವಲ್ಲಿ ಹಾಗೂ ಚುನಾವಣೆಗಳನ್ನು ಗೆಲ್ಲುವುದಕ್ಕೆ ನೀಡಿದ ಗಮನವನ್ನು ಕೊರೊನಾ ನಿಯಂತ್ರಣಕ್ಕೆ ತೆಗೆದುಕೊಳ್ಳಲಿಲ್ಲ. ಬೆಂಗಳೂರಿನಲ್ಲಿ ಈಗಲೂ ಬೆಡ್ ಕೊರತೆ ಎದುರಾಗಿದೆ. ಬೆಡ್ ಸಿಗದೆ ಅನೇಕರು ಸಾವನ್ನಪ್ಪುತ್ತಿದ್ದಾರೆ. ಸ್ವತಃ ಬಿಬಿಎಂಪಿ ಮುಖ್ಯ ಆಯುಕ್ತ ಗೌರವಗುಪ್ತಾರವರೆ ಒಪ್ಪಿಕೊಂಡಿದ್ದಾರೆ ಐಸಿಯು ಬೆಡ್ ಗಳ ಕೊರತೆ ಹೆಚ್ಚಾಗಿದೆ ಎಂದು. ಆಕ್ಸಿಜನ್ ಗಾಗಿ ಪರದಾಡುವುದು ಇನ್ನೂ ತಪ್ಪಿಲ್ಲ. ಆಸ್ಪತ್ರೆಗಳಿಂದ ಆಸ್ಪತ್ರೆಗಳಿಗೆ ಕೋವಿಡ್ ಪೀಡಿತರನ್ನು ಅಲೆದಾಡಿಸಿ ಸಾಯಿಸುವ ಕೆಲಸವನ್ನು ನೋಡಿದರೆ ರಾಜ್ಯ ಸರಕಾರದ ತಯಾರಿ ಹೇಗಿದೆ ಎಂಬುದು ಗೊತ್ತಾಗುತ್ತದೆ.

ಇತ್ತ ಆಸ್ಪತ್ರೆಗಳಲ್ಲಿ ಬೆಡ್ ಕೊರತೆ ಎದ್ದುಕಾಣುತ್ತದ್ದರೆ, ಅತ್ತ ನೈರುತ್ಯ ರೈಲ್ವೆಯು 4,240 ಹಾಸಿಗೆ ಸಾಮರ್ಥ್ಯದ ಐಸೋಲೇಷನ್ ರೈಲು ಬೋಗಿಗಳನ್ನು ಸಿದ್ಧ ಮಾಡಿಕೊಂಡಿದೆ. ಈ ಪೈಕಿ ನಗರದ ಕೆಎಸ್‌ಆರ್ ಹಾಗೂ ಯಶವಂತಪುರ, ಮೈಸೂರು ಹಾಗೂ ಹುಬ್ಬಳ್ಳಿ ರೈಲು ನಿಲ್ದಾಣಗಳಲ್ಲಿ ವೈದ್ಯಕೀಯ ಆಕ್ಸಿಜನ್ ಸಹಿತ ಹಾಸಿಗೆಗಳನ್ನು ಪೂರೈಸಲೂ ಸಜ್ಜಾಗಿದೆ. ಆದರೆ, ರಾಜ್ಯ ಸರ್ಕಾರದಿಂದ ಈವರೆಗೆ ಯಾವುದೇ ಬೇಡಿಕೆ ಹೋಗಿರದ ಕಾರಣ ಈ ಸೌಲಭ್ಯವು ಬಳಕೆಯಾಗದೇ ಉಳಿದಿದೆ.

ಹುಬ್ಬಳ್ಳಿ ಯಲ್ಲಿ 97 ಭೋಗಿಗಳನ್ನು, ಮೈಸೂರಿನಲ್ಲಿ 95 ಭೊಗಿಗಳನ್ನು, ಬೆಂಗಳೂರಿನಲ್ಲಿ 73 ಭೊಗಿಗಳು ಸೇರಿದಂತೆ ಒಟ್ಟು 265 ಕೋವಿಡ್ ವಾರ್ಡ್ ಬೋಗಿಗಳ ಸಿದ್ಧವಾಗಿವೆ. ಒಂದು ಬೋಗಿಯಲ್ಲಿ 16 ರೋಗಿಗಳಿಗೆ ಚಿಕಿತ್ಸೆ ನೀಡಬಹುದಾಗಿದೆ. ಆಕ್ಸಿಜನ್ ಸಿಲಿಂಡರ್ ಅಳವಡಿಸಲು ಜಾಗವಿದೆ. ಥರ್ಮಲ್ ಸ್ಕ್ಯಾನರ್, ಜೈವಿಕ ಶೌಚಾಲಯ, ಕಸದ ಬುಟ್ಟಿ ಇಡಲಾಗಿದೆ. ವೈದ್ಯರು ಮತ್ತು ದಾದಿಯರು ಪಿಪಿಇ ಕಿಟ್ ಬದಲಿಸಿಕೊಳ್ಳಲು ಪ್ರತ್ಯೇಕ ಸ್ಥಳವನ್ನು ಮೀಸಲಿಡಲಾಗಿದೆ. ಎಲ್ಲ ಬೋಗಿಗಳನ್ನು ಸ್ಯಾನಿಟೈಸ್ ಮಾಡಲಾಗಿದೆ. ಆದರೆ ಇವಗಳನ್ನು ಸರಕಾರ ಬಳಸಿಕೊಳ್ಳಲು ಮುಂದಾಗದಿರುವುದು ಸರಕಾರದ ನಿರ್ಲಕ್ಷ್ಯತೆ ಜೊತೆ ಹಲವು ಅನುಮಾನಗಳನ್ನು ಸೃಷ್ಟಿಸುತ್ತಿದೆ.

ಸರ್ಕಾರ ಘೋಷಿಸಿರುವ ಲಾಕ್ ಡೌನ ನಿಂದಾಗಿ ರಾಜ್ಯದ ಸಂಘಟಿತ ಅಸಂಘಟಿತ ಸ್ಕೀಂ ನೌಕರರು, ಗುತ್ತಿಗೆ ಹೊರಗುತ್ತಿಗೆ ಹಾಗೂ ವಲಸೆ ಕಾರ್ಮಿಕರು ಸಂಕಷ್ಟಗಳನ್ನು ಎದುರಿಸುವಂತಾಗುತ್ತದೆ. ರಾಜ್ಯ ಸರ್ಕಾರ ಕೂಡಲೇ ಈ ವಿಭಾಗದ ಕಾರ್ಮಿಕರ ಬದುಕಿನ ರಕ್ಷಣೆಗಾಗಿ ಆರ್ಥಿಕ ಪ್ಯಾಕೇಜ್ ಘೋಷಿಸಬೇಕೆಂದು ಸಿಐಟಿಯು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ರವರಿಗೆ ಮನವಿ ಸಲ್ಲಿಸಿದೆ. ಸೋಂಕು ಹರಡುವುಕೆ ವ್ಯಾಪಕವಾಗುತ್ತಿದ್ದು ಅದನ್ನು ನಿಯಂತ್ರಿಸುವುದಕ್ಕಾಗಿ ಜೀವರಕ್ಷಕ ಔಷಧಿ, ಲಸಿಕೆಯನ್ನು ಉಚಿತವಾಗಿ ನೀಡಬೇಕು. ಆಕ್ಸಿಜನ್ ಹಾಗೂ ಬೆಡ್ ಸೌಲಭ್ಯಗಳನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದೆ.

ದಿನದ ಆದಾಯದಲ್ಲಿ ಬದುಕುವ ಕೂಲಿ ಕಾರ್ಮಿಕರು 15 ದಿನಗಳ ಕಾಲ ಜೀವನ ನೀರ್ವಹಣೆ ಮಾಡುವುದು ಕಷ್ಟದ ಕೆಲಸ. ಕರ್ನಾಟಕದಲ್ಲಿ ದಿನದ ಆದಾಯವನ್ನೆ ನಂಬಿ ಬದುಕು ನಡೆಸುತ್ತಿರುವವರ ಸಂಖ್ಯೆ ದೊಡ್ಡದಿದೆ ಹಾಗಾಗಿ ಸರಕಾರ ಇನ್ನಾದರೂ ಅವರಿಗೆ ಅಗತ್ಯವಾಗಿರುವ ಸೌಲಭ್ಯಗಳನ್ನು ನೀಡುವ ಜೊತೆಯಲ್ಲಿ, ಕೊರೊನಾ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಾದ ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವತ್ತ ಹೆಜ್ಜೆ ಇಡಲಿ.

ಉಚಿತ ಲಸಿಕೆ ಹಾಗೂ ಅಗತ್ಯ ನೆರವು ಕೇಂದ್ರ ಸರಕಾರ ಒದಗಿಸಲು ಹಾಗೂ ದ.ಕ. ಜಿಲ್ಲೆಯಲ್ಲಿ ಕೋವಿಡ್ ಸಂತ್ರಸ್ತರಿಗೆ ನೆರವು ನೀಡುವ ಬಗ್ಗೆ

ಇಡೀ ದೇಶವೇ ಸಂಕಷ್ಟದಲ್ಲಿದೆ. ರಾಜ್ಯಗಳಿಗೆ ನೀಡಬೇಕಾದ ಕೋವಿಡ್ ಪರಿಹಾರದ ನೆರವನ್ನು ಮತ್ತು ಜಿ.ಎಸ್.ಟಿ. ಬಾಕಿ ಹಣವನ್ನು ಕೇಂದ್ರ ಸರಕಾರ ನೀಡದೇ ಸತಾಯಿಸುತ್ತಿರುವುದನ್ನು ಮತ್ತು ಇದೀಗ ಕೇಂದ್ರ ಸರಕಾರಕ್ಕೆ ಕೇವಲ 150 ರೂ. ಗಳಿಗೆ ಸಿಗುವ ಕೋವಿಡ್ ಲಸಿಕೆಯನ್ನು ರಾಜ್ಯಗಳು 400 ರೂ. ಗಳಿಗೆ ತಲಾ ಡೋಸ್ ಖರೀದಿಸುವಂತೆ ಒತ್ತಾಯಿಸುವ ಕೇಂದ್ರ ಸರಕಾರದ ದೌರ್ಜನ್ಯದ ಕ್ರಮಗಳನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಬಲವಾಗಿ ಖಂಡಿಸುತ್ತದೆ. ರಾಜ್ಯಕ್ಕೆ ಕೊಡಬೇಕಾದ ಎಲ್ಲಾ ಬಾಕಿ ಹಣವನ್ನು ಮತ್ತು ಕೋವಿಡ್ ನೆರವನ್ನು ತಕ್ಷಣ ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತದೆ ಮತ್ತು ರಾಜ್ಯಗಳ ಜನತೆಗೆ ಉಚಿತ ಕೋವಿಡ್ ಲಸಿಕೆಯನ್ನು ಕೇಂದ್ರ ಸರಕಾರವೇ ಒದಗಿಸಬೇಕೆಂದು ಪ್ರಧಾನ ಮಂತ್ರಿಗಳನ್ನು ಬಲವಾಗಿ ಆಗ್ರಹಿಸುತ್ತದೆ. ಇದಕ್ಕಾಗಿ ದೇಶದಾದ್ಯಂತ ಸಂಗ್ರಹಿಸಲಾದ ಸಾವಿರಾರು ಕೋಟಿ ರೂ.ಗಳ ಭಾರೀ ಮೊತ್ತ ಪ್ರಧಾನ ಮಂತ್ರಿ ಕೇರ್ಸ್ ಫಂಡನ್ನು ಬಳಸಬೇಕೆಂದು ಒತ್ತಾಯಿಸಿದೆ.

ತಜ್ಞರ ಮುನ್ನೆಚ್ಚರಿಕೆಯ ಸೂಚನೆಯ ನಡುವೆಯೂ, ತಮ್ಮ ಸರಕಾರದ ಜವಾಬ್ದಾರಿ ರಹಿತ ನಡೆಯಿಂದ ಕೋವಿಡ್ ಎರಡನೇ ಅಲೆಗೆ ಜನತೆ ದೊಡ್ಡ ಸಂಖ್ಯೆಯಲ್ಲಿ ಸಾವಿಗೀಡಾಗುವಂತಾಗಿದೆ ಮತ್ತು ಅದು ಅತ್ಯಂತ ವೇಗವಾಗಿ ಹರಡಲು ಕಾರಣವಾಗಿದೆ. ಕರ್ನಾಟಕದಲ್ಲಿ ಹೆಚ್ಚಾಗುತ್ತಿರುವ ಸೋಂಕಿತರ ಸಂಖ್ಯೆಯ ವೇಗವನ್ನು ಗಮನಿಸಿದಲ್ಲಿ ರಾಜ್ಯದಲ್ಲಿನ ಈಗಿನ ಆಸ್ಪತ್ರೆ ಮತ್ತು ಶುಶ್ರೂಷೆಯ ವ್ಯವಸ್ಥೆ ಸಾಲದಾಗಿದೆ. ಅದಕ್ಕಾಗಿ, ಶಾಲಾ, ಕಾಲೇಜ್, ಹಾಸ್ಟೆಲ್ ಮತ್ತು ಕಲ್ಯಾಣ ಮಂಟಪ, ಹೋಟೆಲ್ ಮುಂತಾದವುಗಳನ್ನು ಬಳಸಿಕೊಳ್ಳಲು ಕೇಂದ್ರ ಸರಕಾರದ ನೆರವು ಅಗತ್ಯವಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋವಿಡ್ ಸೋಂಕಿತರಿಗೆ ಹಾಗೂ ರೋಗಿಗಳಿಗೆ ನೆರವಾಗಲು ದಕ್ಷಿಣ ಕನ್ನಡ ಜಿಲ್ಲಾಡಳಿತವು ಕೆಲವು ಕ್ರಮಗಳನ್ನು ಕೈಗೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಸಿಪಿಐ(ಎಂ) ಪಕ್ಷವು ಕೂಡಾ ಇದರೊಂದಿಗೆ ಕೈಜೋಡಿಸಲು ಆಸಕ್ತವಾಗಿದೆ. ಆದುದರಿಂದ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ವಿನಂತಿ.

1. ಕರ್ಫ್ಯೂನಿಂದಾಗಿ ಉದ್ಯೋಗಕ್ಕೆ ಹೋಗಲಾಗದ ಕಟ್ಟಡ ಕಾರ್ಮಿಕರೇ ಮೊದಲಾದ ಹಲವಾರು ಕಾರ್ಮಿಕ ವರ್ಗದವರಿಗೆ ಆಹಾರ ಲಭ್ಯತೆ, ವಾಸ್ತವ್ಯದ ಸಮಸ್ಯೆ ಎದುರಾಗಿದೆ. ಅವರಿಗೆ ಸ್ವಯಂ ಸೇವಕ ನೆಲೆಯಲ್ಲಿ ಆಹಾರದ ಕಿಟ್, ಔಷಧಿ ಪೂರೈಕೆ ಒದಗಿಸಲು ಸಿಪಿಐ(ಎಂ) ಕಾರ್ಯಕರ್ತರು ಹಾಗೂ ಡಿವೈಎಫ್ಐ ಇದರ ಯುವಜನ ಕಾರ್ಯಕರ್ತರನ್ನು ನಾವು ಒದಗಿಸಬಲ್ಲೆವು. ಇವರಿಗೆ ಸಂಚಾರಕ್ಕೆ ಅನುಕೂಲವಾಗುವಂತೆ ಪಾಸ್ ಒದಗಿಸಬೇಕೆಂದು ವಿನಂತಿಸುವೆವು. ಅವರುಗಳ ಹೆಸರಿನ ಪಟ್ಟಿಯನ್ನು ನಾವು ತಮಗೆ ಒದಗಿಸುತ್ತೇವೆ.
2. ಜಿಲ್ಲೆಯ 8 ತಾಲೂಕುಗಳಲ್ಲಿ ಸಿಪಿಐ(ಎಂ) ಪಕ್ಷದ ಪ್ರಮುಖ ಮುಖಂಡರಿಗೆ ತಾಲೂಕಿಗೆ ತಲಾ ಮೂರರಂತೆ ಪಾಸ್ ನೀಡಿದಲ್ಲಿ, ಸೋಂಕಿತರನ್ನು ಹಾಗೂ ಸಂತ್ರಸ್ತರನ್ನು ಚಿಕಿತ್ಸೆಗೆ ಕರೆದೊಯ್ಯಲು ನಾವು ಸಿದ್ಧರಿದ್ದೇವೆ. ನಾವು ಒದಗಿಸುವ ಪಟ್ಟಿಯ ಹೆಸರಿಗೆ ಪಾಸ್ ನೀಡಿದಲ್ಲಿ ನಾವು ಜಿಲ್ಲಾಡಳಿತಕ್ಕೆ ಈ ನಿಟ್ಟಿನಲ್ಲಿ ಸೇವೆ ಸಲ್ಲಿಸಲು ಬದ್ಧರಿದ್ದೇವೆ.
3. ಖಾಸಗೀ ಆಸ್ಪತ್ರೆಗಳಲ್ಲಿ ಅನೇಕ ಹಾಸಿಗೆಗಳು ಲಭ್ಯವಿದ್ದು, ಅವುಗಳನ್ನು ಕೋವಿಡ್ ಸಂತ್ರಸ್ತರಿಗಾಗಿ ಬಳಕೆ ಮಾಡಲು ಅವಕಾಶವಿದೆ. ಅವುಗಳನ್ನು ಜಿಲ್ಲಾಡಳಿತವು ವಶಕ್ಕೆ ತೆಗೆದುಕೊಂಡು ಕೋವಿಡ್ ಪೀಡಿತರಿಗೆ ಬಳಕೆ ಅವಕಾಶ ಮಾಡಿಕೊಡಬೇಕೆಂದು ನಾವು ಆಗ್ರಹಿಸುತ್ತೇವೆ.
4. ಬೀಡಿ ಗುತ್ತಿಗೆದಾರರು ಬೀಡಿ ಕಾರ್ಮಿಕರಿಂದ ಕಟ್ಟಿಸಿ ಸಂಗ್ರಹಿಸಿದ ಬೀಡಿಯನ್ನು ಬೀಡಿ ಮಾಲಕರಿಗೆ ತಲುಪಿಸಲು ಸಧ್ಯ ಅಡಚಣೆಯಾಗಿದ್ದು, ಇದರಿಂದಾಗಿ ಲಕ್ಷ ಸಂಖ್ಯೆಯ ಬೀಡಿ ಕಾರ್ಮಿಕರು ಉದ್ಯೋಗ ಇಲ್ಲದೇ ಇರುವ ಪರಿಸ್ಥಿತಿ ಇದೆ. ಆದುದರಿಂದ ಬೀಡಿ ಗುತ್ತಿಗೆದಾರರಿಗೆ ಸಂಗ್ರಹಿಸಿದ ಬೀಡಿಯನ್ನು ಬೀಡಿ ಮಾಲಕರಿಗೆ ತಲಪಿಸಲು ಜಿಲ್ಲಾಡಳಿತವು ವ್ಯವಸ್ಥೆ ಮಾಡಿಕೊಡಬೇಕಾಗಿ ವಿನಂತಿ.
5. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರು ದೊಡ್ಡ ಮಾಲಿಕರ ಕೆಳಗೆ ಕೆಲಸ ಮಾಡುವವರು ಕಡಿಮೆ. ಅವರು ಬಿಡಿ ಸಂಖ್ಯೆಯಲ್ಲಿ ಕಟ್ಟಡ ಕಾಮಗಾರಿ ಮಾಡುತ್ತಿದ್ದಾರೆ. ಅವರಲ್ಲಿ ಕಟ್ಟಡ ಕಾರ್ಮಿಕರ ಗುರುತು ಚೀಟಿ ಇದ್ದರೂ ಕೂಡಾ ಈ ಹಿಂದೆ ಕೋವಿಡ್ ಸಂತ್ರಸ್ತರ ಕಿಟ್ ಇತ್ಯಾದಿ ಸವಲತ್ತು ಪಡೆಯಲು ಸಾಧ್ಯವಾಗಿರಲಿಲ್ಲ. ಆದುದರಿಂದ ಗುರುತು ಚೀಟಿ ಇರುವ ಎಲ್ಲಾ ಕಟ್ಟಡ ಕಾರ್ಮಿಕರಿಗೂ ಸರಕಾರದಿಂದ ಲಭಿಸುವ ಆಹಾರ ಕಿಟ್ ಮತ್ತಿತರ ಸೌಲಭ್ಯಗಳನ್ನು ಯಾವ ಅಡಚಣೆಯೂ ಇಲ್ಲದೆ ಪಡೆಯುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ವಿನಂತಿ.

ನಿಯೋಗದಲ್ಲಿದ್ದವರು: ವಸಂತ ಆಚಾರಿ, ಕೆ. ಯಾದವ ಶೆಟ್ಟಿ, ಜೆ. ಬಾಲಕೃಷ್ಣ ಶೆಟ್ಟಿ, ಕೆ. ಕೃಷ್ಣಪ್ಪ ಸಾಲಿಯಾನ್, ವಾಸುದೇವ ಉಚ್ಚಿಲ, ಮುನೀರ್ ಕಾಟಿಪಳ್ಳ, ಯು.ಬಿ. ಲೋಕಯ್ಯ.

ಲಾಕ್ ಡೌನ್: ಆರ್ಥಿಕ ನೆರವು ಘೋಷಿಸಲು ಸಿಐಟಿಯು ಆಗ್ರಹ

ರಾಜ್ಯದಲ್ಲಿ ಲಾಕ್‌ಡೌನ್ ಹಾಕಿರುವ ಹಿನ್ನೆಲೆಯಲ್ಲಿ ಸಿಐಟಿಯು ರಾಜ್ಯ ಮುಖಂಡರ ನಿಯೋಗ ಕಾರ್ಮಿಕ ಸಚಿವ ಶ್ರೀ ಶಿವರಾಮ್ ಹೆಬ್ಬಾರ್ ಅವರನ್ನು ಎಪ್ರಿಲ್ 27ರಂದು ವಿಕಾಸಸೌಧದಲ್ಲಿ ಭೇಟಿಯಾಗಿ ಮನವಿ ಸಲ್ಲಿಸಿದರು.

ಸರ್ಕಾರ ಘೋಷಿಸಿರುವ ಲಾಕ್ ಡೌನಿನಿಂದಾಗಿ ರಾಜ್ಯದ ಸಂಘಟಿತ, ಅಸಂಘಟಿತ ಸ್ಕೀಂ ನೌಕರರು, ಗುತ್ತಿಗೆ ಹೊರಗುತ್ತಿಗೆ ಹಾಗೂ ವಲಸೆ ಕಾರ್ಮಿಕರು ಎದುರಿಸಬಹುದಾದ ಸಂಕಷ್ಟಗಳ ಬಗ್ಗೆ ಮತ್ತು ರಾಜ್ಯ ಸರ್ಕಾರ ಕೂಡಲೇ ಈ ವಿಭಾಗದ ಕಾರ್ಮಿಕರ ಬದುಕಿನ ರಕ್ಷಣೆಗಾಗಿ ಆರ್ಥಿಕ ಪ್ಯಾಕೇಜ್ ಘೋಷಿಸಬೇಕೆಂದು ಒತ್ತಾಯಿಸಿ ವಿವರವಾದ ಮನವಿಯನ್ನು ಸಲ್ಲಿಸಿ ಸುದೀರ್ಘವಾದ ಚರ್ಚೆ ನಡೆಸಿತು. ಮನವಿಯನ್ನು ಸ್ವೀಕರಿಸಿದ ಸಚಿವರು ಈ ಬಗ್ಗೆ ಸೂಕ್ತ ಕ್ರಮವಹಿಸುವ ಭರವಸೆ ನೀಡಿದರು.

ಸಚಿವರೊಂದಿಗ ನಡೆದ ಸಭೆಯಲ್ಲಿ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ ಜಿ. ಕಲ್ಪನಾ ಕಾರ್ಮಿಕ ಆಯುಕ್ತರು ಹಾಗೂ ಕಟ್ಟಡ ಕಾರ್ಮಿಕ ಮಂಡಳಿ ಕಾರ್ಯದರ್ಶಿ ಡಾ ಅಕ್ರಂ ಪಾಷಾ ಉಪಸ್ಥಿತರಿದ್ದರು..

ಸಿಐಟಿಯು ರಾಜ್ಯ ಆಧ್ಯಕ್ಷರಾದ ಎಸ್. ವರಲಕ್ಷ್ಮೀ, ಪಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್.ಉಮೇಶ್, ಕೆ.ಮಹಾಂತೇಶ ಸಿಐಟಿಯು ರಾಜ್ಯ ಸಮಿತಿ ಪರವಾಗಿ ತಯಾರಿಸಲಾದ 11 ಬೇಡಿಕೆಗಳನ್ನು ವಿವರವಾಗಿ ಸಚಿವರು ಮತ್ತು ಅಧಿಕಾರಿಗಳ ಮುಂದೆ ಮಂಡಿಸಿದರು.

"ಕೊವಿಡ್ ಕ್ಲೋಸ್‌ಡೌನ್" ಕುರಿತ ಸರಕಾರೀ ಆದೇಶದಲ್ಲಿ ಕೋವಿಡ್ ಸಾಂಕ್ರಾಮಿಕದ ಸರಪಳಿಯನ್ನು ಮುರಿಯುವ ಸಲುವಾಗಿ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಅತ್ಯಗತ್ಯವೆಂದು ಸರ್ಕಾರವು ಭಾವಿಸಿರುವುದಾಗಿ ಹಾಗು ಸಾರ್ವಜನಿಕರು ಸಹಕರಿಸಲು ಕೋರಲಾಗಿದೆ.

ಆದರೆ ಸರ್ಕಾರಿ ಆದೇಶದ ಪ್ರತಿ ಅಂಶಗಳು ಕೂಡ ಸರ್ಕಾರ ಪ್ರಕಟಿಸಿರುವ ಉದ್ದೇಶಕ್ಕೆ ಪೂರಕವಾಗಿಲ್ಲ ಎಂಸು ಅಭಿಪ್ರಾಯ ಪಟ್ಟಿರುವ ಸಿಐಟಿಯು, ತಾನು ಮುಂದಿಟ್ಟಿರುವ 11 ಸಲಹೆಗಳನ್ನು ಹಾಗು ಬೇಡಿಕೆಗಳನ್ನು ಸರ್ಕಾರ ತುರ್ತಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದೆ. ಸಿಐಟಿಯು ಮುಂದಿಟ್ಟಿರುವ 11 ಬೇಡಿಕೆಗಳನ್ನು ಈ ಮುಂದೆ ಕೊಡಲಾಗಿದೆ:

1. ಬೆಂಗಳೂರು ನಗರದಲ್ಲಿ ಅಗತ್ಯವಾದ ಅರೋಗ್ಯ ನೆರವಿಲ್ಲದೇ ಜನ ತತ್ತರಿಸುವ ಪರಿಸ್ಥಿತಿ ಇದೆ. ರೋಗಿಗಳ ಸಂಖ್ಯೆಗೆ ಅನುಗುಣವಾಗಿ ವೆಂಟಿಲೇಟರ್‌ಗಳು, ಐಸಿಯು ಹಾಸಿಗೆ, ಆಕ್ಷಿಜನ್ ಹಾಗು ಜೀವರಕ್ಷಕ ಔಷದಿಗಳು ಲಭ್ಯವಾಗುತ್ತಿಲ್ಲ. ಖಾಸಗಿ ಅಸ್ಪತ್ರೆಗಳನ್ನು ಒಳಗೊಂಡು ಅನೇಕ ಕಡೆಗಳಲ್ಲಿ ಜನರು ಪರದಾಡುವ ಸ್ಥಿತಿ ಇದೆ. ಆರೋಗ್ಯ ಕಾರ್ಯಕರ್ತರನ್ನು ಸೇವೆಯಲ್ಲಿ ಮುಂದುವರಿಸಲು ಅಗತ್ಯ ಕ್ರಮಗಳು ಹಾಗು ಅವರಿಗೆ ನೀಡಬೇಕಾದ ವಿಶೇಷ ಸವಲತ್ತುಗಳ ಕುರಿತು ಯಾವುದೇ ಪ್ರಸ್ತಾಪಗಳಿಲ್ಲ. ಆರೋಗ್ಯ ಸೇವೆ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕ್ಷೇತ್ರವಾಗಿದೆ. ಕೋವಿಡ್ ಆರೋಗ್ಯ ಸೇವೆಗಳಿಗಾಗಿ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ವೈದ್ಯಕೀಯ ಹಾಗು ವೈದ್ಯಕೇತರ ಸಿಬ್ಬಂಧಿಗಳಿಗೆ ಸರಿಯಾದ ವೇತನ ಹಾಗು ಪ್ರೋತ್ಸಾಹಧನದ ಪಾವತಿಯಾಗುತ್ತಿಲ್ಲ. ಅವರಿಗೆ ನೀಡಲಾಗಿರುವ ವಿಮೆ ಸೌಲಭ್ಯವನ್ನು ನವೀಕರಿಸಲಾಗಿದೆಯಾದರು ಹಳೆಯ ಬಾಕಿಗಳು ಪಾವತಿಯಾಗಿಲ್ಲ. ಅವರಿಗೆ ನೀಡಬೇಕಾದ ರಕ್ಷಣಾ ಸಾಧನಗಳನ್ನು ಪೂರೈಸುವುದರಲ್ಲಿಯು ಹಲವು ಕೊರತೆಗಳಿವೆ. ಮುಂಚೂಣಿ ಕಾರ್ಯಕರ್ತರಾಗಿ ಜೀವದ ಹಂಗು ತೊರೆದು ಕೆಲಸ ಮಾಡುವ ಈ ಕಾರ್ಮಿಕರಿಗೆ ಬೆಂಬಲ ಹಾಗು ನೆರವಾಗಿ ನಿಲ್ಲಬೇಕಾಗಿದ್ದು ಈ ಸಂದರ್ಭದಲ್ಲಿ ಸರ್ಕಾರದ ಕರ್ತವ್ಯವಾಗಿರುತ್ತದೆ.

ಸರ್ಕಾರಿ ಅಸ್ಪತ್ರೆಗಳಲ್ಲಿ ಆಕ್ಷಿಜನ್ ಪೂರೈಸಲು ಅಗತ್ಯವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಈ ಕೂಡಲೆ ಕಾರ್ಯಪ್ರವೃತರಾಗಬೇಕು.

ಕೋವಿಡ್ ಹಾಗು ಇತರೆ ರೋಗಗಳಿಗೆ ತುತ್ತಾಗಿ ಮರಣಹೊಂದುವವರು ಮಾತ್ರವಲ್ಲದೆ ಸಹಜಮರಣ ಹೊಂದುವವರ ಅಂತಿಮಕ್ರಿಯೆಗಳನ್ನು ನಡೆಸುವುದು ಕಷ್ಟವಾಗುತ್ತಿದೆ. ಇದಕ್ಕೆ ಪೂರಕವಾದ ಕ್ರಮಗಳನ್ನು ಸರ್ಕಾರ ಕೂಡಲೇ ಕೈಗೊಳ್ಳಬೇಕು.

ಚಿತಾಗಾರಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕಳೆದ 10 ತಿಂಗಳುಗಳಿಂದ ವೇತನ ಪಾವತಿಯಾಗಿಲ್ಲ ಎಂಬ ವಿಷಯವಾಗಿ ಸರ್ಕಾರದ ಸ್ಪಂದನೆ ಬಂದಿಲ್ಲ ಎಂಬುದನ್ನು ಗಮನಸಬಹುದಾಗಿದೆ.

ವಿಮೆ ಸೌಲಭ್ಯವನ್ನು ಚಿತಾಗಾರಗಳಲ್ಲಿ ಕೆಲಸಮಾಡುವ ಕಾರ್ಮಿಕರು, ಪಂಚಾಯಿತಿ ನೌಕರರಿಗೆ, ಮುನಿಸಿಪಲ್ ಗುತ್ತಿಗೆ ಕಾರ್ಮಿಕರು, ಅಂಗನವಾಡಿ, ಆಶಾ ಹಾಗು ಸ್ಕೀಂ ನೌಕರರಿಗೆ ವಿಸ್ತರಿಸಬೇಕು.

2. ಖಾಸಗಿ ವಲಯದಲ್ಲಿನ ಖಾಯಂ ಹಾಗು ಗುತ್ತಿಗೆ ಕಾರ್ಮಿಕರಿಗೆ/ಉದ್ಯೋಗಿಗಳಿಗೆ ಹಾಗು ಸರ್ಕಾರಿರಂಗದಲ್ಲಿನ ಗುತ್ತಿಗೆ/ಅರೆಗುತ್ತಿಗೆ/ಹಂಗಾಮಿ ಕಾರ್ಮಿಕರಿಗೆ ಅವರು ಕೋವಿಡ್ ರೋಗಕ್ಕೆ ತುತ್ತಾಗುವ ದಿನಗಳಿಗೆ ಅಥವಾ ಪ್ರಥಮ ಸಂಪರ್ಕಕ್ಕೆ ಸಿಲುಕಿ ಸಾಂಕ್ರಾಮಿಕ ರೋಗಿಗಳಾಗುವ ಸಂದರ್ಭಗಳಲ್ಲಿ ವೇತನ ಸಹಿತ ರಜೆ ಸೌಲಭ್ಯಗಳು ಲಭ್ಯವಾಗುತ್ತಿಲ್ಲ. ರಾಜ್ಯದಲ್ಲಿನ ಸರ್ಕಾರಿ/ಖಾಸಗಿ ರಂಗದಲ್ಲಿ ಕೋವಿಡ್ ರೋಗಿಗಳಾಗಿರುವ ಎಲ್ಲರಿಗು ಅವರ ಚಿಕಿತ್ಸಾ ಅವಧಿಯನ್ನು ವೇತನ ಸಹಿತ ರಜೆ ಎಂದು ಪರಿಗಣಿಸಲು ಅಗತ್ಯವಾದ ಸರ್ಕಾರದ ಅದೇಶವೊಂದನ್ನು ಕೂಡಲೇ ರಾಜ್ಯ ಸರ್ಕಾರವು ಹೊರಡಿಸಬೇಕು.

3. 28.04.2021 ರಿಂದ 12.05.2021ರ ವರೆಗೆ ಘೋಷಿಸಲಾಗಿರುವ ಕ್ಲೋಸ್ ಡೌನ್ ದಿನಗಳನ್ನು ವೇತನ ಸಹಿತ ರಜೆ ಎಂದು ಘೋಷಿಸ ಬೇಕು. ಖಾಸಗಿರಂಗಕ್ಕು ಇದು ಅನ್ವಯವಾಗಬೇಕು. ಈ ಅವಧಿಯಲ್ಲಿ ಯಾವುದೇ ಕಾರ್ಖಾನೆಯ ಮಾಲಿಕರು ಕಾರ್ಮಿಕರ ವೇತನ ಕಡಿತ ಮಾಡುವುದು, ಗುತ್ತಿಗೆ ಕಾರ್ಮಿಕರನ್ನು ಒಳಗೊಂಡು ಯಾವುದೆ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವುದು, ಲೇ–ಆಫ್ ಘೋಷಿಸುವುದು ಮುಂತಾದ ಯಾವುದೇ ಕ್ರಮಗಳಲ್ಲಿ ತೊಡಗುವುದು ಕಾನೂನು ಬಾಹಿರವೆಂದು ಘೊಷಿಸಬೇಕು.

4. ಕರ್ನಾಟಕ ರಾಜ್ಯದಲ್ಲಿ ಯಾವುದೇ ಕಾರ್ಮಿಕರಿಗೆ ಹಾಗು ಸರ್ಕಾರಿ ಸೇವೆಗಳಲ್ಲಿ ತೊಡಗಿರುವವರಿಗೆ, ಎಲ್ಲಾ ಕೈಗಾರಿಕೆಗಳ ಅಕುಶಲ ಕಾರ್ಮಿಕರಿಗೆ ಮಾಸಿಕ ಕನಿಷ್ಟ ವೇತನ ರೂ. 25,000/–ವೆಂದು ಘೋಷಿಸ ಬೇಕು. ಅರೆಕುಶಲ, ಕುಶಲ ಹಾಗು ಅತಿಕುಶಲ ಕಾರ್ಮಿಕರಿಗೆ ಶೇ 10 ರಷ್ಟು ಹೆಚ್ಚುವರಿ ಕನಿಷ್ಟವೇತನವನ್ನು ಬೆಲೆ ಏರಿಕೆಗೆ ಅನುಗುಣವಾಗಿ ಬದಲಾಗುವ ತುಟ್ಟಿ ಭತ್ಯೆಯೊಂದಿಗೆ ಪ್ರಕಟಿಸಬೇಕು.

5. ಕೆಲಸದ ಸ್ಥಳಗಳಲ್ಲಿ ಜನರ ಸಂಖ್ಯಾ ಒತ್ತಡವನ್ನು ಕಡಿಮೆ ಮಾಡಲು ಕೆಲಸದ ಅವಧಿಯನ್ನು ದಿನಕ್ಕೆ 6 ಗಂಟೆ ಅಥವಾ ವಾರಕ್ಕೆ 36 ಗಂಟೆಯೆಂದು ಪ್ರಕಟಿಸಬೇಕು. ಒಂದು ದಿನದಲ್ಲಿ ನಾಲ್ಕು ಶಿಫ್ಟ್ ಕೆಲಸ ನಡೆಸಲು ಅವಕಾಶ ನೀಡಬೇಕು.

6. ಜನರನ್ನು ಅವರ ದೈನಂದಿನ ಕೆಲಸಗಳಿಗೆ ಹಾಜರಾಗಲು ಸಾಧ್ಯವಿಲ್ಲದ ರೀತಿಯ ನಿಯಮಗಳನ್ನು ಪ್ರಕಟನೆ ಮಾಡುವ ಪ್ರತಿ ಸಂದರ್ಭದಲ್ಲಿಯು ಸಾಮಾನ್ಯ ಜನರ ಉದ್ಯೋಗ ಹಾಗು ವೇತನವನ್ನು ರಕ್ಷಿಸುವ ನಿಯಮಗಳನ್ನು ಒಳಗೊಂಡಂತೆ ಪ್ರಕಟಿಸಬೇಕು. ಆ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು.

7. ಸರ್ಕಾರದ ಈ ಪ್ರಕಟನೆಯಿಂದ ದೈನಂದಿನ ಆದಾಯ ಕಳೆದುಕೊಳ್ಳುವ ಆಟೋ, ಟ್ಯಾಕ್ಸಿ ಚಾಲಕರು, ಬೀದಿಬದಿ ವ್ಯಾಪಾರಿಗಳು, ಮನೆ ಕೆಲಸಗಾರರು, ವಿವಿದ ವಾಣಿಜ್ಯ ಸಂಕೀರಣಗಳಲ್ಲಿ ಹಾಗು ಅಂಗಡಿ ಮುಗ್ಗಟ್ಟುಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಹಮಾಲಿ, ಬೀಡಿ ಮುಂತಾದ ಹಲವು ಅಸಂಘಟಿತ ಕಾರ್ಮಿಕರಿಗೆ ಕೂಡಲೇ 10 ಸಾವಿರ ಪರಿಹಾರ ಘೊಷಣೆಯನ್ನು ಮಾಡಬೇಕು.

8. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಡಿಯಲ್ಲಿ ನೋಂದಾವಣೆಯಾದ ಎಲ್ಲ ಕಾರ್ಮಿಕರಿಗೆ ವಾರಕ್ಕೆ ರೂ 2000 ದಂತೆ ತಿಂಗಳಿಗೆ ರೂ8000 ದಂತೆ ಮುಂದಿನ ಆರು ತಿಂಗಳು ನೀಡಬೇಕು ಮತ್ತು ಕೂಡಲೇ ಕೊವೀಡ್ ಕಲ್ಯಾಣ ಯೋಜನೆಗಳನ್ನು ಕಟ್ಟಡ ಕಾರ್ಮಿಕರಿಗೆ ಒದಗಿಸಬೇಕು.

9. ವಾರ್ಷಿಕ ಐದು ಲಕ್ಷಕ್ಕಿಂತಲು ಕಡಿಮೆ ಆದಾಯ ಇರುವ ಪ್ರತಿ ಕುಟುಂಬಕ್ಕು ರೂ. 10,000/– ಪರಿಹಾರ ಧನವನ್ನು ನೀಡಬೇಕು. ರಾಜ್ಯದಲ್ಲಿ ಜನಸಂಖ್ಯೆಯ ಆಧಾರದಲ್ಲಿ ನೋಡಿದರೆ 1.5 ಕೋಟಿ ಕುಟುಂಬಗಳಿರುತ್ತವೆ. ಈ ಪರಿಹಾರ ಕೊಡಲು ಒಟ್ಟು 15000 ಕೋಟಿಗಳಷ್ಟು ಹಣ ಇದ್ದರೆ ಸಾಕಾಗುತ್ತದೆ. ಕರ್ನಾಟಕ ರಾಜ್ಯದಿಂದ ಕೇಂದ್ರದ "ಪಿಎಂ ಕೇರ್ಸ್" ನಿಧಿಗೆ ನೀಡಲಾಗಿರುವ ಸಾವಿರಾರು ಕೋಟಿಗಳು ಹಾಗು ರಾಜ್ಯದಲ್ಲಿನ ಸಿಎಸ್‌ಆರ್ ಫಂಡ್‌ಗಳನ್ನು ಕ್ರೋಢಿಕರಿಸಿದರೆ ಇದು ದೊಡ್ಡ ವೆಚ್ಚವಾಗಲಾರದು.

10. ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆಜೆ ಆಹಾರ ಧಾನ್ಯವನ್ನು ಆರು ತಿಂಗಳುಗಳ ಅವಧಿಗೆ ರೇಷನ್ ಮೂಲಕ ಉಚಿತವಾಗಿ ಹಂಚಿಸಲು ಸರ್ಕಾರ ತೀರ್ಮಾನಸಬೇಕು. ಈ ರೀತಿಯ ಜನಪರ ತೀರ್ಮಾನಗಳು ಜನರಲ್ಲಿ ವಿಶ್ವಾಸ ಮೂಡಿಸುವುದರೊಂದಿಗೆ ಈ ಸಂಕಷ್ಟ ಕಾಲದಲ್ಲಿ ಬೇರೆ ಊರುಗಳಿಗೆ ತೆರಲುವುದನ್ನು ತಡೆಗಟ್ಟುವ ಕ್ರಮವಾಗಿರುತ್ತದೆ.

11. ಮೊದಲ ಸಾಂಕ್ರಾಮಿಕ ಅಲೆಯ ಸಂದರ್ಭದಲ್ಲಿ ರಾಜ್ಯದ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಸಾವಿರಾರು ಜನ ಕಾರ್ಯಕರ್ತರುಗಳನ್ನಾಗಿ ತಮ್ಮನ್ನು ತೊಡಗಿಸಿಕೊಂಡು ಕೋವಿಡ್ ವಿರುದ್ಧದ ಸಮರದಲ್ಲಿ ಸರ್ಕಾರಕ್ಕೆ ನೆರವಾಗಿದ್ದು ಮಾತ್ರವಲ್ಲದೆ ಹಲವು ಸವಲತ್ತುಗಳು ಯೋಗ್ಯ ಜನರನ್ನು ತಲುಪುವುದರಲ್ಲಿಯು ಪ್ರಮುಖ ಪಾತ್ರ ವಹಿಸಿದರು. ಈ ಎರಡನೇಯ ಅಲೆಯ ಸಂದರ್ಭದಲ್ಲಿಯು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರನ್ನು ಕೋವಿಡ್ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳಲು ಮುಂದಾಗ ಬೇಕು. ರಾಜ್ಯದ ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರಮುಖ ಮುಖಂಡರುಗಳೊಂದಿಗೆ ಕೂಡಲೇ ಸಭೆಯೊಂದನ್ನು ಕರೆದು ಚರ್ಚಿಸಬೇಕು.

ಈ ಬಾರಿಯೂ ಸೋಂಕು ಮತ್ತು ಸಾವುಗಳ ನಡುವೆ ಬಂದಿದೆ ಮೇದಿನ ಬಂಡವಾಳಶಾಹಿ ಶೋಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಯಲು ಮಾಡುತ್ತಿದೆ

ಕಾರ್ಮಿಕ ವರ್ಗ ಜನಗಳ ತಕ್ಷಣದ ಬೇಡಿಕೆಗಳತ್ತ ಗಮನ ಸೆಳೆಯಬೇಕಾಗಿದೆ–ಸಿಐಟಿಯು

ಈ ವರ್ಷವೂ ದೇಶಾದ್ಯಂತ ಕೋವಿಡ್ 19 ನ ಎರಡನೇ ಅಲೆಯ ಅಭೂತಪೂರ್ವ ಸಂಖ್ಯೆಯ ಸೋಂಕು ಮತ್ತು ಸಾವುಗಳ ಮಧ್ಯೆ ಮೇ ದಿನವನ್ನು ಆಚರಿಸಬೇಕಾಗಿರುವುದು ವಿಷಾದಕರ ಎಂದು ಸಿಐಟಿಯು ಹೇಳಿದೆ.

ಎರಡನೇ ಅಲೆಯ ಕುರಿತ ಮುನ್ಸೂಚನೆಗಳು ಮತ್ತು ಎಚ್ಚರಿಕೆಗಳು ಮತ್ತು ಅಪಾರ ಪ್ರಮಾಣದ ಪ್ರಾಣಹಾನಿ, ಉದ್ಯೋಗ ನಷ್ಟ, ಆದಾಯದ ಕುಸಿತದ ಕಹಿ ಅನುಭವದ ಹೊರತಾಗಿಯೂ, ಬಿಜೆಪಿ ಸರ್ಕಾರವು ಕಾರ್ಮಿಕರನ್ನು, ವಿಶೇಷವಾಗಿ ವಲಸೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರನ್ನು ರಕ್ಷಿಸಲು ಏನನ್ನೂ ಮಾಡಲಿಲ್ಲ. ನಗದು ವರ್ಗಾವಣೆ, ಉಚಿತ ಆಹಾರ ಧಾನ್ಯಗಳು, ಸಾರ್ವಜನಕ ಆರೋಗ್ಯ ರಕ್ಷಣೆಯನ್ನು ಬಲಪಡಿಸುವುದು ಇತ್ಯಾದಿಗಳ ಬಗ್ಗೆ ಕಾರ್ಮಿಕ ಸಂಘಗಳು, ಪ್ರಖ್ಯಾತ ಅರ್ಥಶಾಸ್ತ್ರಜ್ಞರು ಮತ್ತು ಇತರ ಹಲವು ವರ್ಗದ ಜನರು ಎತ್ತಿದ ಬೇಡಿಕೆಗಳನ್ನು ಅಹಂಕಾರದಿಂದ ಬದಿಗೊತ್ತಲಾಯಿತು.

ಇತ್ತ ದೇಶದ ಜನರಿಗಾಗಿ ಲಸಿಕೆ ಉತ್ಪಾದನೆ ಮತ್ತು ಪೂರೈಕೆಯನ್ನು ಹೆಚ್ಚಿಸುವಲ್ಲಿಯೂ ಬಿಜೆಪಿ ಸರ್ಕಾರ ವಿಫಲವಾಗಿದೆ. ನಮ್ಮ ಜನರಿಗೆ ಸಾಕಷ್ಟು ಪ್ರಮಾಣದ ಲಸಿಕೆ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಲು ಇದು ನಿರ್ಲಕ್ಷ್ಯ ವಹಿಸಿದೆ. ಕೋವಿಡ್ 19ರ ವಿರುದ್ಧ ಸಾರ್ವತ್ರಿಕ ಉಚಿತ ವ್ಯಾಕ್ಸಿನೇಷನ್ ಖಾತರಿಪಡಿಸುವ ಬದಲು, ಬಿಜೆಪಿ ಸರ್ಕಾರ ಈಗ ತನ್ನ ಜವಾಬ್ದಾರಿಯನ್ನು ತ್ಯಜಿಸಿದೆ ಮತ್ತು ಮೇ 1 ರಿಂದ 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡುವ ಕುರಿತು ಘೋಷಿಸುವಾಗಲೇ, ಅದರ ಹೊಣೆಯನ್ನು ರಾಜ್ಯ ಸರಕಾರಗಳಿಗೆ ದಾಟಿಸಿದೆ, ಅವು ಮುಕ್ತ ಮಾರುಕಟ್ಟೆಯಲ್ಲಿ ಲಸಿಕೆಯನ್ನು ಹೆಚ್ಚಿನ ದರದಲ್ಲಿ ಖರೀದಿಸಿ ಕೊಡಬೇಕೆಂದು ರಾಜ್ಯ ಸರ್ಕಾರಗಳನ್ನು ಕೇಳಿದೆ.

ಉದ್ಯೋಗದಾತರು ಈಗಾಗಲೇ ವಿಪತ್ತು ನಿರ್ವಹಣಾ ಕಾಯ್ದೆಯಡಿ ಸರ್ಕಾರದ ಆದೇಶಗಳ ಲಾಭ ಪಡೆಯಲು ಪ್ರಾರಂಭಿಸಿದ್ದಾರೆ ಮತ್ತು ಉದ್ಯೋಗ ಕಡಿತ, ವೇತನ ಕಡಿತ ಮತ್ತು ಕಾರ್ಮಿಕರ ಜೀವನೋಪಾಯ ಮತ್ತು ಜೀವನದ ಮೇಲೆ ಇಂತಹ ಇತರ ದಾಳಿಗಳನ್ನು ಕೈಗೊಳ್ಳುತ್ತಿದ್ದಾರೆ. ಹೆಚ್ಚಿನ ರಾಜ್ಯ ಸರ್ಕಾರಗಳು ವೀಕ್ಷಕರಾಗಿ ಉಳಿದಿವೆ. ಸಾವಿರಾರು ವಲಸೆ ಕಾರ್ಮಿಕರು ಈಗಾಗಲೇ ತಮ್ಮ ಹುಟ್ಟೂರಿನ ಸ್ಥಳಗಳಿಗೆ ಮರಳಲು ಕೈಗಾರಿಕಾ ಕೇಂದ್ರಗಳನ್ನು ಬಿಡಲು ಪ್ರಾರಂಭಿಸಿದ್ದಾರೆ.

ದುಡಿಯುವ ಜನರ ಮೇಲೆ ಇದೇ ರೀತಿಯ ಆಕ್ರಮಣವು ಮೊದಲ ಅಲೆಯಲ್ಲಿ ಕಂಡು ಬಂದಿತ್ತು ಮತ್ತು ನಂತರ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಕೋವಿಡ್‌ನ ನಂತರದ ಅಲೆಗಳ ಸಮಯದಲ್ಲಿಯೂ ಕಂಡುಬರುತ್ತಿದೆ.

ಆದ್ದರಿಂದ, ಈ ಮೇ ದಿನ, ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಐಕತ್ಯೆಯನ್ನು ಪುನರುಚ್ಚರಿಸುವುದರ ಜೊತೆಗೆ, ಬಂಡವಾಳಶಾಹಿ ವ್ಯವಸ್ಥೆಯ ಅಂತರ್ಗತ ಶೋಷಣೆಯ ಗುಣವನ್ನು ಬಯಲು ಮಾಡುತ್ತಿರುವ ಕಾರ್ಮಿಕ ವರ್ಗ ಮತ್ತು ದುಡಿಯುವ ಜನರ ಮೇಲೆ, 8 ಗಂಟೆಗಳ ಕೆಲಸದ ದಿನದ ಮೇಲೆ ಮತ್ತು ಕಾರ್ಮಿಕರ ಇತರ ಕಠಿಣ ಹೋರಾಟಗಳಿಂದ ಪಡೆದ ಹಕ್ಕುಗಳ ಮೇಲೆ ಕಾರ್ಮಿಕ ಸಂಹಿತೆಗಳ ಮೂಲಕ ಬಿಜೆಪಿ ಸರ್ಕಾರದ ನಡೆಯುತ್ತಿರುವ ದಾಳಿಗಳನ್ನು ವಿರೋಧಿಸಿ ಸಮಾಜವಾದಿ ಸಮಾಜದ ರಚನೆಯ ಹೋರಾಟಕ್ಕೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು, ಜತೆಗೆ, ಜನರ ಈ ಕೆಳಗಿನ ತಕ್ಷಣದ ಬೇಡಿಕೆಗಳತ್ತ ಗಮನ ಹರಿಸಬೇಕು ಎಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ:

- ಲಾಕ್ಡೌನ್ ಅಥವಾ ಕರ್ಫ್ಯೂ ವಿಧಿಸಿದಲ್ಲೆಲ್ಲಾ ಮತ್ತು ಕೆಲಸಕ್ಕೆ ಹೋಗಲು ಸಾಧ್ಯವಾಗದ ಎಲ್ಲಾ ಕಾರ್ಮಿಕರಿಗೆ ಯಾವುದೇ ಕಡಿತವಿಲ್ಲದೆ ವೇತನವನ್ನು ಪಾವತಿಸಲಾಗುವುದು ಎಂದು ಖಚಿತಪಡಿಸಬೇಕು.
- ವೈರಸ್ ಹರಡುವುದನ್ನು ತಡೆಗಟ್ಟಲು ಚಲನೆ ಮೇಲೆ ನಿರ್ಬಂಧಗಳನ್ನು, ಕರ್ಫ್ಯೂ ಇತ್ಯಾದಿಗಳಿಗೆ ವಿಧಿಸುವ ಸರ್ಕಾರದ ಯಾವುದೇ ಕ್ರಮವು ಎಲ್ಲಾ

ಪುಟ 14 ನೋಡಿ




ಮೋದಿ ಸರ್ಕಾರವೇ ಒಂದು ದೊಡ್ಡ ಹಗರಣ



ಸ್ವಾತಂತ್ರ್ಯಾನಂತರದ ಅತ್ಯಂತ ದೊಡ್ಡ ಮಾನವ ಅನಾಹುತಕ್ಕೆ ಭಾರತ ಸಾಕ್ಷಿಯಾಗುತ್ತಿದೆ. ಈ ಮಹಾವಿನಾಶಕ್ಕೆ ನರೇಂದ್ರ ಮೋದಿ ಹಾಗೂ ಅವರ ಸರ್ಕಾರವೇ ಹೊಣೆ ಎಂದು ಹೇಳಲು ಐತಿಹಾಸಿಕ ಸಂಶೋಧನೆಯೇನೂ ಬೇಕಿಲ್ಲ. ಆಕ್ಸಿಜನ್, ಬೆಡ್, ಔಷಧಿಗಳ ಕೊರತೆ, ಜತೆಗೆ ಲಸಿಕೆ ಕೊರತೆ ಹಗರಣಗಳೆ ಆಗಿವೆ, ಇವೆಲ್ಲಕ್ಕಿಂತ ಹೆಚ್ಚಾಗಿ ಮೋದಿ ಸರ್ಕಾರವೇ ಒಂದು ಹಗರಣವಾಗಿ ಬಿಟ್ಟಿದೆ. ಮೋದಿ ಸರ್ಕಾರ ಎಂಥ ತಪ್ಪುಗಳನ್ನು ಮಾಡುತ್ತಿದೆ ಎನ್ನುವುದಕ್ಕೆ ಏಪ್ರಿಲ್ 19ರಂದು ಪ್ರಕಟಿಸಿದ ಲಸಿಕೆ ನೀತಿಗಿಂತ ದೊಡ್ಡ ಉದಾಹರಣೆ ಬೇಕಿಲ್ಲ.

*** ಪ್ರಕಾಶ್ ಕಾರಟ್**

ಭಾರತದಲ್ಲಿ ಅನಾವರಣಗೊಳ್ಳುತ್ತಿರುವ ಕೋವಿಡ್-19 ದುರಂತ ನಿಜಕ್ಕೂ ಬೃಹತ್ ಪ್ರಮಾಣದ್ದಾಗಿದೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಸಿಗದೆ ರೋಗಿಗಳು ಸಾಯುತ್ತಿರುವ ಹಗರಣ ಇದೆ; ಆಸ್ಪತ್ರೆ ಬೆಡ್ ಮತ್ತು ಔಷಧಿಗಳು ಸಿಗದೆ ರೊಗಿಗಳು ಪರದಾಡುವ ಹಗರಣ ಇದೆ; ಕೋವಿಡ್ ಗಹನತೆಯನ್ನು ಮುಚ್ಚಿಟ್ಟಿದ್ದರಿಂದ ಜನರು ಸಾಯುತ್ತಿರುವ ಹಗರಣವೂ ಇದೆ. ಲಸಿಕೆ ಕೊರತೆಯ ಹಗರಣವೂ ಇದೆ. ಮತ್ತು ಸರ್ಕಾರವೇ ಮಂಜೂರು ಮಾಡಿರುವ ಲಾಭಕೋರತನ ಕೂಡ. ಆದರೆ ಇವೆಲ್ಲಕ್ಕಿಂತ ದೊಡ್ಡ ಹಗರಣವೆಂದರೆ ಸ್ವತಃ ಮೋದಿ ಸರ್ಕಾರವೇ.

ಸ್ವಾತಂತ್ರ್ಯನಂತರದ ಅವಧಿಯಲ್ಲೇ ಭಾರತ ಅತ್ಯಂತ ದೊಡ್ಡ ಮಾನವ ಅನಾಹುತಕ್ಕೆ ಸಾಕ್ಷಿಯಾಗುತ್ತಿದೆ. 1943ರಲ್ಲಿನ ಬಂಗಾಳ ಕ್ಷಾಮದ ನಂತರ ಮಾನವ ಜೀವ ನಷ್ಟವಾದ ಲೆಕ್ಕದಲ್ಲಿ ಇದು ಅತ್ಯಂತ ದೊಡ್ಡ ಕೇಡು. ಆ ಕ್ಷಾಮದಲ್ಲಿ ಹಸಿವು, ಅಪೌಷ್ಟಿಕತೆ ಮತ್ತು ರೋಗರುಜಿನಗಳಿಂದ ಸುಮಾರು 30 ಲಕ್ಷ ಜನರು ಮೃತಪಟ್ಟಿದ್ದರು. ಆ ಮಹಾ ಅನಾಹುತಕ್ಕೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಬ್ರಿಟಿಷ್ ರಾಜ್ಯಭಾರ ಅನುಸರಿಸಿದ ವಸಾಹತುಶಾಹೀ ನೀತಿಗಳು ಕಾರಣವಾಗಿದ್ದವು. ದೇಶ 'ವಿಭಜನೆ' ವೇಳೆಯ ದೊಡ್ಡಪ್ರಮಾಣದ ಸಾವುಗಳನ್ನು ಇಲ್ಲಿ ಹೋಲಿಕೆ ಮಾಡಲಾಗದು. ಯಾಕೆಂದರೆ ಅದಾಗಿದ್ದು ಪರಸ್ಪರ ಮಾನವಹತ್ಯೆ ಮತ್ತು ಕೋಮುವಾದಿ ಕೊಲೆಗಳಿಂದಾಗಿ ಎನ್ನುವುದು ಗಮನಾರ್ಹ.

ಪ್ರಸಕ್ತ ಮಹಾಸೋಂಕಿನ ಸಂದರ್ಭದಲ್ಲಿ ಹೇಳುವುದಾದರೆ, ಅಧಿಕೃತ ಅಂಕಿಸಂಖ್ಯೆಗಳು ಏನೇ ಹೇಳಿದರೂ, ಕನಿಷ್ಠ 10 ಲಕ್ಷ ಜನರು ಸೋಂಕಿನಿಂದ ಮೃತಪಟ್ಟಿದ್ದು ಸಾವಿನ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಸರ್ಕಾರ ಅಧಿಕೃತವಾಗಿ ಪ್ರಕಟಿಸಿರುವ ಎರಡು ಲಕ್ಷ ಸಾವಿನ ಮಾಹಿತಿಯ ಐದು ಪಟ್ಟು ಮಾಡಿರುವ ಒಂದು ಮಿತ ಅಂದಾಜು.

ಈ ಮಹಾವಿನಾಶಕ್ಕೆ ನರೇಂದ್ರ ಮೋದಿ ಹಾಗೂ ಅವರ ಸರ್ಕಾರವೇ ಹೊಣೆ ಎಂದು ಹೇಳಲು ಐತಿಹಾಸಿಕ ಸಂಶೋಧನೆಯನ್ನು ನಡೆಸಬೇಕೆಂದೇನೂ ಇಲ್ಲ. ಮೋದಿ ಸರ್ಕಾರ ಎಂಥ ತಪ್ಪುಗಳನ್ನು ಮಾಡುತ್ತಿದೆ ಎನ್ನುವುದಕ್ಕೆ ಏಪ್ರಿಲ್ 19ರಂದು ಪ್ರಕಟಿಸಿದ ಲಸಿಕೆ ನೀತಿಗಿಂತ ದೊಡ್ಡ ಉದಾಹರಣೆ ಬೇಕಿಲ್ಲ.

ಸದ್ಯಕ್ಕೆ ಭಾರತ ಮತ್ತು ಜಗತಿನ ವಿವಿಧ ಭಾಗಗಳಲ್ಲಿ ಆಕ್ಸಿಜನ್ ಕೊರತೆಯಿಂದ ರೋಗಿಗಳು ಉಸಿರಾಡಲು ಒದ್ದಾಡುತ್ತಿರುವ ಭಯಾನಕ ದೃಶ್ಯಗಳು ಆಸ್ಪತ್ರೆಗಳ ಒಳಗಡೆಯೂ ಹೊರಗಡೆಯೂ ಕಾಣಿಸುತ್ತಿವೆ. ಆಮ್ಲಜನಕ ಉತ್ಪಾದನೆ, ಪೂರೈಕೆ ಮೊದಲಾದ ವಿಚಾರಗಳು ಹೆಚ್ಚಿನ ಗಮನವನ್ನು ಸೆಳೆಯಲಿವೆ. ಆದರೆ, ಸದ್ಯೋಭವಿಷ್ಯದಲ್ಲಿ 18 ವರ್ಷ ದಾಟಿದ ಎಲ್ಲ ವಯಸ್ಕರಿಗೆ ಲಸಿಕೆ ಹಾಕುವ ಲಸಿಕೆ ಅಭಿಯಾನ ನಮ್ಮೆಲ್ಲರ ಗಮನ ಸೆಳೆಯಲಿದೆ. ಸರ್ಕಾರದ ಲಸಿಕೆ ಕಾರ್ಯಕ್ರಮವು ಅತ್ಯಂತ ಉಪೇಕ್ಷೆಯ, ತಾರತಮ್ಯದ ಮತ್ತು ಹಾಗೂ ಅಸಮತ್ವದ ಧೋರಣೆಯಿಂದ ರೂಪಿಸಿರುವಂತದ್ದು. ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ. ಹಾಗೂ 18ರಿಂದ 45 ವರ್ಷ ಗುಂಪಿನವರಿಗೆ ಲಸಿಕೆ ನೀಡುವ ಸಂಪೂರ್ಣ ಹೊಣೆಯನ್ನು ರಾಜ್ಯಗಳ ಹೆಗಲಿಗೆ ಹೊರಿಸಿದೆ. ಅದಕ್ಕೆ ಹಣ ಹೊಂದಿಸುವ ಶಕ್ತಿ ರಾಜ್ಯಗಳಿಗೆ ಇಲ್ಲ. ಲಸಿಕೆ ಉತ್ಪಾದನೆಯ 50ಶೇ.ವನ್ನು ರಾಜ್ಯ ಸರಕಾರಗಳು ಮತ್ತು ಖಾಸಗಿ ಅಸ್ಪತ್ರೆಗಳು ನೇರವಾಗಿ ಖರೀದಿಸಬೇಕು ಎಂದು ಪ್ರಕಟಿಸುವ ಮೂಲಕ, ಸೀಮಿತ ಲಸಿಕೆ ಉತ್ಪಾದನೆಯನ್ನು ಪಡೆದುಕೊಳ್ಳಲು ರಾಜ್ಯಗಳ ನಡುವೆ ಪರಸ್ಪರರನ್ನು ಕುಂಠಿತಗೊಳಿಸುವ ಸ್ಪರ್ಧೆಗೆ ದಾರಿ ತೆರೆದು ಕೊಡಲಾಗಿದೆ.



ಪ್ರಜಾಪ್ರಭುತ್ವದ ಹಬ್ಬ!
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಮೊದಲನೆಯದಾಗಿ, ಪ್ರಧಾನ ಮಂತ್ರಿಯ ನೇರ ಮಂಜೂರಾತಿಯೊಂದಿಗೆ, ಸೆರಂ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯ (ಎಸ್‌ಐಐ) ಹಾಗೂ ಭಾರತ್ ಬಯೋಟೆಕ್ ಕಂಪೆನಿಗಳಿಗೆ ಲಾಭಕೋರತನಕ್ಕೆ ಪರವಾನಿಗೆ ಮತ್ತು ಜನರ ಹಣದಲ್ಲಿ ಸೂಪರ್ ಲಾಭ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಎರಡನೆಯದಾಗಿ, ಮೇ 1ರಿಂದ 18 ವರ್ಷ ದಾಟಿದ ಎಲ್ಲರಿಗೂ ಲಸಿಕೆ ಹಾಕಲಾಗುತ್ತದೆ ಎಂದು ಸರ್ಕಾರ ಸಿನಿಕತನದಿಂದ ಘೋಷಣೆ ಹೊರಡಿಸಿದೆ. ದೇಶದಲ್ಲಿ ಲಸಿಕೆ ಉತ್ಪಾದನೆ ಹೆಚ್ಚಿಸಲು ಅಥವಾ ವಿದೇಶಗಳಿಂದ ಸಾಕಷ್ಟು ಖರೀದಿಸಲು ಸರ್ಕಾರ ವಿಫಲವಾಗಿದೆ ಎನ್ನುವುದು ಗೊತ್ತಿದ್ದೂ ಸರ್ಕಾರ ಈ ಘೋಷಣೆ ಮಾಡಿದೆ. ಲಸಿಕೆ ಖರೀದಿಸಲು ರಾಜ್ಯಗಳಿಗೆ ಸೂಚಿಸುವ ಮೂಲಕ ಸಾಕಷ್ಟು ಲಸಿಕೆ ಸಿಗದಿದ್ದರೆ ಅದರ ದೂಷಣೆಯನ್ನು ರಾಜ್ಯಗಳ ತಲೆಗೆ ಸುತ್ತುವ ಕುತ್ಸಿತ ಯೋಜನೆ ಕೇಂದ್ರದ್ದಾಗಿದೆ.

ಮೂರನೆಯದಾಗಿ, ಯಾವ ರಾಜ್ಯಗಳು ಎಷ್ಟು ಲಸಿಕೆ ಹಾಗೂ ಯಾವ ಸಮಯದಲ್ಲಿ ಅದನ್ನು ಪಡೆಯಬೇಕು ಎನ್ನುವುದನ್ನು ಈ ಎರಡು ಖಾಸಗಿ ಕಂಪೆನಿಗಳು ನಿರ್ಧರಿಸಲಿವೆ. ರಾಜ್ಯಗಳು ಈ ಅವಳಿ ಕಂಪೆನಿಗಳ ಮುಂದೆ ನಡುಬಗ್ಗಿಸಿ ನಿಲ್ಲುವಂತೆ ಮಾಡಲಾಗುವುದು. ಅಲ್ಲದೆ ಲಸಿಕೆ ಪಡೆಯಲು ಖಾಸಗಿ ಆಸ್ಪತ್ರೆಗಳು ಹಾಗೂ ಕಾರ್ಪೊರೇಟ್‌ಗಳೊಂದಿಗೆ ಸ್ಪರ್ಧಿಸುವಂತೆ ಕೂಡ ಮಾಡಲಾಗುತ್ತದೆ. ಇವೆಲ್ಲದರ ಫಲಿತಾಂಶ ಏನೆಂಬುದನ್ನು 45 ವರ್ಷ ದಾಟಿದವರಿಗೆ ಲಸಿಕೆ ನೀಡಿಕೆ ಪ್ರಕ್ರಿಯೆ ರಾಜ್ಯಗಳಲ್ಲಿ ನಿಧಾನಗೊಂಡ ರೀತಿಯೇ ತೋರಿಸಿದೆ. ಏಪ್ರಿಲ್ ಆರಂಭಕ್ಕೆ ಹೋಲಿಸಿದರೆ, ಚುಚ್ಚುಮದ್ದು ನೀಡಿಕೆ ಪ್ರಕ್ರಿಯೆಯು ಲಸಿಕೆ ಲಭ್ಯತೆ ಕೊರತೆಯಿಂದಾಗಿ ಅರ್ಧಕ್ಕೆ ಬಂದು ನಿಂತಿದೆ ಎಂದು ವರದಿಗಳು ಹೇಳಿವೆ. ಆದರೆ ಕೇಂದ್ರ ಸರ್ಕಾರ ಮತ್ತು ಆರೋಗ್ಯ ಸಚಿವಾಲಯ ಈ ವಾಸ್ತವತೆಯನ್ನು ನಿರಾಕರಿಸುತ್ತಾ ಬಂದಿವೆ. ಲಸಿಕೆ ಕೊರತೆ ಇಲ್ಲ ಎಂದೇ ಹೇಳುತ್ತಾ ಬಂದಿವೆ. ಲಸಿಕೆ ಕೊರತೆ ಬಗ್ಗೆ ದೂರಿದ ರಾಜ್ಯಗಳ ಮೇಲೆಯೇ ಆರೋಗ್ಯ ಖಾತೆ ಗೂಬೆ ಕೂರಿಸಿದೆ. ಕೋವಿಡ್ ಸಾಂಕ್ರಾಮಿಕತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿಫಲವಾಗಿರುವುದನ್ನು ಮುಚ್ಚಿಹಾಕಲು ರಾಜ್ಯಗಳು ಲಸಿಕೆ ಕೊರತೆಯ ದೂರು ಹೇಳುತ್ತಿವೆ ಎಂಬುದು ಕೇಂದ್ರದ ಮೊಂಡು ವಾದವಾಗಿದೆ.

ಎಸ್‌ಐಐ ತನ್ನ ಕೋವಿಶೀಲ್ಡ್ ಲಸಿಕೆಯ ಪ್ರತಿ ಡೋಸ್‌ಗೆ ರಾಜ್ಯ ಸರ್ಕಾರಕ್ಕೆ 400 ರೂಪಾಯಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ 600 ರೂಪಾಯಿ ನಿಗದಿಪಡಿಸಿದೆ. ಅದೇ ರೀತಿ, ಭಾರತ್ ಬಯೋಟೆಕ್ ಅನುಕ್ರಮವಾಗಿ 600 ರೂ. ಹಾಗೂ 1200 ರೂ. ನಿಗದಿಪಡಿಸಿದೆ. ಇದು ಲಾಭಕೋರತನದ ಪರಮಾವಧಿಯಲ್ಲದೆ ಬೇರೇನೂ ಅಲ್ಲ.

ಮೋದಿ ಸರ್ಕಾರದ ಮುಂದಿನ ಹೆಜ್ಜೆ ಏನೆಂಬುದು ಯಾರಾದರೂ ಊಹಿಸಬಹುದು. ಬೆಲೆ ಇಳಿಸುವಂತೆ ಲಸಿಕೆ ಕಂಪೆನಿಗಳಿಗೆ ಸರ್ಕಾರ ಮನವಿ ಮಾಡುತ್ತದೆ. ಅವುಗಳು ಸಾಂಕೇತಿಕವಾಗಿ ಅದನ್ನು ಇಳಿಸುತ್ತವೆ. ಕೇಂದ್ರ ಸರ್ಕಾರ ಅದರ ಶ್ರೇಯಸ್ಸನ್ನು ಪಡೆಯುವುದು ನಿಶ್ಚಿತ. ಏನಿದ್ದರೂ ಲಸಿಕೆ ನೀತಿಯ ಅಸಮತ್ವ ಹಾಗೂ ಸುಲಿಗೆಕೋರತನದ ಅಂಶ ಹಾಗೇ ಇರಲಿದೆ. ಇದನ್ನು ಯಾವ ರೀತಿಯಲ್ಲೂ ಒಪ್ಪಲಾಗದು.

ಸರ್ಕಾರ ತಕ್ಷಣವೇ ಪ್ರಸಕ್ತ ಲಸಿಕೆ ನೀತಿಯನ್ನು ವಾಪಸ್ ಪಡೆದು ಉಚಿತ ಹಾಗೂ ಸಾರ್ವತ್ರಿಕ ಲಸಿಕೆ ನೀಡಿಕೆಯ ಹೊಸ ನೀತಿಯನ್ನು ಪ್ರಕಟಿಸಬೇಕು.

ಸರ್ಕಾರ ಈಗಾಗಲೇ ಬಜೆಟ್‌ನಲ್ಲಿ ಲಸಿಕೆಗಾಗಿ 35,000 ಕೋಟಿ ರೂಪಾಯಿಗಳನ್ನು ಇಟ್ಟಿದೆ. ಅಗತ್ಯವಾದಾಗ ಇನ್ನೂ ಹೆಚ್ಚಿನ ಹಣ ಒದಗಿಸಲಾಗುತ್ತದೆ ಎಂದು ಹಣಕಾಸು ಮಂತ್ರಿ ಬಜೆಟ್ ಭಾಷಣದಲ್ಲೇ ಹೇಳಿದ್ದರು. ಆದರೆ, 45 ವರ್ಷ ಮೇಲಿನವರಿಗೆ ಲಸಿಕೆಗಾಗಿ ಕೇವಲ 10,000 ಕೋಟಿ ರೂಪಾಯಿ ವೆಚ್ಚ ಮಾಡಿರುವ ಕೇಂದ್ರ ಸರ್ಕಾರ, ರಾಜ್ಯಗಳಿಗೆ ಲಸಿಕೆಗಾಗಿ ಹಣ ನೀಡಲು ನಿರಾಕರಿಸುತ್ತಿದೆ. ರಾಜ್ಯಗಳ ಮೂಲಕ ಉಚಿತವಾಗಿ ಲಸಿಕೆ ಹಾಕಲು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಮಂಜೂರಾದ ಇನ್ನುಳಿದ 25,000 ಕೋಟಿ ರೂಪಾಯಿಗಳನ್ನು ಸುಲಭವಾಗಿ ಪಡೆಯಲು ಸಾಧ್ಯವಿದೆ.

ಆರೋಗ್ಯ ತುರ್ತು ಪರಿಸ್ಥಿತಿಯನ್ನು ಮೋದಿ-ಅಮಿತ್ ಷಾ ಜೋಡಿ ನಿಭಾಯಿಸಿದ ರೀತಿಗೆ ಜನರು ಕ್ರುದ್ಧರಾಗಿದ್ದಾರೆ. ವ್ಯಾಪಕ ಆಕ್ರೋಶ ಮಡುಗಟ್ಟಿದೆ. ಇದು ಸಂಪೂರ್ಣ ಸಮರ್ಥನೀಯ ಹಾಗೂ ರಾಜಕೀಯ ಲೆಕ್ಕಚುಕ್ತಾದ ಅಗತ್ಯವೂ ಇದೆ. ಅದೇನೇ ಇರಲಿ, ಜನರ ಜೀವ ರಕ್ಷಣೆಗಾಗಿ ಒಂದು ಸಮಗ್ರ ಲಸಿಕೆ ಕಾರ್ಯಕ್ರಮವನ್ನು ಜಾರಿ ಮಾಡುವುದು ಸದ್ಯದ ಪರಮ ಕರ್ತವ್ಯವಾಗಿದೆ.

ಅದಕ್ಕಾಗಿ ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲೇ ಬೇಕು:

* ವಿಪತ್ತು ನಿರ್ವಹಣಾ ಕಾನೂನು ಹಾಗೂ ಔಷಧಿಗಳ ಬೆಲೆ ನಿಯಂತ್ರಣ ಆದೇಶದ ಅನ್ವಯ ಅಧಿಕಾರವನ್ನು ಬಳಸಿಕೊಂಡು ಕೇಂದ್ರ ಸರಕಾರವು ಒಟ್ಟಾಗಿ ಲಸಿಕೆ ಖರೀದಿಸಲು ಬೆಲೆಯನ್ನು ನಿಗದಿಪಡಿಸಬೇಕು. ಒಂದು ಪಾರದರ್ಶಕ ಸೂತ್ರದಂತೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಲಸಿಕೆ ಪೂರೈಸಬೇಕು.
* ಲಸಿಕೆ ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ ಕಡ್ಡಾಯ ಲೈಸೆನ್ಸಿಂಗ್ ನಿಯಮವನ್ನು ಬಳಸಬೇಕು. ಮತ್ತು ಸಾರ್ವಜನಿಕ ನಿಧಿಯಿಂದ ಸಂಶೋಧನೆಯಿಂದ ಬಂದಿರುವ ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆ ಉತ್ಪಾದನೆಯನ್ನು ಆರು ಸಾರ್ವಜನಿಕ ವಲಯದ ಔಷಧಿ ಕಂಪೆನಿಗಳು ಹಾಗೂ ಇತರ ಖಾಸಗಿ ಸಂಸ್ಥೆಗಳಿಗೆ ವಹಿಸಬೇಕು. ಇದಲ್ಲದೆ, ರಷ್ಯಾದ ಸ್ಪುಟ್ನಿಕ್ ಲಸಿಕೆಯನ್ನು ಭಾರತದಲ್ಲಿ ಉತ್ಪಾದಿಸಲು ಅರ್ಜಿ ಹಾಕಿಕೊಂಡಿರುವ ಕಂಪನಿಗಳು ತಮ್ಮ ಉತ್ಪಾದನೆಗಳನ್ನು ತ್ವರಿತಗೊಳಿಸುವಂತೆ ಕ್ರಮ ಕೈಗೊಳ್ಳಬೇಕು. ಈ ಎಲ್ಲ ಪ್ರಯತ್ನಗಳ ಜೊತೆ ವಿದೇಶಗಳಿಂದ ಎಲ್ಲೆಲ್ಲಿಂದ ಸಾಧ್ಯವೋ, ತುರ್ತಾಗಿ ಲಸಿಕೆ ಆಮದಿಗೂ ಮುಂದಾಗಬೇಕು.

ವಿನಾಶದ ಪರಿಸ್ಥಿತಿಯಿಂದ ದೇಶವನ್ನು ಹೊರತರಲು ಮೋದಿ ಸರ್ಕಾರ ಉಚಿತ ಮತ್ತು ಸಾರ್ವತ್ರಿಕ ಲಸಿಕೀಕರಣಕ್ಕೆ ಒಂದು ಸಮತ್ವಪೂರ್ಣ ಹಾಗೂ ಸಮಗ್ರ ನೀತಿಯನ್ನು ಪ್ರಕಟಿಸಬೇಕು.

ಅನು: ವಿಶ್ವ






ಆಕ್ಸಿಜನ್ ಬಿಕ್ಕಟ್ಟು: ಭಾರತ ಉಸಿರುಗಟ್ಟುತ್ತಿರುವುದು ಏಕೆ?



ಕೊವಿದ್ ಎರಡನೆ ಅಲೆಯಲ್ಲಿ ಭಾರತದ ಉಸಿರುಗಟ್ಟಲು ಆರಂಭವಾಗಿದೆ. ಆಕ್ಸಿಜನ್ ಕೊರತೆಯಿಂದ – ಆಕ್ಸಿಜನ್ ಬೆಡ್ ಕೊರತೆ, ದಾಖಲು ಮಾಡಲು ನಿರಾಕರಣೆ, ದಾಖಲಾದವರ ಬಲವಂತ ಡಿಸ್ಚಾರ್ಜ್, ಕಾಳಸಂತೆ, ಸಕಾಲಿಕವಾಗಿ ಸಾಕಷ್ಟು ಆಕ್ಸಿಜನ್ ಸಿಗದೆ ಸಾವು – ಇತ್ಯಾದಿ ಬಿಕ್ಕಟ್ಟು ಸ್ವರೂಪ ಪಡೆದಿದೆ. ಕಳೆದ ಒಂದು ವರ್ಷದ ವೈದ್ಯಕೀಯ ಆಕ್ಸಿಜನ್ ನ ಯೋಜನೆಯನ್ನು ಪರಾಮರ್ಶಿಸಿದರೆ – ಅದರ ಬೇಡಿಕೆ ಹೆಚ್ಚಳ, ಹೆಚ್ಚಿದ ಬೇಡಿಕೆಗೆ ಹೋಲಿಸಿದರೆ ಉತ್ಪಾದನೆಯಲ್ಲಿ ಕೊರತೆ, ಅದಕ್ಕೆ ಬೇಕಾದ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವುದು, ಅದಕ್ಕೆ ಬೇಕಾದ ಸಕಾಲಿಕ ಕ್ರಮ ಕೈಗೊಳ್ಳುವುದು, ಸಾಗಾಣಿಕೆಯ ಸಮಸ್ಯೆಯನ್ನು ಮುಂಗಂಡು ಅದಕ್ಕೆ ಬೇಕಾದ ಸೌಕರ್ಯ ಹೆಚ್ಚಿಸುವುದು – ಹೀಗೆ ಎಲ್ಲದರಲ್ಲೂ ಪ್ರಾಮಾಣಿಕ ಕಾಳಜಿ, ಯೋಜನೆಯ, ದೂರದರ್ಶಿತ್ವದ ಅಭಾವ ಎದ್ದು ಕಾಣುತ್ತದೆ. ಇದರ ಬದಲಾಗಿ ಕ್ರಿಮಿನಲ್ ನಿರ್ಲಕ್ಷದ ಧೋರಣೆ ಕಾಣುತ್ತದೆ. ಪರಿಣತರ ಸಲಹೆಯನ್ನು ಪಡೆದುಕೊಳ್ಳುವುದರಲ್ಲಿ ನಿರ್ಲಕ್ಷ, ಎಲ್ಲ ನಿರ್ಣಯಗಳ ಯೋಜನೆಗಳ ಅತಿ ಕೇಂದ್ರೀಕರಣ, ಉತ್ತರದಾಯಿತ್ವದ ಅಭಾವವೂ ಭಾರತ ಆಕ್ಸಿಜನ್ ಕೊರತೆಯಿಂದ ಉಸಿರುಗಟ್ಟುವುದಕ್ಕೆ ಕಾರಣವಾಗಿದೆ ಎನ್ನಬಹುದು.



ಕೊವಿದ್ ಎರಡನೆ ಅಲೆಯಲ್ಲಿ ಭಾರತದ ಉಸಿರುಗಟ್ಟಲು ಆರಂಭವಾಗಿದೆ. ದೆಹಲಿ, ಮುಂಬಯಿ, ಬೆಂಗಳೂರಿನ ಮಹಾನಗರಗಳಲ್ಲೂ, ಜಿಲ್ಲಾ ಕೇಂದ್ರಗಳಲ್ಲೂ ಎಲ್ಲೆಲ್ಲೂ, ಚಿಕಿತ್ಸೆಗೆ ಆಕ್ಸಿಜನ್ ಅಗತ್ಯವಿರುವ ಕೊವಿದ್ ಪೀಡಿತರ ಸಂಖ್ಯೆ ಹೆಚ್ಚಾಗಿದ್ದು ತೀವ್ರ ಆಕ್ಸಿಜನ್ ಕೊರತೆ ತಲೆದೋರಿದೆ. ದೆಹಲಿಯ ದೊಡ್ಡ ಆಸ್ಪತ್ರೆಗಳು ಸೇರಿದಂತೆ ಎಲ್ಲೆಲ್ಲೂ ತೀವ್ರ ಆಕ್ಸಿಜನ್ ಕೊರತೆಯಿಂದಾಗಿ ಹಲವು ಸಾವುಗಳು ಸಂಭವಿಸಿವೆ, ಸಂಭವಿಸುತ್ತಲೇ ಇವೆ. ಆಕ್ಸಿಜನ್ ಕೊರತೆಯಿಂದ ಹಲವು ಆಸ್ಪತ್ರೆಗಳು ಕೊವಿದ್ ಪೀಡಿತರನ್ನು ದಾಖಲು ಮಾಡುತ್ತಿಲ್ಲ. ರೋಗಿಗಳಿಗೆ ಆಕ್ಸಿಜನ್ ತಂದು ಕೊಡಲು ಹೇಳಲಾಗುತ್ತಿದೆ. ಆಕ್ಸಿಜನ್ ನ ಕಾಳಸಂತೆ ಸಹ ವ್ಯಾಪಕವಾಗಿ ಆರಂಭವಾಗಿದೆ. ಹಲವು ಕಡೆ ದಾಖಲಾದವರನ್ನು ಬಲವಂತವಾಗಿ ಡಿಸ್ಚಾರ್ಜ್ ಮಾಡಲಾಗುತ್ತಿದೆ. ಆಸ್ಪತ್ರೆಯ ಎದುರು ಆಕ್ಸಿಜನ್ ಬೆಡ್ ಗೆ ಕಾಯುತ್ತಾ ಹಲವರು ಅಸು ನೀಗಿದ್ದಾರೆ. ಇತ್ತೀಚೆಗೆ ಮಾಜಿ ರಾಯಭಾರಿಯೊಬ್ಬರು ದೆಹಲಿಯ ಆಸ್ಪತ್ರೆಯ ಪಾರ್ಕಿಂಗ್ ಪ್ರದೇಶದಲ್ಲಿ ಆಕ್ಸಿಜನ್ ಬೆಡ್ ಗೆ ಕಾಯುತ್ತಾ ಸತ್ತ ದಾರುಣ ಸುದ್ದಿ ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ. ಹಲವು ರಾಜ್ಯಗಳ ಹೈ ಕೋರ್ಟುಗಳ ಮುಂದೆ ಆಕ್ಸಿಜನ್ ಕೊರತೆ ಸಂಬಂಧಿತ ದೂರುಗಳ ದಾಖಲಾಗಿದ್ದು ಸರಕಾರಗಳನ್ನು ವೈಫಲ್ಯಕ್ಕೆ ಕೋರ್ಟುಗಳು ತರಾಟೆಗೆ ತೆಗೆದುಕೊಂಡಿವೆ.

ಮೊದಲನೆಯ ಅಲೆಯಲ್ಲೇ ಈ ಕೊರತೆ ಕಾಣಿಸಿಕೊಂಡಿದ್ದು ಈ ಸಮಸ್ಯೆಯ ಸ್ವರೂಪ ಮತ್ತು ಪ್ರಮಾಣ ಸ್ಪಷ್ಟವಾಗಿತ್ತು. ಆದರೂ ಎರಡನೆಯ ಅಲೆ ಇನ್ನೂ ಏರುಗತಿಯಲ್ಲಿರುವಾಗಲೇ ಇಂತಹ ತೀವ್ರ ಪರಿಸ್ಥಿತಿ, ಎರಡನೆಯ ಅಲೆಗೆ ಬೇಕಾದ ವೈದ್ಯಕೀಯ ಮೂಲಸೌಲಭ್ಯಗಳನ್ನು ಯೋಜಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ ಎಂಬುದು ಸ್ಪಷ್ಟ. ಕೇಂದ್ರ–ರಾಜ್ಯ ಸರಕಾರಗಳ ವಿವಿಧ ವಕ್ತಾರರು ಸಮಸ್ಯೆ ತಾತ್ಕಾಲಿಕವಾದದ್ದು ಎಂದೋ, ಉತ್ಪಾದನೆ ಸಾಕಷ್ಟಿದೆ ಬರಿಯ ವಿತರಣೆಯ ಸಮಸ್ಯೆ ಎಂದೋ, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚು ಮಾಡಲಾಗುತ್ತಿದೆ ಎಂದೋ ಸಮಜಾಯಿಷಿ ಹೇಳುತ್ತಿವೆ. ಸಮಸ್ಯೆಯ ಸ್ವರೂಪ, ಈಗ ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳ ವಿಶ್ಲೇಷಣೆ ಮತ್ತು ಪರಿಹಾರಗಳ ಬಗ್ಗೆ ಸ್ಥೂಲ ನೋಟ ಬೀರಲು ಇಲ್ಲಿ ಪ್ರಯತ್ನಿಸಲಾಗಿದೆ.

ಆಕ್ಸಿಜನ್ ಕೊರತೆಗೆ – ಬೇಡಿಕೆಯಲ್ಲಿ ಏರುಪೇರು, ಉತ್ಪಾದನಾ ಸಾಮರ್ಥ್ಯ, ವಾಸ್ತವ ಉತ್ಪಾದನೆ, ವಿತರಣೆ, ಉತ್ಪಾದನೆ–ಬೇಡಿಕೆಗಳ ನಡುವೆ ಅಂತರ – ಹೀಗೆ ಹಲವು ಆಯಾಮಗಳಿವೆ. ಆಕ್ಸಿಜನ್ ಉತ್ಪನ್ನವನ್ನು ವೈದ್ಯಕೀಯ ಮತ್ತು ಕೈಗಾರಿಕಾ ಉಪಯೋಗಗಳಿಗೆ ಬಳಸಲಾಗುತ್ತದೆ. ಎರಡೂ ಉಪಯೋಗಗಳಿಗೆ ಬಳಸುವ ಉತ್ಪನ್ನ ಶೇ. 95–99 ಶುದ್ಧತೆ ಇರಬೇಕಾಗುತ್ತದೆ. ಮುಖ್ಯ ವ್ಯತ್ಯಾಸವಿರುವುದು ಅದನ್ನು ಶೇಖರಿಸಿಡುವ ಮತ್ತು ಸಾಗಾಣಿಕೆ ಮಾಡಲು ಬಳಸುವ ಸಿಲಿಂಡರ್, ಟ್ಯಾಂಕ್ ಇತ್ಯಾದಿಗಳಲ್ಲಿ ವೈದ್ಯಕೀಯ ಆಕ್ಸಿಜನ್ ಗೆ ಹೆಚ್ಚಿನ ಶುದ್ಧತೆ ಬೇಕಾಗುತ್ತದೆ ಅಷ್ಟೇ. ಆದ್ದರಿಂದಲೇ ಮೊದಲ ಅಲೆಯಲ್ಲೂ ಈಗಲೂ ಕೈಗಾರಿಕಾ ಬಳಕೆಯನ್ನು ನಿಲ್ಲಿಸಿ ವೈದ್ಯಕೀಯ ಬಳಕೆಗೆ ವಿತರಣೆ ಮಾಡಲಾಗುತ್ತಿದೆ. ಆದರೆ ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ.

ಮೊದಲನೆಯದಾಗಿ ಸಾಕಷ್ಟು ಆಕ್ಸಿಜನ್ ಉತ್ಪಾದನೆಯಾಗುತ್ತದೆ. ವಿತರಣೆಯ ಸಮಸ್ಯೆಯಷ್ಟೇ ಇರುವುದು ಎಂಬ ಸಮಜಾಯಿಷಿಯನ್ನು ಪರಿಶೀಲಿಸೋಣ. ಭಾರತದ ಒಟ್ಟು ಆಕ್ಸಿಜನ್ ಉತ್ಪಾದನೆ ಎಪ್ರಿಲ್ 24ರಂದು 9103 ಮೆಟ್ರಿಕ್ ಟನ್ (ಮೆ.ಟ.) ಇತ್ತು. ಹಿಂದೆ ಇದ್ದ ಸಾಮರ್ಥ್ಯ ದಿನಕ್ಕೆ 7259 ಮೆ.ಟ ಇದ್ದದ್ದನ್ನು 2021 ಎಪ್ರಿಲ್ ಕೊನೆಯ ಹೊತ್ತಿಗೆ ದಿನಕ್ಕೆ 9250 ಮೆ.ಟ.ಗೆ ಏರಿಸಲಾಗುತ್ತಿದೆ ಎಂದು ಅಧಿಕೃತ ವರದಿಗಳು ಹೇಳುತ್ತಿವೆ. ಕೊವಿದ್ ಮೊದಲು ವೈದ್ಯಕೀಯ ಆಕ್ಸಿಜನ್ ಬೇಡಿಕೆ 700 ಮೆ.ಟ ಇದ್ದಿದ್ದು ಮೊದಲನೆಯ ಅಲೆಯ ಸಂದರ್ಭಧಲ್ಲೇ 4800 ಮೆ.ಟ ಗೆ ಏರಿತ್ತು. ಈಗ ಅದು ಇನ್ನಷ್ಟು ಸುಮಾರು 7–8 ಸಾವಿರ ಮೆ,ಟ ಗೆ ಏರಿರಬೇಕು. ಕೈಗಾರಿಕಾ ಆಕ್ಸಿಜನ್ ಬೇಡಿಕೆ ಸುಮಾರು 4500 ಮೆ.ಟ ಇದೆ. ಅಣು, ಉಕ್ಕು, ಔಷಧಿ, ತೈಲ ಶುದ್ಧೀಕರಣ, ಇತ್ಯಾದಿ 9 ಆದ್ಯತೆಯ ಕ್ಷೇತ್ರಗಳ ಬೇಡಿಕೆಯೇ ಸುಮಾರು 2500 ಮೆ.ಟ. ಇದೆ. ಈಗ ಕೈಗಾರಿಕಾ ಆಕ್ಸಿಜನ್ (ಬಹಳಷ್ಟು ಆದ್ಯತೆಯ ಕ್ಷೇತ್ರ ಸೇರಿದಂತೆ) ನಿಲ್ಲಿಸಿದರೆ ಮಾತ್ರ ವೈದ್ಯಕೀಯ ಆಕ್ಸಿಜನ್ ಪೂರೈಸಲು ಸಾಧ್ಯವಿದೆ. ಎಲ್ಲ ಕೈಗಾರಿಕಾ ಆಕ್ಸಿಜನ್ ಬಳಕೆಯನ್ನು ಬಹಳ ಕಾಲ ನಿಲ್ಲಿಸುವುದು ಸಾಧ್ಯವಿಲ್ಲ. ದೈನಿಕ ಒಟ್ಟು ಸುಮಾರು 9000 ಮೆ.ಟ ಉತ್ಪಾದನೆ ಸಹ ಬರಬರುತ್ತಾ ಕೊರತೆಗೆ ಕಾರಣವಾಗಬಹುದು. ಮೇ ನಲ್ಲಿ ದೈನಿಕ 5 ಲಕ್ಷ ಕೊವಿದ್ ಪ್ರಕರಣಗಳನ್ನು ನಿರೀಕ್ಷಿಸಲಾಗಿದ್ದು, ವೈದ್ಯಕೀಯ ಆಕ್ಸಿಜನ್ ಗೆ ಬೇಡಿಕೆ 12 ಸಾವಿರ ಮೆ.ಟ ಗೆ ಏರಬಹುದು. ಆಗ ಎಲ್ಲಾ ಕೈಗಾರಿಕಾ ಆಕ್ಸಿಜನ್ ಬಳಕೆ ನಿಲ್ಲಿಸಿದರೂ ಕೊರತೆ ಕಾಣಿಸಿಕೊಳ್ಳಬಹುದು.

ಸರಕಾರ 551 ಪಿ.ಎಸ್.ಎ (Pressure Swing Adsorption) ಎಂಬ ಸ್ಥಳಿಯವಾಗಿ ಆಕ್ಸಿಜನ್ ತಯಾರಿಸುವ ಘಟಕಗಳಿಗೆ ಹೊಸದಾಗಿ ಆರ್ಡರ್ ಕೊಟ್ಟಿದ್ದು ಅವು ಬಂದಾಗ ಸಮಸ್ಯೆ ಪರಿಹಾರವಾಗುತ್ತದೆ ಎಂದು ಸಮಜಾಯಿಷಿ ಹೇಳುತ್ತಿದೆ. ಅಕ್ಟೋಬರ್ 2020ರಲ್ಲಿ 162 ಪಿ.ಎಸ್.ಎ ಗಳಿಗೆ ಈಗಾಗಲೇ ಆರ್ಡರ್ ಕೊಟ್ಟಿದ್ದರೂ, ಇವುಗಳಲ್ಲಿ ಇದುವರೆಗೆ 32 ಮಾತ್ರ ಪೂರೈಕೆಯಾಗಿ ಕೆಲಸ ಮಾಡುತ್ತಿವೆ. ಇದನ್ನು ಪಿಎಂ ಕೇರ್ಸ್ ಹಣ ಬಳಸಿ ನೇರವಾಗಿ ಆರ್ಡರ್ ಮಾಡಲಾಗಿದ್ದು ಈ ವಿಳಂಬವನ್ನು ರಾಜ್ಯ ಸರಕಾರಗಳ ತಲೆಗೆ ಕಟ್ಟಲು ಕೇಂದ್ರ ಪ್ರಯತ್ನಿಸಿತು. ಆದರೆ ಪ್ರಮುಖ ವಿಷಯವೆಂದರೆ ಈಗಾಗಲೇ ಆರ್ಡರ್ ಮಾಡಿದ 162 ಘಟಕಗಳು <1 ರಿಂದ 4 ಮೆ.ಟ ಸಾಮರ್ಥ್ಯದವು ಆಗಿದ್ದು ಒಟ್ಟು 154 ಮೆ.ಟ ಸಾಮರ್ಥ್ಯ ವನ್ನು ಮಾತ್ರ ಸೇರಿಸುತ್ತವೆ. ಇವು ಸಣ್ಣ ಆಸ್ಪತ್ರೆಗೆ ಹೊರಗಿನ ಆಕ್ಸಿಜನ್ ಪೂರೈಕೆಯಿಂದ ಮುಕ್ತಗೊಳಿಸಿ ದೂರಗಾಮಿ ದೃಷ್ಟಿಯಿಂದ ಒಳ್ಳೆಯದಾದರೂ, ಎಲ್ಲ ಘಟಕಗಳು ಮೇ ಕೊನೆಯೊಳಗೆ ಕೆಲಸ ಮಾಡಿದರೂ ಒಟ್ಟು ಕೊರತೆಯ ದೃಷ್ಟಿಯಿಂದ ಯಾವುದೇ ಪರಿಹಾರ ಒದಗಿಸುವುದಿಲ್ಲ. ಉದಾಹರಣೆಗೆ ದೆಹಲಿಯ ಇಂದಿನ ಕೊರತೆ 700 ಮೆ.ಟ ಇದ್ದು ಅಲ್ಲಿಗೆ ಕೊಡಲಾಗಿರುವ 8 ಘಟಕಗಳ ಒಟ್ಟು ಸಾಮರ್ಥ್ಯ 14.4 ಮೆ.ಟ ಅಷ್ಟೇ!

ಅದೇ ರೀತಿ ಆಕ್ಸಿಜನ್ ಕಾನ್ಸಂಟ್ರೇಟರ್ಸ್ ಖರೀದಿ ಸಹ ಸಮಸ್ಯೆಯನ್ನು ಪರಿಹರಿಸುತ್ತದೆ ಎನ್ನಲಾಗಿದೆ. ಇವು ಹಿಂದೆ ಹೇಳಿದ ಪಿ.ಎಸ್.ಎ ತಯಾರಕಗಳಂತೆ ಆದರೆ ಇನ್ನೂ ಸಣ್ಣ ನಿಧಾನವಾದ (ಮಿನಿಟಿಗೆ 5–10 ಲೀಟರ್) ಆಕ್ಸಿಜನ್ ಪೂರೈಕೆ ಮಾಡುವ ಘಟಕಗಳು. ಐಸಿಯು ಗೆ ಮಿನಿಟಿಗೆ 40–50 ಲೀಟರ್ ಆಕ್ಸಿಜನ್ ಪೂರೈಕೆ ವೇಗ ಬೇಕಾಗಿದ್ದು ಅವುಗಳಿಗೆ ಸೂಕ್ತವಲ್ಲ. ಕೇಂದ್ರ ಸರಕಾರ 10 ಸಾವಿರ ಕಾನ್ಸಂಟ್ರೇಟರ್ಸ್ ಖರೀದಿ ಮಾಡಲಿದೆ. ಈಗ ಯು.ಎಸ್ ಸರಕಾರ ಒಂದು ಲಕ್ಷ ಕಾನ್ಸಂಟ್ರೇಟರ್ಸ್ ಗಳನ್ನು ಕೊಡಲಿದೆ ಎಂದು ವರದಿಯಾಗಿದೆ. ಆದರೆ ಕಾನ್ಸಂಟ್ರೇಟರ್ಸ್ ಹೆಚ್ಚಿನ ಬೆಲೆಯವು, ಏಕೆಂದರೆ ಇವನ್ನು ಆಮದು ಮಾಡಲಾಗುತ್ತಿದೆ. ಉದಾಹರಣೆಗೆ ಆಕ್ಸಿಜನ್ ಸಿಲಿಂಡರ್ ವೆಚ್ಚ 8–20 ಸಾವಿರ ರೂ. ಆದರೆ ಕಾನ್ಸಂಟ್ರೇಟರ್ಸ್ ವೆಚ್ಚ 40–90 ಸಾವಿರ ರೂ. ಇರುತ್ತದೆ. ಕೊವಿದ್ ಮೊದಲು ವರ್ಷಕ್ಕೆ 40 ಸಾವಿರ ಕಾನ್ಸಂಟ್ರೇಟರ್ಸ್ ಗಳಿಗೆ ಬೇಡಿಕೆ ಇದ್ದರೆ ಈಗ ತಿಂಗಳಿಗೆ 35 ಸಾವಿರ ಬೇಡಿಕೆ ಇದೆ. ಬೆಲೆ ದುಪ್ಪಟ್ಟಾಗಿದೆ. ಕಡಿಮೆ ಬೇಡಿಕೆ ಮತ್ತು ಆಮದು ಸುಂಕ ಬಹಳ ಕಡಿಮೆ ಇದ್ದಿದ್ದರಿಂದ ಇವುಗಳ ಸ್ಥಳೀಯ ಉತ್ಪಾದನೆ ಆಗಿರಲಿಲ್ಲ. ಆದರೆ ವೆಂಟಿಲೇಟರ್, ಪಿಪಿಇ ಗೆ ಸೀಮಿತವಾಗಿಯಾದರೂ ಯೋಜಿಸಿದಂತೆ, ಕಳೆದ ಒಂದು ವರ್ಷದಲ್ಲಿ ಯೋಜಿಸಿದ್ದರೆ ಇದನ್ನು ಸ್ಥಳಿಯವಾಗಿ ಕಡಿಮೆ ವೆಚ್ಚಕ್ಕೆ ತಯಾರಿಸುವ ಸಾಧ್ಯತೆಯಿತ್ತು. ಇಂತಹ ಸಮಗ್ರ ಯೋಜನೆಯಲ್ಲಿ ಕೇಂದ್ರ ಸರಕಾರ ಎಡವಿದೆ ಎಂಬುದು ಸ್ಪಷ್ಟ. ಆದ್ದರಿಂದ ಈಗ ಭಿಕ್ಷೆ ಅಥವಾ ದುಬಾರಿ ಖರೀದಿಗೆ ಮೊರೆ ಹೋಗಬೇಕಾಗಿದೆ.

ಉತ್ಪಾದನೆಯ ಕೊರತೆಯಲ್ಲದೆ ಆಕ್ಸಿಜನ್ ಬೇಡಿಕೆ ಇರುವಲ್ಲಿ ಸಮಯಕ್ಕೆ ಸಿಗುವ ಹಾಗೆ ಅದರ ಸಾಗಾಣಿಕೆಯಲ್ಲೂ ಸಮಸ್ಯೆಗಳಿವೆ. ಆಕ್ಸಿಜನ್ ನ ಬಹುಪಾಲು ದ್ರವರೂಪದಲ್ಲಿ ಶೇಖರಣೆ ಸಾಗಾಣಿಕೆಯಾಗಬೇಕಿದ್ದು ಅದನ್ನು ಸಾಗಾಣಿಕೆ ಮಾಡಲು – 180 ಡಿಗ್ರಿ ಶೀತದಲ್ಲಿ ಸಾಗಾಣಿಕೆ ಮಾಡಬೇಕಾಗುತ್ತದೆ. ಬೇಡಿಕೆ ಮತ್ತು ಬೇಡಿಕೆಯ ವೇಗ ಹೆಚ್ಚಿರುವುದರಿಂದ ಇಂತಹ ಟ್ಯಾಂಕರುಗಳ ಕೊರತೆ ಸಹ ಇದೆ. ಈ ಟ್ಯಾಂಕರುಗಳು 10–20 ಮೆ.ಟ ಸಾಮರ್ಥ್ಯದವು ಆಗಿದ್ದು, ಅವುಗಳಿಗೆ ಸರಾಸರಿ 6–7 ದಿನಗಳ ಟ್ರಿಪ್ ಗಳು ಬೇಕಾಗುತ್ತವೆ ಎಂದಿಟ್ಟುಕೊಂಡರೆ ಈಗಿನ ಬೇಡಿಕೆ ಪೂರೈಸಲು ಸುಮಾರು 600 ಟ್ಯಾಂಕರುಗಳು ಬೇಕಾಗುತ್ತವೆ. ಆದರೆ ಈಗ 200 ಟ್ಯಾಂಕರುಗಳಷ್ಟೇ ಇವೆ. ಈಗ ತರಾತುರಿಯಲ್ಲಿ ಶೀತಟ್ಯಾಂಕರುಗಳನ್ನು ಆಮದು ಮಾಡಲಾಗುತ್ತಿದೆ. ಈ ಸಾಗಾಣಿಕೆಯ ಸಮಸ್ಯೆಯನ್ನೂ ಮುಂಗಂಡು ಅಗತ್ಯ ವ್ಯವಸ್ಥೆ ಮಾಡಲಾಗಿಲ್ಲ.

ಕಳೆದ ಒಂದು ವರ್ಷದ ವೈದ್ಯಕೀಯ ಆಕ್ಸಿಜನ್ ನ ಯೋಜನೆಯನ್ನು ಪರಾಮರ್ಶಿಸಿದರೆ ಅದರ ಬೇಡಿಕೆ ಹೆಚ್ಚಳ, ಹೆಚ್ಚಿದ ಬೇಡಿಕೆಗೆ ಹೋಲಿಸಿದರೆ ಉತ್ಪಾದನೆಯಲ್ಲಿ ಕೊರತೆ, ಅದಕ್ಕೆ ಬೇಕಾದ ಉತ್ಪಾದಕ ಸಾಮರ್ಥ್ಯವನ್ನು ಹೆಚ್ಚಿಸುವುದು, ಅದಕ್ಕೆ ಬೇಕಾದ ಸಕಾಲಿಕ ಕ್ರಮ ಕೈಗೊಳ್ಳುವುದು, ಸಾಗಾಣಿಕೆಯ ಸಮಸ್ಯೆಯನ್ನು ಮುಂಗಂಡು ಅದಕ್ಕೆ ಬೇಕಾದ ಸೌಕರ್ಯ ಹೆಚ್ಚಿಸುವುದು – ಹೀಗೆ ಎಲ್ಲದರಲ್ಲೂ ಪ್ರಾಮಾಣಿಕ ಕಾಳಜಿ, ದೂರದರ್ಶಿತ್ವದ ಅಭಾವ ಎದ್ದು ಕಾಣುತ್ತದೆ. ಇದರ ಬದಲಾಗಿ ಕ್ರಿಮಿನಲ್ ನಿರ್ಲಕ್ಷದ ಧೋರಣೆ ಕಾಣುತ್ತದೆ. ಪರಿಣತರ ಸಲಹೆಯನ್ನು ಪಡೆದುಕೊಳ್ಳುವುದರಲ್ಲಿ ನಿರ್ಲಕ್ಷ, ಎಲ್ಲ ನಿರ್ಣಯಗಳ ಯೋಜನೆಗಳ ಅತಿ ಕೇಂದ್ರೀಕರಣ, ಉತ್ತರದಾಯಿತ್ವದ ಅಭಾವವೂ ಭಾರತ ಆಕ್ಸಿಜನ್ ಕೊರತೆಯಿಂದ ಉಸಿರುಗಟ್ಟುವುದಕ್ಕೆ ಕಾರಣವಾಗಿದೆ ಎನ್ನಬಹುದು. ■



ಕಾಗೋಡು ಸತ್ಯಾಗ್ರಹ 70

ಕಾಗೋಡು ಸತ್ಯಾಗ್ರಹ ಕರ್ನಾಟಕದ ರೈತ ಚಳುವಳಿಗಳಲ್ಲಿ ವಿವರವಾಗಿ ದಾಖಲಾದ ಮತ್ತು ಆ ಮೂಲಕ ಮನೆಮಾತಾದ ರೈತ ಹೋರಾಟ. ಈ ಎಪ್ರಿಲ್ ಗೆ ಅದು ನಡೆದು 70 ವರ್ಷಗಳು ಕಳೆದಿವೆ. ಈ ಸಂದರ್ಭದಲ್ಲಿ ಅದರತ್ತ ಒಂದು ಹಿನ್ನೋಟ ಇಲ್ಲಿದೆ. ಈ ಹಿನ್ನೋಟವನ್ನು ಈ ಕುರಿತು ಪ್ರಕಟವಾಗಿರುವ ಎರಡು ಪುಸ್ತಕಗಳಿಂದ ಭಾಗಗಳಿಂದ ಕಟ್ಟಿಕೊಡಲಾಗಿದೆ.ಈ ಹೋರಾಟದ ರೋಚಕ ಸ್ಫೂರ್ತಿದಾಯಕ ನಿರೂಪಣೆಯನ್ನು ಜಿ.ಪಿ.ಬಸವರಾಜು ಬರೆದು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ 'ಕಾಗೋಡು : ಭೂಹೋರಾಟದ ಹಿನ್ನೋಟ'ಪುಸ್ತಕದಿಂದ ಆಯ್ದ ಭಾಗಗಳ ಮೂಲಕ ಕೊಡಲಾಗಿದೆ. ಈ ಚಳುವಳಿಯ ಸೋಲು–ಗೆಲುವು ಮತ್ತು ಅದರಿಂದ ನಾವು ಏನು ಕಲಿಯಬಹುದು ಎಂಬುದನ್ನು ಜಿ.ರಾಜಶೇಖರ್ ಬರೆದು ಅಕ್ಷರ ಪ್ರಕಾಶನ ಪ್ರಕಟಿಸಿದ 'ಕಾಗೋಡು ಸತ್ಯಾಗ್ರಹ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.


ಮಣ್ಣಿಗೆ ಬಿದ್ದ ಸತ್ಯಾಗ್ರಹದ ಬೀಜ

ಜಿ.ಪಿ. ಬಸವರಾಜು

ತಡಗಳಲೆ : ಏಪ್ರಿಲ್ 16, 1951

ಈ ಉದ್ದಕ್ಕೆ ಭೂಮಿ ಹಾಸಿಕೊಂಡಿತ್ತು. ಉಳುಮೆಗೆ ಹದವಾದ ನೆಲ, ಉಳುವುದಕ್ಕೆ ಸಾಲು ಸಾಲು ನೇಗಿಲುಗಳು; ಉಮೇದಿನಿಂದ ಬಂದ ರೈತರು, ನೂರಾರು ವರ್ಷಗಳಿಂದ ಈ ಭೂಮಿಯನ್ನು ಉತ್ತವರು, ಬಿತ್ತಿದವರು, ಬೆಳೆದವರು, ಬೆವರು ಹರಿಸಿದವರು. ಭೂಮಿಯ ನಾಡಿ ಮಿಡಿತವನ್ನು ಬಲ್ಲ ಗೇಣಿದಾರರು. ಯಾವ ಹದ, ಎಂಥ ಮಣ್ಣು, ಯಾವ ಕಾಲದಲ್ಲಿ ಉಳುಮೆ ಮಾಡಬೇಕು, ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕು, ಹೇಗೆ ಸುಗ್ಗಿಯನ್ನು ಹಬ್ಬ ಮಾಡಬೇಕು ಎಲ್ಲವನ್ನೂ ಬಲ್ಲ 'ಕಾಲಜ್ಞಾನಿಗಳು. ಭೂಮಿಯ ಅಂಗುಲ ಅಂಗುಲವನ್ನೂ ಬಲ್ಲವರು. ನೇಗಿಲುಕಟ್ಟಿ ಹೋಲಕ್ಕಿಳಿದರು. ಇನ್ನೇನು ಕುಳ ನಾಟಿ ಭೂಮಿಯ ಮಣ್ಣು ಸೀಳಬೇಕು. ಅಷ್ಟರಲ್ಲಿ ಧಾವಿಸಿ ಬಂದರು ಭೂಮಾಲೀಕರ ಕಡೆಯವರು. ಕೆಂಪೇರಿದ ಅವರ ಕಣ್ಣುಗಳು ಕೆಕ್ಕರಿಸಿ ನೋಡಿದವು.. ಬಾಯಿಗಳು ಬೈಗುಳದ ಬೆಂಕಿಯನ್ನು ಕಾರಿದವು. ಆವೇಶಗೊಂಡವರ ಕೈಯ್ಯಲ್ಲಿದ್ದ ಕೊಡಲಿ, ಕತ್ತಿಗಳು ಚುರುಕಾದವು. ನೇಗಿಲು ನೊಗಗಳು ತುಂಡುತುಂಡಾದವು, ಎತ್ತುಗಳನ್ನು ಹೊಡೆದು ಬಡಿದು ಓಡಿಸಲಾಯಿತು. ಉಳಲು ಮುಂದಾಗಿದ್ದ ಒಕ್ಕಲು ಮಕ್ಕಳ ಮೇಲೆ ಹಲ್ಲೆ ನಡೆಸಲಾಯಿತು. ಬಿತ್ತಿ ಬೆಳೆಯಬೇಕಾದ ಭೂಮಿ ರಣರಂಗವಾಯಿತು. ಉಳಲೆಂದು ಬಂದವರು ಬೆಚ್ಚಿದರು; ಆದರೆ ಬೆದರಲಿಲ್ಲ. ಅಂಥದನ್ನು ಎದುರಿಸಲು ಅವರು ಮಾನಸಿಕವಾಗಿ ಸಿದ್ಧವಾಗಿದ್ದಂತೆ ಕಂಡಿತು. ಆದರೆ ಹೊಡೆದಾಟಕ್ಕೆ ನಿಲ್ಲಲಿಲ್ಲ. ಮೌನವಾಗಿಯೇ ಎಲ್ಲವನ್ನೂ ಸಹಿಸುತ್ತ, ನೋಡುತ್ತ ನಿಂತರು. ಅದು ಒಂದು ಮೌನ ಪ್ರತಿಭಟನೆಯಾಗಿತ್ತು.

ಈ ಮಣ್ಣಿನಲ್ಲಿ ಭೂಮಿ–ಗೇಣಿದಾರರ ಸಂಬಂಧ ನೂರಾರು ವರ್ಷಗಳಿಂದ ಬೆಸೆದುಕೊಂಡು ಬಂದಿತ್ತು, ಹಾಗೆಯೇ ಗೇಣಿದಾರರು ಮತ್ತು ಭೂ ಮಾಲೀಕರ ಸಂಬಂಧವೂ ಸುದೀರ್ಘ ಕಾಲದಿಂದ ಉಳಿದು ಬಂದಿತ್ತು. ಭೂಮಿಯೇನೋ ಮಾಲೀಕರಿಗೆ ಸೇರಿದ್ದು, ಆದರೆ ಆ ಭೂಮಿಯನ್ನು ಉಳುವವರು, ಆರೈಕೆ ಮಾಡುವವರು, ಬೆಳೆ ತೆಗೆದು ಸುಗ್ಗಿಯ ಹಿಗ್ಗನ್ನು ತೋರಿಸುವವರು ಗೇಣಿದಾರರೇ. ಗೇಣಿದಾರರಿಲ್ಲದೆ ಈ ಭೂಮಿ ಸಾಗುವಳಿಯನ್ನು ಕಾಣದು. ಇಂಥ ಸಂಬಂಧವನ್ನು ಕಡಿದುಕೊಂಡರೆ ಅದು ಭೂ ಮಾಲೀಕರಿಗೇ ಕೇಡು, ಅವರೇನೂ ಇದನ್ನು ಕಡಿದುಕೊಳ್ಳಲು ಬಯಸಿರಲಿಲ್ಲ. ಆದರೆ ಅಂಥ ಕಾಲಘಟ್ಟವೊಂದು ಎದುರಾಗಿತ್ತು.ಗೇಣಿದಾರರಲ್ಲಿ ಮೂಡಿದ ಅರಿವು ಅವರನ್ನು ಎಚ್ಚರಿಸಿತ್ತು. ನ್ಯಾಯಯುತವಾದ ತಮ್ಮ ಹಕ್ಕನ್ನು ಗಟ್ಟಿಗೊಳಿಸಲು ಗೇಣಿದಾರರು ನಿರ್ಧರಿಸಿದರು. ಭೂಮಿ ಉಳುವವನದು, ಉಳುಮೆಯ ಹಕ್ಕು ರೈತನದು ಎಂಬುದು ಅವರ ಬಂದಿತು. ಸಾವಿರಾರು ಎಕರೆ ಭೂಮಿಯ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿಕೊಂಡು ಉಳುವವರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಭೂಮಾಲೀಕರ ಶೋಷಣೆ ಅವರು ಅರ್ಥಮಾಡಿಕೊಳ್ಳತೊಡಗಿದ್ದರು. ಈ ಕಾರಣದಿಂದಾಗಿ ಅವರು ಸತ್ಯಾಗ್ರಹದ ಹಾದಿಯನ್ನು ತುಳಿದಿದ್ದರು. ಈ ಬಾರಿಯ ಉಳುಮೆ ಕೇವಲ ಉಳುಮೆಯಾಗಿರಲಿಲ್ಲ. ಅದೊಂದು ಪ್ರತಿಭಟನೆಯ ಅಸ್ತ್ರವಾಗಿತ್ತು. ಈ ಅಸ್ತ್ರವನ್ನು ಬಳಸಿ ತಮ್ಮ ಬಲವನ್ನು ತೋರಿಸಲು ಬಂದಿದ್ದ ರೈತರ ಮೇಲೆ ಏಕಾಏಕಿ ಎರಗಿಬಂದ ಭೂಮಾಲೀಕರ ಮಂದಿ ಹಿಂಸೆಯ ಎಲ್ಲ ವರಸೆಗಳನ್ನು ತೋರಿಸತೊಡಗಿದ್ದರು. ಇಷ್ಟೂ ವರ್ಷ ಗುಲಾಮರಂತೆ, ತಮ್ಮ ಆಜ್ಞೆಯನ್ನು ಪಾಲಿಸುತ್ತಿದ್ದ ಗೇಣಿದಾರರು, ಇದೇ ಮೊದಲ ಬಾರಿಗೆ ತಮ್ಮ ಹಕ್ಕಿನ ಬಾವುಟವನ್ನು ಹಿಡಿದು ಎದುರುಬಂದಿದ್ದರು. ಒಡೆಯರ ಭೂಮಿಯ ಒಡೆತನವನ್ನು ಪ್ರಶ್ನಿಸಿದ್ದರು. ಇದು ಭೂ ಒಡೆಯರ ಅಗಾಧ ಸಿಟ್ಟಿಗೆ ಕಾರಣವಾಗಿತ್ತು. ಈ ಒಕ್ಕಲು ಮಕ್ಕಳಿಗೆ ಸರಿಯಾಗಿ ಪಾಠ ಕಲಿಸಬೇಕೆಂದು ತೀರ್ಮಾನಿಸಿದ್ದ




ಭೂಮಾಲೀಕರ ಮಂದಿ ಹಿಂಸೆಯ ಅಟ್ಟಹಾಸವನ್ನು ಮೆರೆದರು.

ನಾಲ್ಕಾರು ವರ್ಷಗಳ ಹಿಂದೆ, ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಗಾಂಧೀಜಿಯವರ ಮುಂದಾಳುತನದಲ್ಲಿ, ಅಹಿಂಸೆಯ ಮಾರ್ಗದಲ್ಲಿ ನಡೆದ ಸತ್ಯಾಗ್ರಹದ ಪಾಠವನ್ನು ಈ ಅನಕ್ಷರಸ್ಥ ಗೇಣಿದಾರರು ಅನುಭವದಿಂದ ಅರಿತವರಾಗಿದ್ದರು. ತಮ್ಮ ಹಕ್ಕನ್ನು ಬಿಟ್ಟುಕೊಡಬಾರದು; ನ್ಯಾಯಯುತವಾದದ್ದನ್ನು ಕೇಳಲೇಬೇಕು; ಆದರೆ ಅದಕ್ಕೆ ಹಿಂಸೆ ಬೇಕಾಗಿಲ್ಲ. ಅಹಿಂಸಾ ಮಾರ್ಗದಲ್ಲಿಯೇ ನಡೆಯಬೇಕು–ಇದು ಈ ಗೇಣಿದಾರರ ಒಟ್ಟು ನಿಲುವಾದಂತೆ ತೋರುತ್ತಿತ್ತು. ಅವರೇನೂ ಅದನ್ನು ಬಾಯಿಬಿಟ್ಟು ಹೇಳಲಿಲ್ಲ; ದೊಡ್ಡ ಗಂಟಲುಗಳಲ್ಲಿ ಘೋಷಿಸಲಿಲ್ಲ. ಅದು ಅವರ ನಡೆಯಲ್ಲಿ ಕಾಣುತ್ತಿತ್ತು.

ಭೂಮಾಲೀಕರ ಪರವಾಗಿ ಬಂದಿದ್ದ ಮಂದಿ ಮತ್ತು ಗೇಣಿದಾರ ರೈತರ ನಡುವೆ ದೊಡ್ಡ ಮಾರಾಮಾರಿಯೇ ನಡೆಯಬೇಕಾಗಿತ್ತು. ಅದನ್ನು ಭೂಮಾಲೀಕರು ನಿರೀಕ್ಷಿಸಿರಬೇಕು. ಆದರೆ ಅಂಥದೇನೂ ಆಗಲಿಲ್ಲ. ಎಲ್ಲವನ್ನೂ ಮೌನವಾಗಿ ನೋಡುತ್ತ, ನೋವನ್ನೂ ಸಹಿಸುತ್ತ, ಅಪಮಾನವನ್ನು ನುಂಗಿಕೊಳ್ಳುತ್ತ, ತಮ್ಮ ರಟ್ಟೆಗಳಲ್ಲಿ ದಿಟ್ಟತನವಿದ್ದರೂ ಅದನ್ನು ಬಳಸದೆ ಮೌನವನ್ನೇ ಹೊದುಕೊಂಡು ತಮ್ಮ ಗಟ್ಟಿ ನಿರ್ಧಾರದ ಬೀಜಗಳನ್ನು ಆ ಮಣ್ಣಿನಲ್ಲಿ ಗೇಣಿದಾರರು ಆ ದಿನ ಊರಿದರು, ಅಲ್ಲಿ ಮೊಳಕೆಯೊಡೆದದ್ದೇ ಕಾಗೋಡು

ಪುಟ 10 ಕ್ಕೆ



ಸತ್ಯಾಗ್ರಹದ ಸೋಲು–ಗೆಲುವು

ಜಿ. ರಾಜಶೇಖರ್

ಕಾಗೋಡು ಸತ್ಯಾಗ್ರಹ ಸಾಧಿಸಿದ್ದಾದರೂ ಏನನ್ನು ಎನ್ನುವ ಪ್ರಶ್ನೆಗೆ ಉತ್ತರವಾಗಿ ಬೆರಳು ಮಾಡಿ ತೋರಿಸಬಹುದಾದಂತಹ ಸಾಧನೆ ಏನೂ ಇಲ್ಲ. ಸತ್ಯಾಗ್ರಹದಿಂದ, ಒಕ್ಕಲುಗಳ ಬೇಡಿಕೆಗಳು ಇತ್ಯರ್ಥವಾಗಲಿಲ್ಲ. ಆದರೆ ಈ ರಾಜ್ಯದಲ್ಲಿ ಈಗಲೂ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ತೀರ ಹಿಂದುಳಿದಿದೆ. ರಾಜ್ಯದ ಉಳಿದ ಭಾಗಗಳಿಗಿಂತಲೂ ಸಂಪರ್ಕ, ವಿದ್ಯೆ, ನಗರಗಳ ಸಾಮೀಪ್ಯ ಮುಂತಾದವುಗಳಲ್ಲಿ ಕೂಡ ಹಿಂದುಳಿದಿರುವ ಮಲೆನಾಡಿನ ಈ ಮೂಲೆಯಲ್ಲಿ, ನಾಡಿಗೆ ಸ್ವಾತಂತ್ರ್ಯ ಬಂದ ಹೊಸತರಲ್ಲಿಯೇ ಇಂತಹ ಒಂದು ಸತ್ಯಾಗ್ರಹ ನಡೆದದ್ದು ಅದರಷ್ಟಕ್ಕೆ ಅದು ಒಂದು ಸಾಧನೆ ಎನ್ನಬಹುದು. ನಗರಗಳಲ್ಲಿನ ಸಂಘಟಿತ ಕಾರ್ಮಿಕರು, ಕಾರ್ಮಿಕ ಕಾನೂನುಗಳ ರಕ್ಷಣೆಯಲ್ಲಿ ಉದ್ಯೋಗ ಭದ್ರತೆಯ ಆಸರೆಯಲ್ಲಿ, ಆರ್ಥಿಕ ಬೇಡಿಕೆಗಳಿಗೋಸ್ಕರ ನಡೆಸುವ ಮುಷ್ಕರಗಳಿಗೂ, ಕಾಗೋಡು ಸತ್ಯಾಗ್ರಹದಂತಹ ಚಳುವಳಿಗಳಿಗೂ ಮೂಲಭೂತವಾದ ವ್ಯತ್ಯಾಸಗಳಿವೆ. ಕಾಗೋಡಿನ ರೈತರೂ ನಡೆಸಿದ್ದು ಕೇವಲ ಆರ್ಥಿಕ ಬೇಡಿಕೆಗಳ ಹೋರಾಟವನ್ನೇ. ಆದರೂ ಅವರಿಗೆ ಯಾವುದೇ ಕಾರ್ಮಿಕ ಹಿತರಕ್ಷಣೆಯ ಕಾನೂನಿನ ರಕ್ಷಣೆ ಇರಲಿಲ್ಲ; ಯಾವುದೇ ಲೇಬರ್ ಕೋರ್ಟು ಅವರ ಅಹವಾಲು ಕೇಳುವುದಕ್ಕೆರಚಿತವಾಗಿರಲಿಲ್ಲ. ಅಖಿಲ ಭಾರತ ಅಥವಾ ಅಖಿಲ ಕರ್ನಾಟಕ ಮಟ್ಟದ ಯಾವ ಸಂಘಟನೆಯ ನೆರವೂ ಅವರಿಗಿರಲಿಲ್ಲ. ಮಲೆನಾಡು ರೈತ ಸಂಘವಾಗಲೀ, ಸೋಷಲಿಸ್ಟ್ ಪಕ್ಷವಾಗಲೀ ಪ್ರಬಲ ಸಂಘಟನೆಗಳಾಗಿರಲೇ ಇಲ್ಲ. ಕಾಗೋಡು ದೀವರು ತಮ್ಮ ಜೀವನದ ಏಕಮಾತ್ರ ಆಸರೆಯಾಗಿದ್ದ ಗೇಣಿ ಜಮೀನನ್ನೇ ಪಣವಾಗಿಟ್ಟು ಹೋರಾಟ ನಡೆಸಿದ್ದರು. ಈ ಹೋರಾಟ ಧೀರೋದಾತ್ತವಾದುದು ಎನ್ನುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಕಾಗೋಡಿನ ದೀವರಲ್ಲಿ ಯಾರಿಗೂ ಅಕ್ಷರವಿರಲಿಲ್ಲ. ಅವರಲ್ಲಿ ಹೆಚ್ಚಿನವರು ಸಾಗರ ಬಿಟ್ಟರೆ ಬೇರೆ ಊರು ನೋಡಿದವರೂ ಅಲ್ಲ. ಕೆಳಜಾತಿಯವರಾಗಿದ್ದರಿಂದ ಸಾಮಾಜಿಕವಾಗಿ ಅವರ ಸ್ಥಾನ ಎಲ್ಲರಿಗಿಂತ ಕೆಳಗೆ, ಉಳಿದವರೂ ಅವರನ್ನು ಹಾಗೆಯೇ ಕಂಡಿದ್ದರು; ಅವರೂ ಸ್ವತಃ ಅದನ್ನು ನಂಬಿದ್ದರು. ಇಂತಹ ದೀನ ಜನ ಮೇಲುಜಾತಿಯ ಜಮೀನುದಾರರ ವಿರುದ್ಧ ಸ್ವಾಭಿಮಾನ ಕೆರಳಿ ನಿಂತದ್ದು, ಅವರ ನೆರವಿಗೆ ಉಳಿದ ಹಳ್ಳಿಗಳ ದೀವರೂ ಸತ್ಯಾಗ್ರಹದಲ್ಲಿ ಪಾಲುಗೊಂಡದ್ದು, ಈ ಆರ್ಥಿಕ ಬೇಡಿಕೆಯ ಹೋರಾಟಕ್ಕೆ ಒಂದು ಸಾಮಾಜಿಕ ಆಯಾಮವನ್ನೂ ಕೊಟ್ಟಿತು.

ಸತ್ಯಾಗ್ರಹ ತಕ್ಷಣದ ಪರಿಣಾಮಗಳ ದೃಷ್ಟಿಯಿಂದ ಸೋತಿತು. ಆದರೆ ಈ ಸೋಲಿಗೂ ದೀವರು ಕಾರಣರಲ್ಲ. ಸತ್ಯಾಗ್ರಹ ಸೋಲನ್ನು ಬೆನ್ನಲ್ಲಿ ಕಟ್ಟಿಕೊಂಡೇ ಹುಟ್ಟಿತ್ತು. ಮಲೆನಾಡು ರೈತ ಸಂಘ ಮತ್ತು ಸೋಷಲಿಸ್ಟ್ ಪಕ್ಷಗಳ ದುರ್ಬಲತೆಯ ದೃಷ್ಟಿಯಿಂದ, ಸತ್ಯಾಗ್ರಹದ ತೀವ್ರತೆ, ಅದು ನಡೆದ ಕಾಲಾವಧಿ, ಅದು ಒಳಗೊಂಡ ಜನಸಮೂಹ ಎಲ್ಲವೂ ಈ ಸಂಘಟನೆಗಳ ಶಕ್ತಿಗೆ ಮೀರಿದವಾಗಿದ್ದವು. ಹೀಗಿರುತ್ತ ಭೂಮಾಲಕರನ್ನಾಗಲೀ, ಅವರಿಗೆ ತನ್ನ ಸಂಪೂರ್ಣ ರಾಜಕೀಯ ಮತ್ತು ರೆವಿನ್ಯೂ ಆಡಳಿತದ ಬೆಂಬಲ ಕೊಟ್ಟ ಸರಕಾರವನ್ನಾಗಲೀ ಇನ್ನಷ್ಟು ದೀರ್ಘವಾದ, ವ್ಯಾಪಕವಾದ, ತೀವ್ರವಾದ ಹೋರಾಟದಿಂದ ಬಗ್ಗಿಸುವುದು ಸೋಷಲಿಸ್ಟ್ ಪಕ್ಷಕ್ಕಂತೂ ಅಂದಿನ ಸ್ಥಿತಿಯಲ್ಲಿ ಸಾಧ್ಯವೇ ಇರಲಿಲ್ಲ.'


ಆದರೆ ಈ ಸೋಲು ಇಷ್ಟು ಅನಿವಾರ್ಯವಾಗಿತ್ತೆ? ಸೋಷಲಿಸ್ಟ್ ಪಕ್ಷವಾಗಲೀ, ಯಾವುದೇ ವಾಮಪಂಥೀಯ ಸಂಘಟನೆಯಾಗಲೀ ಭೂಮಾಲಕ ಬಂಡವಾಳಷಾಹೀ ವ್ಯವಸ್ಥೆಯಲ್ಲಿ, ಪ್ರಚಾರ ಹೋರಾಟಗಳ ಮಾರ್ಗದಿಂದಲೇ ಬೆಳೆಯಬೇಕು: ವ್ಯವಸ್ಥೆಯನ್ನು ಎದುರಿಸುತ್ತಲೇ, ಜನರನ್ನು ಅದರ ವಿರುದ್ಧ ಎತ್ತಿಕಟ್ಟುತ್ತ ಸಂಘಟನೆ ಬೆಳಸಬೇಕು; ಅನ್ಯ ಮಾರ್ಗವಿಲ್ಲ. ಯಾವುದೇ ವಾಮಪಂಥೀಯ ಸಂಘಟನೆಯೂ, ಅದು ಸಾಕಷ್ಟು ಬಲಿಷ್ಟವಾಗಿ ಬೆಳೆದ ಮೇಲೆ, ಹೋರಾಟದ ಕಣಕ್ಕೆ ಇಳಿಯತಕ್ಕದ್ದು ಎಂಬ ನಿಲುವೇ ಆತ್ಮಘಾತಕವಾದದ್ದು. ಯಾಕೆಂದರೆ ಈ ವ್ಯವಸ್ಥೆ ಎಡಪಕ್ಷಗಳ ಸಂಘಟನೆಗೆ ಎಂದೂ ಅನುಕೂಲಗಳನ್ನು ಕಲ್ಪಿಸಿಕೊಡುವುದಿಲ್ಲ. ಮಾತ್ರವಲ್ಲ ಅವನ್ನು ಹತ್ತಿಕ್ಕಲು ಸದಾ ಸಿದ್ಧವಾಗಿರುತ್ತದೆ. ಈ ದೃಷ್ಟಿಯಿಂದ ಸೋಷಲಿಸ್ಟ್ ಪಕ್ಷ ರಾಜ್ಯದಲ್ಲಿ ತನಗೆ ಏನೇನೂ ಜನ ಬೆಂಬಲವಿಲ್ಲ ಎಂಬುದನ್ನು ತಿಳಿದೂ, ಸತ್ಯಾಗ್ರಹಕ್ಕೆ ಧುಮುಕಿದ್ದುಸರಿಯಾದ ನಿರ್ಣಯವೇ ಆಗಿದೆ. ವಾಮಪಂಥೀಯ ಪಕ್ಷವೊಂದು ಜನತೆಯ ಹತ್ತಿರ ಹೋಗುವುದೇ ಈ ಮಾರ್ಗದಲ್ಲಿ. ಹೋರಾಟದ ತಕ್ಷಣದ ಬೇಡಿಕೆಗಳು ಈಡೇರುತ್ತಾವೋ ಇಲ್ಲವೋ ಎಂಬುದು ಮುಖ್ಯ ಪ್ರಶ್ನೆಯೇ ಅಲ್ಲ.

ಆದರೆ ಈ ಹೋರಾಟವನ್ನು ಪ್ರಾಂತ್ಯದ ಇತರ ಹಳ್ಳಿಗಳಿಗೆ ಹಬ್ಬಿಸುವುದರಲ್ಲಿಯೂ ಸೋಷಲಿಸ್ಟರು ವಿಫಲರಾದರು. ಗೇಣಿ ಸಮಸ್ಯೆ ಸಾಗರ ತಾಲ್ಲೂಕು ಮತ್ತು ಮಲೆನಾಡಿಗಿಂತಲೂ ತೀವ್ರವಾಗಿದ್ದ ನೆರೆಯ ದ.ಕ. ಜಿಲ್ಲೆ (ಆಗ ಮದರಾಸು ಪ್ರಾಂತ್ಯ ದಲ್ಲಿತ್ತು)ಗೂ

ಪುಟ 12 ಕ್ಕೆ

ಮಣ್ಣಿಗೆ ಬಿದ್ದ ಸತ್ಯಾಗ್ರಹದ ಬೀಜ..........

ಪುಟ 9 ರಿಂದ



ಸತ್ಯಾಗ್ರಹ, ಅದು ನೀಡಿದ ಸಮೃದ್ಧ ಫಸಲನ್ನು ಮುಂದಿನ ದಿನಗಳಲ್ಲಿ ಮಲೆನಾಡಿನ ರೈತರು, ಅಷ್ಟೇಕೆ ಇಡೀ ರಾಜ್ಯದ ಗೇಣಿದಾರರು ಕೊಯ್ದು ಮಾಡಿಕೊಂಡರು.

ಈ ಭೂಮಾಲೀಕರ ದೌರ್ಜನ್ಯವನ್ನು, ದರ್ಪವನ್ನು, ಕ್ರೌರ್ಯವನ್ನು ಅಂದಿನ ಘಟನೆ ತೋರಿಸಿತು. ಹಾಗೆಯೇ ರೈತರ ಛಲವಂತಿಕೆಯನ್ನು, ನ್ಯಾಯಪರತೆಯನ್ನು, ದಿಟ್ಟತನವನ್ನು ಪ್ರದರ್ಶಿಸಿತು. ಅವರ ನ್ಯಾಯಯುತ ಹಕ್ಕನ್ನೂ ಪ್ರತಿಪಾದಿಸಿತು.

ಇದು ನಡೆದದ್ದು ತಡಗಳಲೆಯಲ್ಲಿ; 1951ರ ಏಪ್ರಿಲ್ 16 ರಂದು.

ಈ ಗೇಣೀದಾರರ ಚಳವಳಿ ಸುತ್ತಲಿನ ಯಾವುದೇ ಹಳ್ಳಿಯಲ್ಲಿ ನಡೆಯಬಹುದಾಗಿತ್ತು, ಕಾಗೋಡು, ಮಣಗದ್ದೆ, ಹಿರೇನೆಲ್ಲೂರು, ಸಣ್ಣಮನೆ, ಸುರಗುಪ್ಪೆ, ಯಲಕುಂದ್ಲಿ, ಶುಂಠಿಕೊಪ್ಪ, ತಿಪ್ಪೆಗುಂಡಿ, ಹಾಗಲಪುರ ಇತ್ಯಾದಿ ಹಳ್ಳಿಗಳಲ್ಲಿ ಜಾರಿಯಲ್ಲಿದ್ದುದು ಗೇಣಿ ಪದ್ಧತಿಯೇ. ಅಷ್ಟೇಕೆ, ಈ ಗೇಣಿಪದ್ಧತಿ ಇಡೀ ಸಾಗರ ತಾಲ್ಲೂಕಿನಲ್ಲಿ ಇತ್ತು. ಮತ್ತೂ ನೋಡಿದರೆ ಮಲೆನಾಡಿನಲ್ಲೆಲ್ಲ ಇದ್ದದ್ದು ಗೇಣಿಪದ್ಧತಿಯೇ. ಕಾಗೋಡು ಒಡೆಯರು ಸುತ್ತ ಏಳು ಹಳ್ಳಿಗಳಲ್ಲಿ ಎರಡು ಸಾವಿರ ಎಕರೆಗೂ ಹೆಚ್ಚಿನ ಭೂಮಿಯನ್ನು ಹೊಂದಿದ್ದರು. ಅದೆಲ್ಲ ನಡೆಯುತ್ತಿದ್ದುದು ಗೇಣಿ ಪದ್ಧತಿಯಲ್ಲಿಯೇ, ಆ ಎಲ್ಲ ಹಳ್ಳಿಗಳನ್ನು ಬಿಟ್ಟು ಈ ಪ್ರತಿಭಟನೆ ತಡಗಳಲೆಯಲ್ಲಿ ನಡೆಯಿತು.

ತಡಗಳಲೆಯಲ್ಲೇ ಈ ಪ್ರತಿಭಟನೆ ನಡೆಯಲು ಕಾರಣವೇನು?

ಈ ಚಳವಳಿಯ ಹಿಂದಿನ ಚಾಲಕ ಶಕ್ತಿಯಾಗಿದ್ದ ಗಣಪತಿಯಪ್ಪನವರೇ ಹೇಳಿರುವ ಮಾತುಗಳು ಈ ಕಾರಣವನ್ನು ವಿವರಿಸುತ್ತವೆ: "ಕಾಗೋಡು ರೈತರು ಒಡೆಯರಿಗೆ ಭಾಳ ಹೆದಕೊರ್ಂಡಿದ್ದರು. ತಿರುಗಿ ಬೀಳುವ ಸ್ಥಿತಿಲೇ ಇರಲಿಲ್ಲ. ಆದರೆ ತಡಗಳಲೆ ಮುಂಡೂರು ಸೈಡು, ಭೂಮಾಲೀಕರ ವಿರುದ್ಧ ರೈತರು ತಿರುಗಿ ಬೀಳೋಕೆ ಸಾಧ್ಯ ಆಯ್ತು. ತಡಗಳಲೆ ರೈತರು, "ನೀವು ಸರಿಯಾದ ಅಳತೆಯಲ್ಲಿ ತಗೊಳ್ಳದಿದ್ರೆ, ನಾವು ನಿಮಗೆ ಗೇಣೀನೇ ಕೊಡೋದಿಲ್ಲ. ನೀವು ಬಿಟ್ಟಿ ಆಳು ದುಡಿಸೋದಿಲ್ಲ ಅಂದ್ರೆ ಮಾತ್ರ ನಾವು ಸಹಕರಿಸೋರು, ಇಲ್ಲದಿದ್ರೆ ಏನು ಬೇಕಾರೂ ಮಾಡ್ಕೊಳ್ಳಿ ನಮ್ಮ ಜಮೀನು ನಾವು ಮಾಡ್ತಾ ಹೋಗ್ತಿವಿ, ಗೇಣೀನ ಸರಕಾರಕ್ಕಾದ್ರೂ ಜಮಾ ಮಾಡ್ತೀವಿ' ಅಂತ ತಿರುಗಿಬಿದ್ರು."

ಗೇಣಿದಾರರು ತಿರುಗಿಬಿದ್ದದ್ದು ದೊಡ್ಡ ಇತಿಹಾಸವನ್ನೇ ನಿರ್ಮಿಸಿತು.

ಅವತ್ತು ತಡಗಳಲೆಯಲ್ಲಿ ಭೂ ಮಾಲೀಕರ ಕಡೆಯವರು ಕೇಕೆ ಹಾಕಿದರು. ಅಟ್ಟಹಾಸ ಮೆರೆದರು. ತಾವು ಗೆದ್ದೆವೆಂದು ಬೀಗಿದರು. ತಮ್ಮನ್ನು ಧಿಕ್ಕರಿಸಿದವರಿಗೆ ಸರಿಯಾಗಿ ಪಾಠ ಕಲಿಸಿದ್ದೇವೆಂದು ಭೂಮಾಲೀಕರೂ ತೃಪ್ತರಾದರು. ಬೆಳೆಯುವುದನ್ನು ಮೊಳಕೆಯಲ್ಲಿಯೇ ಚಿವುಟಿಹಾಕಿದೆವೆಂಬ ಸಂತೃಪ್ತಿ ಅವರಲ್ಲಿ.

ಆದರೆ ಅದು ಹಾಗಾಗಿರಲಿಲ್ಲ. ಹೊಲ ಉಳಲು ಬಂದ ಗೇಣಿದಾರರನ್ನು ಓಡಿಸಿದ್ದು ಅಲ್ಲಿಗೇ, ಆ ದಿನಕ್ಕೇ ಮುಗಿದಿರಲಿಲ್ಲ, ಅದು ತನ್ನ ಕುಡಿಯನ್ನು ಮುಂದಕ್ಕೆ, ಮತ್ತೂ ಮುಂದಕ್ಕೆ ಚಾಚುತ್ತಲೇ ಹೋಯಿತು.

ತಡಗಳಲೆಯಲ್ಲಾದ ಘಟನೆ, ಭೂಮಿಯನ್ನು ಉಳಲು ಬಂದು ಅಲ್ಲಿಗೊಳಗಾದ ಗೇಣಿದಾರರು, ಭೂಮಾಲೀಕರು ಮತ್ತು ಅವರ ಕಡೆಯ ಮಂದಿ ನಡೆಸಿದ ಹಿಂಸಾಕೃತ್ಯಗಳ ಸುದ್ದಿ ಸುತ್ತೆಲ್ಲ ಹಳ್ಳಿಗಳಿಗೆ ಹಬ್ಬಿತು. ನೂರಾರು ಕತೆಗಳು ಮಿಂಚಿನಂತೆ ಸಂಚರಿಸಿದವು.

****

ಸಾಗರ ಏಪ್ರಿಲ್ 17, 1951

ಅದರ ಮರುದಿನ, ಅಂದರೆ 1951ರ ಏಪ್ರಿಲ್ 17, ಸಾಗರದಲ್ಲಿ ಸಂತೆಯ ದಿನ. ಭೂಮಾಲೀಕರ ಕಡೆಯವರು ತುಂಡರಿಸಿದ್ದ ನೇಗಿಲು, ನೊಗ, ಹೊಡೆತ ತಿಂದ ಎತ್ತುಗಳ ಮತ್ತು ಗೇಣಿದಾರರ ಮೆರವಣಿಗೆ, ತಾಲ್ಲೂಕು ಕೇಂದ್ರವಾದರೂ ಸಾಗರ ಪುಟ್ಟ ಊರು. ಇಂಥ ಮೆರವಣಿಗೆಯನ್ನು ಅದೆಂದೂ ಕಂಡಿರಲಿಲ್ಲ. ಸಾವಿರಾರು ರೈತರು ಗುಂಪುಗುಂಪಾಗಿ ಬಂದದ್ದು ಸುತ್ತಲಿನ ಹಳ್ಳಿಗಳೇ ಎದ್ದುಬಂದಂತೆ ಇತ್ತು. ಇಡೀ ಸಾಗರವೇ ಈ ನೋಟಕ್ಕೆ ಬೆದರಿತು. ಭಾರೀ ದೊಡ್ಡ ಗುಂಪಿದ್ದರೂ, ಒಂದೇ ಒಂದು ಹಿಂಸೆಯ ಪ್ರಕರಣವಿಲ್ಲ. ಶಾಂತಿ, ಶಿಸ್ತು, ಅಹಿಂಸೆ ಈ ರೈತ ಸಾಗರದ ಮಂತ್ರವಾಗಿತ್ತು. ಮುಂದಾಳಾಗಿ ಗಾಂಧೀಜಿ ಇರಲಿಲ್ಲ. ಆದರೆ ಗಾಂಧೀ ತತ್ವಕ್ಕೆ ಬದ್ಧರಾಗಿದ್ದ ನೇತಾರರು ಇದ್ದರು. ಇಡೀ ಊರಿನಲ್ಲಿ ಮೆರವಣಿಗೆ ಹಾದು ಹೋದಾಗ ಎಷ್ಟೋ ಮಾತುಗಳು, ಚರ್ಚೆಗಳು, ಮುರಿದ ನೊಗಗಳು ಮತ್ತು ನೇಗಿಲುಗಳು ಈ ಎಲ್ಲ ಮಾತುಕತೆಯ ಕೇಂದ್ರವಾಗಿದ್ದವು. ಅವತ್ತು ಊರಿಡೀ ನಡೆದದ್ದು ಗೇಣಿದಾರರ ಮತ್ತು ಭೂಮಾಲೀಕರ ನಡುವಣ ಸಂಬಂಧದ ಚರ್ಚೆ. ಭೂಮಿಯನ್ನು ಉಳಲೆಂದು ಬಂದವರ ಮೇಲೆ ದಬ್ಬಾಳಿಕೆಯನ್ನು ಮಾಡಿದ್ದು ಸರಿಯೇ, ತಪ್ಪೇ? ಭೂಮಿಯನ್ನು ಉಳುವ ಹಕ್ಕು ಗೇಣಿದಾರರಿಗೆ ಇಲ್ಲವೇ? ಇಷ್ಟು ವರ್ಷಗಳ ಕಾಲ ಭೂಮಿಯನ್ನು ಉತ್ತದ್ದು ಯಾರು? ಅವರ ಮೇಲೆ ಹಲ್ಲೆ ನಡೆಯುವುದು ಎಂದರೇನು?– ಇಂಥವೇ ಮಾತುಗಳು, ಚರ್ಚೆಗಳು, ಎಲ್ಲೆಲ್ಲೂ.

ಅಂತೂ ಒಂದೇ ಒಂದು ದಿನದ ಸತ್ಯಾಗ್ರಹ ಹೊಸ ಗಾಳಿ ಬೀಸಲು ಕಾರಣವಾಯಿತು. ಹೊಸ ಎಚ್ಚರವನ್ನು, ಹೊಸ ಅರಿವನ್ನು ಪಡೆದುಕೊಂಡಂತೆ ಕಂಡ ಸಾಗರ ಅವತ್ತು ಹೊಸ ಬೆಳಕಿನಲ್ಲಿ ಫಳಫಳ ಹೊಳೆಯಿತು. ಈ ಹೊಸ ಬೆಳಕೇ ಗೇಣಿದಾರರನ್ನು ಹೊಸ ದಾರಿಯಲ್ಲಿ ನಡೆಸಿತು.

ಊರೆಲ್ಲ ಸುತ್ತಿಬಂದ ಮೆರವಣಿಗೆ ಕೊನೆಯಲ್ಲಿ ತಾಲ್ಲೂಕು ಕಚೇರಿಯ ಮುಂದೆ ನೆರೆಯಿತು. ಗೇಣಿದಾರರು ಮುರಿದ ನೇಗಿಲು, ನೊಗಗಳನ್ನು ಗುಡ್ಡೆ ಹಾಕಿದರು. ತಹಸಿಲ್ದಾರರಿಗೆ ಮನವಿಯನ್ನು ಕೊಟ್ಟರು. ರಕ್ಷಣೆ ಕೋರಿದರು. ತಮಗೆ ಭೂಮಿಯನ್ನು ಉಳಲು ಅವಕಾಶ ಮಾಡಿಕೊಡಬೇಕು, ಉಳುಮೆಯ ಹಕ್ಕು ನಮ್ಮದು, ಅನೇಕ ವರ್ಷಗಳಿಂದ ಭೂಮಿಯಲ್ಲಿಯೇ ತಮ್ಮ ಅನ್ನವನ್ನು ಕಂಡುಕೊಂಡ ಒಕ್ಕಲು ನಮ್ಮವು; ನಮ್ಮನ್ನು ಒಕ್ಕಲು ಎಬ್ಬಿಸಬಾರದು ಎಂದು ಕೇಳಿಕೊಂಡರು. ಮೊದಲ ಬಾರಿಗೆ ತಮ್ಮ ಹಕ್ಕನ್ನು ಅವರು ಪ್ರತಿಪಾದಿಸಿದರು. ತಮಗೆ ಸಲ್ಲಿಸಿದ ಮನವಿ ಪತ್ರವನ್ನು ತಹಸಿಲ್ದಾರರು ಓದಿಕೊಂಡರೋ ಇಲ್ಲವೋ, ಆದರೆ ಈ ಮನವಿಯನ್ನುಸಾಗರವೆಂಬ ಊರು ಮತ್ತು ಸುತ್ತಲಿನ ಹತ್ತಾರು ಹಳ್ಳಿಗಳು ಆಗಲೇ ಓದಿಕೊಂಡಿದ್ದವು.

ಅದರ ನಂತರ ಗಾಂಧೀ ಮೈದಾನದಲ್ಲಿ ಸಾಗರ ತಾಲ್ಲೂಕು ಗೇಣಿದಾರರ ಸಭೆ, ಹಲವು ಸಂಗತಿಗಳ ಚರ್ಚೆ, ಸತ್ಯಾಗ್ರಹವನ್ನು ಆರಂಭಿಸಿ ಭೂಮಾಲೀಕರನ್ನು ಮಣಿಸುವ ನಿರ್ಧಾರ, ಸತ್ಯಾಗ್ರಹವನ್ನು ತಡಗಳಲೆಯಲ್ಲೇ ಮುಂದುವರಿಸಬೇಕೇ ಅಥವಾ ಅದನ್ನು ಬೇರೆಡೆಗೆ ವರ್ಗಾಯಿಸಬೇಕೆ ಎಂಬ ವಿಚಾರದ ಮಂಥನ. ಅನೇಕ ಸಾಧ್ಯತೆ ಮತ್ತು ಪರಿಣಾಮಗಳ ವಿವರವಾದ ಚರ್ಚೆ, ಸತ್ಯಾಗ್ರಹ ಕಾಗೋಡಿನಲ್ಲಿಯೇ ನಡೆಯಬೇಕು. ಕಾಗೋಡು ಒಡೆಯರ ಭೂಮಿಯಲ್ಲಿಯೇ ಸತ್ಯಾಗ್ರಹದ ಉಳುಮೆ ಮುಂದುವರಿಯಬೇಕು ಎಂಬ ತೀರ್ಮಾನ.

ಅದರ ಮರುದಿನದಿಂದ (18.4.1951) ಕಾಗೋಡು 'ಒಡೆಯರ' ಭೂಮಿಯಲ್ಲಿ ಸಾಗರ ತಾಲ್ಲೂಕು ರೈತ ಸಂಘದಿಂದ ಸತ್ಯಾಗ್ರಹ ಆರಂಭವಾಯಿತು. ಸಾಗರದಲ್ಲಿ ನಡೆದ ಮೆರವಣಿಗೆಯೇ ಇದಕ್ಕೆ ಪ್ರಚಾರ ನೀಡಿತ್ತು. ರೈತ ಸಂಘದ ನಿರ್ಧಾರ ಸತ್ಯಾಗ್ರಹಕ್ಕೆ ಚಾಲನೆ ನೀಡಿತಷ್ಟೆ, ಸತ್ಯಾಗ್ರಹ ಅಹಿಂಸಾ ಮಾರ್ಗದಲ್ಲಿ ನಡೆಯಬೇಕು, ಭೂ ಮಾಲೀಕರ ಹಿಂಸೆ, ಪೊಲೀಸರ ಬಂಧನ ಯಾವುದಕ್ಕೂ ಸೊಪ್ಪು ಹಾಕದೆ ಪ್ರತಿನಿತ್ಯವೂ ಸತ್ಯಾಗ್ರಹವನ್ನು ನಡೆಸಿಕೊಂಡು ಹೋಗಬೇಕು. ಭೂಮಿಯನ್ನು ಉಳಲು ರೈತರು ನಿತ್ಯವೂ ಭೂಮಿಗೆ ಇಳಿದು ನೇಗಿಲನ್ನು ಹೂಡಬೇಕು. ಸುತ್ತಲಿನ ಹಳ್ಳಿಗಳ ಗೇಣಿದಾರರು ತಂಡತಂಡವಾಗಿ ಬಂದು ಚಳವಳಿಯನ್ನು ಸೇರಿಕೊಳ್ಳಬೇಕು; ಚಳವಳಿ ನಿರಂತರವಾಗಿ ನಡೆದುಕೊಂಡು ಹೋಗಬೇಕು; ಈ ಚಳವಳಿ ಗೇಣಿ ಪದ್ಧತಿಯ ಹಿಂದಿನ ಶೋಷಣೆಯನ್ನು ಬುಡಸಹಿತ ಕಿತ್ತುಹಾಕಬೇಕು–ಇದು ಈ ಚಳವಳಿಯ ಆಶಯವಾಗಿತ್ತು.

****

ರಣರಂಗವಾದ ಉಳುಮೆಯ ಭೂಮಿ

ಕಾಗೋಡು : ಏಪ್ರಿಲ್ 18, 1951ರಿಂದ

1951ರ ಏಪ್ರಿಲ್ 18ನೆಯ ದಿನ. ಕಾಗೋಡು ಸತ್ಯಾಗ್ರಹದ ಇತಿಹಾಸದಲ್ಲಿ ಮಹತ್ವದ ದಿನ. ತನ್ನ ನಿರ್ಧಾರದಂತೆ ಸಾಗರ ತಾಲ್ಲೂಕು ಗೇಣಿದಾರರ ಸಂಘ ಕಾಗೋಡು ಒಡೆಯರ ಭೂಮಿಯಲ್ಲಿ ಸತ್ಯಾಗ್ರಹ ಆರಂಭಿಸಿತು. ಗೇಣಿದಾರರು ಹಿಂಡುಹಿಂಡಾಗಿ ನೇಗಿಲು ಎತ್ತುಗಳೊಂದಿಗೆ ಕಾಗೋಡಿಗೆ ಬಂದರು. ಅವರಿಗೆ ಬೆಂಬಲ ಸೂಚಿಸಿ ನೂರಾರು ಜನ. ಸುತ್ತಲಿನ ಹಳ್ಳಿಗಳೇ ಎದ್ದು ಬಂದಂತೆ, ಗೇಣಿದಾರರಿಗೆ ರೆಕ್ಕೆ ಮೂಡಿದಂತೆ, ಎಲ್ಲೆಲ್ಲೂ ಜನ ಜಾತ್ರೆ. ಪುಟ್ಟ ಹಳ್ಳಿಯಲ್ಲಿ ಹೆಜ್ಜೆ ಊರಲೂ ಜಾಗವಿಲ್ಲದಷ್ಟು ಜನ, ಜನವೋ ಜನ. ಗೇಣಿದಾರರಿಗೆ ಬೆಂಬಲ ಸೂಚಿಸುವ ಘೋಷಣೆಗಳು; ಭೂ ಮಾಲೀಕರ ದೌರ್ಜನ್ಯಕ್ಕೆ, ಶೋಷಣೆಗೆ ಧಿಕ್ಕಾರ ಕೂಗುವ ಘೋಷಣೆಗಳು; ಹೋರಾಟಕ್ಕೆ ಜಯವಾಗಲಿ ಎಂಬ ಮೊಳಗು. ಇಡೀ ಕಾಗೋಡು ಈ ಹೊಸ ನೋಟದಿಂದ, ಈ ಉಮೇದಿನಿಂದ, ಈ ಕೂಗುಗಳಿಂದ ಹೊಸ ಹುರುಪಿನಿಂದ ಎದ್ದು ಕುಣಿದಂತೆ ಕಾಣಿಸಿತು.

ತಾವು ಅನೇಕ ವರ್ಷಗಳಿಂದ ಉಳುತ್ತಬಂದ ಭೂಮಿಯಾದರೂ, ಗೇಣಿದಾರರಿಗೆ ಅವತ್ತು ಆ ಭೂಮಿ ಹೊಸ ಭೂಮಿಯಾಗಿಯೇ ಕಾಣಿಸಿತು. ಮಳೆ, ಬಿಸಿಲು, ಗಾಳಿ ಯಾವುದನ್ನೂ ಲೆಕ್ಕಿಸದೆ ತಮ್ಮ ಕಾಯಕವನ್ನು ಸದ್ದಿಲ್ಲದೆ ಸಲೀಸಾಗಿ ಮಾಡಿಕೊಂಡು ಬಂದ ಕರ್ಮಯೋಗಿ ಗೇಣಿದಾರರಿಗೆ ಇವತ್ತು ಹೊಸ ಅನುಭವ. ತಾವು ನೇಗಿಲು ಹಿಡಿದು ನೆಲ ಉಳುವುದನ್ನು ನೋಡಲು ನೂರಾರು ಜನ ಸೇರಿದ್ದಾರೆ. ಉಳುಮೆ ಎಂದಿನ ಉಳುಮೆಯಲ್ಲ. ಇದಕ್ಕೊಂದು ಹೊಸ ಅರ್ಥ, ಹೊಸ ಉದ್ದೇಶವಿದೆ. ಉಳುಮೆಯೂ ಸತ್ಯಾಗ್ರಹವಾಗಬಲ್ಲದು ಎಂಬುದನ್ನು ತಾವು ಸಾಬೀತು ಮಾಡಬೇಕಾಗಿದೆ. ನೆರೆದ ಜನ ಜಂಗುಳಿ ಸತ್ಯಾಗ್ರಹಿಗಳು ಇಡುವ ಪ್ರತಿ .ಹೆಜ್ಜೆಗೂ ಕುಮ್ಮಕ್ಕು ಕೊಡುತ್ತಿದೆ. ಕೇಕೆ ಹಾಕುತ್ತಿದೆ. ಘೋಷಣೆಗಳನ್ನು ಕೂಗುತ್ತಿದೆ. ಎತ್ತುಗಳು, ನೇಗಿಲು ಎಲ್ಲದಕ್ಕೂ ಹೊಸ ಹುರುಪು ಬಂದಂತಿದೆ. ಎತ್ತುಗಳ ನಡಿಗೆಗೂ ರಭಸ ಇದ್ದಂತೆ ತೋರುತ್ತಿದೆ. ಇದೇ ಭಾವದಲ್ಲಿ ಗೇಣಿದಾರರ ಗುಂಪು ಒಡೆಯರ ವಶದಲ್ಲಿದ್ದ ಹೊಲದತ್ತ ಸಾಗಿತು. ಅಲ್ಲಿ ಬೇರೊಂದು ಚಿತ್ರ. ಸಲೀಸಾಗಿ ಹೋಗಲೂ ಸಾಧ್ಯವಾಗದಂಥ ಕಾವಲು; ಸರ್ಪಗಾವಲು, ತಮ್ಮ ಪ್ರವೇಶವನ್ನು ಅಡ್ಡಗಟ್ಟಿದಂಥ ವ್ಯವಸ್ಥೆ: ಒಡೆಯರ ಕಡೆಯವರು, ಅವರ ಬೆಂಬಲಕ್ಕೆ ನಿಂತ, ಬೇರೆಯ ಊರುಗಳಿಂದ ಬಂದಿದ್ದ ಭೂ ಮಾಲೀಕ ವರ್ಗದ ಮಂದಿ, ಜೊತೆಗೆ ಪೊಲೀಸರು. ಇದನ್ನು ದಾಟಿಹೋಗಿ ಭೂಮಿಯನ್ನು ಉಳಬೇಕು; ತಮ ಹಕ್ಕನ್ನು ಸಾಧಿಸಬೇಕು. ಭೂಮಿ–ಗೇಣಿದಾರ–ನೇಗಿಲು–ಎತ್ತುಗಳು ಈ ಸಂಬಂಧದಲ್ಲಿ ಎಂದೂ ಅಂಥ ಅಡಚಣೆ ಇರಲಿಲ್ಲ; ಈ ಬಗೆಯ ಕಾವಲು ಕೂಡಾ ಹೊಸತು, ಭೂಮಿಗೆ. ಕಾವಲು ಹಾಕಿದ್ದನ್ನು ಅವರೆಂದೂ ನೋಡಿರಲಿಲ್ಲ. ಭೂಮಿಗೆ ಮತ್ತು ರೈತನಿಗೆ ಮಾತ್ರ ಸಂಬಂಧವಿದ್ದ ಉಳುಮೆ ಇವತ್ತು ಬೇರೆ ಬೇರೆಯ ಆಸಕ್ತಿಗಳ ಕೇಂದ್ರವಾಗಿದೆ. ಅದೆಲ್ಲ ಗೇಣಿದಾರರಲ್ಲಿ ಗೊಂದಲವನ್ನು ಹುಟ್ಟಿಸಿತು. ಏನು ಮಾಡಬೇಕೆಂಬುದು ತಿಳಿಯದೆ ತುಸು ಹೊತ್ತು ಹಾಗೆಯೇ ನಿಂತರು. ಆದರೆ ಅವರ ಬೆಂಬಲಕ್ಕೆ ನಿಂತಿದ್ದ ಗುಂಪು ಹುಮ್ಮಸ್ಸು ತುಂಬುತ್ತಿದೆ; ಜಯಕಾರ ಮೊಳಗಿಸುತ್ತಿದೆ. ಜಡವಸುಗಳಿಗೂ ಚೈತನ್ಯ ತುಂಬುವ ಸನ್ನಿವೇಶದಲ್ಲಿ ಗೇಣಿದಾರರು ಸುಮ್ಮನಿರುವುದು ಹೇಗೆ ಸಾಧ್ಯ? ಅವರು ಉಮೇದಿನಿಂದ ಎಲ್ಲ ಕಾವಲನ್ನು ಭೇದಿಸಿ, ತಮ್ಮ ಭೂಮಿಯ ಪುಟಗಳ ಮೇಲೆ ಹೊಸ ಇತಿಹಾಸವನ್ನು ಬರೆಯಲು ಮುನ್ನುಗ್ಗಿದರು.

ತಕ್ಷಣವೇ ನುಗ್ಗಿ ಬಂದರು ಕಾವಲಿಗೆ ನಿಂತಿದ್ದ ಒಡೆಯರ ಕಡೆಯವರು ಮತ್ತು ಪೊಲೀಸರು. ನೂಕಾಟ, ತಳ್ಳಾಟ, ಮೊಕ ಮಾರೆ ನೋಡದ ಹೊಡೆತ, ಬಡಿತ, ಬೈಗುಳ. ಯಾರು ಏನು ಮಾಡುತ್ತಿದ್ದಾರೆಂಬುದು ತಿಳಿಯುವ ಮುನ್ನವೇ ಸತ್ಯಾಗ್ರಹಿಗಳ ಮೇಲೆ ಭೀಕರ ಹಲ್ಲೆ ನಡೆಯಿತು. ಎತ್ತುಗಳು ದಿಕ್ಕಾಪಾಲಾಗಿ ಓಡಿದವು. ಹಿಂಸೆ, ಕ್ರೌರ್ಯ ಭೂತ ಕುಣಿತ ಕುಣಿದವು. 'ನಮ್ಮನ್ನು ಧಿಕ್ಕರಿಸುವವರಿಗೆ ಇದೇ ಪಾಠ' ಎನ್ನುವಂತಿತ್ತು ಭೂಮಾಲೀಕರ ಕಡೆಯವರ ಹಲ್ಲೆ. ಶಾಂತ ರೀತಿಯಲ್ಲಿ, ಅಹಿಂಸಾತ್ಮಕವಾಗಿ ತಮ್ಮ ಉಳುವ ಹಕ್ಕನ್ನು ಸಾರಲು ಬಂದಿದ್ದ ಗೇಣಿದಾರರು ಕಂಗಾಲಾದರು. ತಮ್ಮ ರಟ್ಟೆಯಲ್ಲಿ ಶಕ್ತಿ ಇದ್ದರೂ ಅವರು ತಿರುಗಿ ಹೊಡೆಯುವಂತಿಲ್ಲ; ಬೈಗುಳ ಭಂಡಾರವೇ ಇದ್ದರೂ ಬೈಯ್ಯುವಂತಿಲ್ಲ. ಆದರೆ ಹೊಲವನ್ನು ಪ್ರವೇಶಿಸುವ ತಮ್ಮ ಹಟವನ್ನು ಬಿಡುವಂತೆಯೂ ಇಲ್ಲ. ಇದು ಸತ್ಯಾಗ್ರಹ, ಎಲ್ಲವನ್ನೂ ಸಹಿಸಬೇಕು, ಶಾಂತಿ ಕದಡದಂತೆ ನೋಡಿಕೊಳ್ಳಬೇಕು. ಸತ್ಯಾಗ್ರಹಕ್ಕೆ ಸಿದ್ಧವಾಗುವ ಮುನ್ನವೇ ಗೇಣಿದಾರರ ಸಂಘದ ನೇತಾರರು ಹೇಳಿಕೊಟ್ಟ ಪಾಠ. ಇದನ್ನು ಯಾವ ಹೊತ್ತಿನಲ್ಲಿಯೇ ಆಗಲಿ, ಮೀರುವಂತಿಲ್ಲ. ಎಂಥ ನೋವನ್ನೂ, ದಬ್ಬಾಳಿಕೆಯನ್ನೂ, ಅಪಮಾನವನ್ನೂ ಸಹಿಸಬೇಕು.

ನೋಡುನೋಡುತ್ತಿದ್ದಂತೆಯೇ ಕಾಗೋಡು ರಣರಂಗವಾಯಿತು. ಸತ್ಯಾಗ್ರಹವನ್ನು ನೋಡಲೆಂದು, ಉಳುವವರಿಗೆ ಹುಮಸು ತುಂಬಲೆಂದು ಬಂದವರೂ ಹೆದರಿದರು. ಅವರೂ ಇಂಥ ಕೃತ್ಯವನ್ನು ಊಹಿಸಿರಲಿಲ್ಲ. ಯಾರು ಯಾರನ್ನೂ ಹೊಡೆಯುವ, ಬಡಿಯುವ, ಹಲ್ಲೆಮಾಡುವ ಸನ್ನಿವೇಶ ಸತ್ಯಾಗ್ರಹದಲ್ಲಿ ಇರುವುದಿಲ್ಲ ಎಂದು ಅವರೆಲ್ಲ ಭಾವಿಸಿದ್ದರು. ಆದರೆ ನಡೆದದ್ದು ಬೇರೆಯೇ ಆಗಿತ್ತು, ಭಯಾನಕ ವಾತಾವರಣ ಕಾಣಿಸಿಕೊಂಡಿತು, ಶಾಂತ ರೀತಿಯಲ್ಲಿ ಸತ್ಯಾಗ್ರಹ ನಡೆಸುವುದಕ್ಕೆ ಬಂದಿದ್ದಗೇಣಿದಾರರಿಗೆ ರಕ್ಷಣೆ ನೀಡಬೇಕಾಗಿದ್ದ ಪೊಲೀಸರು, ಇದು ಅತಿಕ್ರಮ ಪವೇಶವೆಂದು ಗೇಣಿದಾರರನ್ನೇ ಬಂಧಿಸಿದರು. ಒಡೆಯರ ಕಡೆಯವರು ನಡೆಸಿದ ಹಲ್ಲೆ ಪೊಲೀಸರಿಗೆ ಅಪರಾಧವಾಗಿಯೇ ಕಾಣಲಿಲ್ಲ. ಅವರು ಬಂದದ್ದು ಭೂಒಡೆಯರಿಗೆ ರಕಣೆಕೊಡುವುದಕ್ಕೇ ಎಂಬುದು ನಿಚ್ಚಳವಾಗಿತ್ತು. ಪೆಟ್ಟು, ಅಪಮಾನ, ಬೈಗುಳ ಎಲ್ಲವನ್ನೂ ಮೌನವಾಗಿ ಸಹಿಸಿದ ಗೇಣಿದಾರ ಸತ್ಯಾಗ್ರಹಿಗಳು ಪೊಲೀಸರ ಬಂಧನಕ್ಕೂ ಒಳಗಾದರು. ಒಂದು ತಂಡದ ಸತ್ಯಾಗ್ರಹಿಗಳನ್ನು ಬಂಧಿಸಿದರೆ, ಇನ್ನೊಂದು ತಂಡ ಭೂಮಿಯನ್ನು ಉಳಲು ಮುಂದಾಯಿತು. ಆಗಲೂ ಇದೇ ಆಟ ಮುಂದುವರಿದು, ಅಮಾಯಕರು ಪೆಟ್ಟು ತಿಂದರು. ಆದರೆ ಧೈರ್ಯ ಕೆಡಲಿಲ್ಲ. ಸತ್ಯಾಗ್ರಹದಲ್ಲಿ ಅವರಿಟ್ಟಿದ್ದ ನಂಬಿಕೆ ಕದಲಲಿಲ್ಲ. ಅವರೂ ಮೌನವಾಗಿ ಎಲ್ಲವನ್ನು ಸಹಿಸಿ ಬಂಧನಕ್ಕೆ ಒಳಗಾದರು. ನಂತರ ಮತ್ತೊಂದು ತಂಡ, ಈ ಕಾರ್ಯತಂತ್ರವನ್ನು ಸಂಘ ರೂಪಿಸಿತ್ತು. ಅದನ್ನು ಚಾಚೂ ತಪ್ಪದೆ ಗೇಣಿದಾರರು ಪಾಲಿಸಿದರು. ಏಟುಗಳಿಗೆ, ಬಂಧನಕ್ಕೆ, ಅಪಮಾನಕ್ಕೆ ಯಾವ ಸತ್ಯಾಗ್ರಹಿಯೂ ಹೆದರಲಿಲ್ಲ..

.. ..

ಹೋರಾಟ ದಿನದಿನಕ್ಕೆ ಕುಗ್ಗುತ್ತದೆ, ಒಂದು ದಿನ ನಿಂತೇ ಹೋಗುತ್ತದೆ, ಎಷ್ಟು ದಿನ ಹೋರಾಟ ನಡೆಯಲು ಸಾಧ್ಯ ಎಂದು ದಿನಗಳನ್ನು ಎಣಿಸುತ್ತಿದ್ದ ಭೂಮಾಲೀಕರ ಎಣಿಕೆ ತಪ್ಪಾಗುವಂತೆ ಹೋರಾಟ ದಿನದಿಂದ ದಿನಕ್ಕೆ ಬೆಳೆಯುತ್ತ, ಕಳೆಗಟ್ಟುತ್ತ ಹೋಯಿತು. ಸಾಗರ ತಾಲ್ಲೂಕಿನ ಮೂಲೆ ಮೂಲೆಗಳಿಂದ ಸತ್ಯಾಗ್ರಹಿಗಳು ತಂಡತಂಡವಾಗಿ ಬರತೊಡಗಿದರು. ಸುತ್ತಲಿನ ತಾಲ್ಲೂಕುಗಳಲ್ಲೂ ಗೇಣಿದಾರರ, ದೀವರ ಕುಟುಂಬಗಳು ಹೆಚ್ಚಾಗಿದ್ದವು. ಅವರಿಗೂ ಗೇಣಿದಾರರ ಬಿಸಿ ಮುಟ್ಟಿತ್ತು.ನೋವನ್ನು ಅವರೂ ಬಲ್ಲವರೇ. ಎತ್ತುಗಾಡಿಗಳು, ನೊಗ ನೇಗಿಲುಗಳು, ಸತ್ಯಾಗ್ರಹಕ್ಕೆ ಬೆಂಬಲವಾಗಿ ನಿಲ್ಲುವ ತಂಡಗಳು, ಎಲ್ಲ ಪಯಣವೂ ಒಂದೇ ದಿಕ್ಕಿನತ್ತ; ಒಂದೇ ಗುರಿಯತ್ತ, ಕಾಗೋಡು ಗುರಿಯ ಕೇಂದ್ರವಾಗಿತ್ತು. ■

ಹೊಸ ನೋಟದಲ್ಲಿ ಭಾರತದ ಕಾರ್ಮಿಕ ವರ್ಗ
1947 ರಿಂದ 1970

ಮೂಲ ಲೇಖಕರು:
ಸುಕೋಮಲ್ ಸೇನ್
ಸಂಗ್ರಹ–ಅನುವಾದ :
ಸಿ.ಆರ್.ಶಾನಭಾಗ



ರಾಜಕೀಯ ಸನ್ನಿವೇಶದಲ್ಲಿ ಮೂಲಭೂತ ಬದಲಾವಣೆ

ಆಗಸ್ಟ್ 15, 1947 ರಂದು ಅಧಿಕಾರ ವರ್ಗಾವಣೆ ಮೂಲತಃ ಭಾರತದ ರಾಜಕೀಯ ಸನ್ನಿವೇಶವನ್ನು ಬದಲಾಯಿಸಿತು. ಸ್ವಾತಂತ್ರ್ಯವು ಭಾರತದ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗಗಳಿಗೆ ಹೊಸ ರಾಜಕೀಯ ಶಕ್ತಿಯನ್ನು ನೀಡಿತು, ಅವರ ಆರ್ಥಿಕ ಹಿತಾಸಕ್ತಿಗಳು ಮತ್ತು ಆದ್ದರಿಂದ ರಾಜಕೀಯ ಹಿತಾಸಕ್ತಿಗಳು ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ನೇರವಾಗಿ ವಿರುದ್ಧವಾಗಿದ್ದವು. ಅದು ಈಗ ಶೋಷಿತ ಬಹುಸಂಖ್ಯಾತರ ವಿರುದ್ಧ ಶೋಷಿಸುವ ಅಲ್ಪಸಂಖ್ಯಾತರ ಆಳ್ವಿಕೆಯಾಗಿ, ಅಂದರೆ ಬಂಡವಾಳದ ಆಳ್ವಿಕೆಯಾಗಿ ಬದಲಾಯಿತು. ಸ್ವಾತಂತ್ರ್ಯದ ನಂತರದ ಅವಧಿಯಲ್ಲಿ ಕಾರ್ಮಿಕ ವರ್ಗದ ಎದುರು ಬಂಡವಾಳದ ಆಡಳಿತವನ್ನು ಕೊನೆಗೊಳಿಸುವ ಮತ್ತು ಸಮಾಜವಾದದ ನೈಜ ಅರ್ಥದಲ್ಲಿ, ಮನುಷ್ಯನಿಂದ ಮನುಷ್ಯನ ಶೋಷಣೆಯಿಂದ ಮುಕ್ತವಾದ ಸಮಾಜ ಸ್ಥಾಪಿಸುವ, ಕಠಿಣ ಮತ್ತು ಉನ್ನತ ಕ್ರಾಂತಿಕಾರಿ ಉದ್ದೇಶವನ್ನು ಸಾಧಿಸುವ ಜವಾಬ್ದಾರಿ ಬಂದಿತು. ಈ ಕ್ರಾಂತಿಕಾರಿ ಉದ್ದೇಶವನ್ನು ಸಾಧಿಸುವ ಸುದೀರ್ಘ ಹೋರಾಟದಲ್ಲಿ, ಕಾರ್ಮಿಕ ವರ್ಗವು ತನ್ನ ಮಿತ್ರರನ್ನು ಜನಸಮೂಹದ ಇತರ ಶೋಷಿತ ಸ್ತರಗಳಲ್ಲಿ–ಮುಖ್ಯವಾಗಿ ರೈತರಲ್ಲಿ ಕಂಡುಕೊಳ್ಳಬೇಕಾಯಿತು.

ಆದರೆ ಈ ಹೋರಾಟದಲ್ಲಿ ಎಲ್ಲಕ್ಕಿಂತ ಮುಖ್ಯವಾದುದು ಕಾರ್ಮಿಕ ವರ್ಗದ ಜನಸಮೂಹದಲ್ಲಿಯೇ ರೂಪಿಸಬೇಕಾದ ಆಂತರಿಕ ಏಕತೆ. ಆದರೆ ಇಲ್ಲಿಯೇ ಕ್ರಾಂತಿಕಾರಿ ಕಾರ್ಮಿಕ ವರ್ಗವನ್ನು ಆರಂಭಿಕ ಅನಾನುಕೂಲಕ್ಕೆ ತಳ್ಳಲಾಗಿತ್ತು.

ಟ್ರೇಡ್ ಯೂನಿಯನ್ ಚಳವಳಿಯಲ್ಲಿ ಮತ್ತಷ್ಟು ವಿಭಜನೆ

ಸ್ವಾತಂತ್ರ್ಯದ ನಂತರ ವಿಭಿನ್ನ ರಾಜಕೀಯ ಪಕ್ಷಗಳು ಭಾರತದ ರಾಜಕೀಯ ರಂಗದಲ್ಲಿ ವಿಭಿನ್ನ ರಾಜಕೀಯ ನಿಲುವುಗಳೊಂದಿಗೆ ಕಾಣಿಸಿಕೊಂಡವು. ಮತ್ತು ತಮ್ಮ ರಾಜಕೀಯ ಮತ್ತು ಸಂಘಟನಾತ್ಮಕ ಘಟಕಗಳನ್ನು ಇತರರಿಗಿಂತ ಭಿನ್ನವೆಂದು ಹೆಚ್ಚು ಹೆಚ್ಚು ಪ್ರತಿಪಾದಿಸಲು ಪ್ರಯತ್ನಿಸಿದವು. ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಈ ಪ್ರಕ್ರಿಯೆಯಲ್ಲಿ ಮತ್ತಷ್ಟು ವಿಭಜನೆ ಮತ್ತು ಪುನರ್ವಿತರಣೆಗೆ ಒಳಪಟ್ಟಿತು.

ಕಾಂಗ್ರೆಸ್–ಸಮಾಜವಾದಿಗಳು. ಮಾರ್ಚ್ 1948 ರಲ್ಲಿ ಎಐಟಿಯುಸಿಯನ್ನು ತೊರೆದು ಹಿಂದ್ ಮಜ್ದೂರ್ ಪಂಚಾಯತ್ ಎಂಬ ಪ್ರತ್ಯೇಕ ಸಂಘಟನೆಯನ್ನು ರಚಿಸಿದರು. ಆದರೆ ಶೀಘ್ರದಲ್ಲೇ ಸಮಾಜವಾದಿಗಳ ನೇತೃತ್ವದ ಈ ಹಿಂದ್ ಮಜ್ದೂರ್ ಪಂಚಾಯತ್ ಮತ್ತು ರಾಯ್–ವಾದಿಗಳ ನೇತೃತ್ವದ ಇಂಡಿಯನ್ ಫೆಡರೇಶನ್ ಆಫ್ ಲೇಬರ್ 1948 ರ ಡಿಸೆಂಬರ್ 24 ರಂದು ಕಲ್ಕತ್ತಾದಲ್ಲಿ ಜಂಟಿ ಸಭೆಯಲ್ಲಿ ಸೇರಿ ತಮ್ಮನ್ನು ತಾವು ಸಂಪೂರ್ಣವಾಗಿ ಹೊಸ ಸಂಘಟನೆಯಾದ ಹಿಂದ್ ಮಜ್ದೂರ್ ಸಭಾ ಗೆ ಜನ್ಮ ನೀಡಿದವು. ನಂತರ ಐಎನ್‌ಟಿಯುಸಿ ಮತ್ತು ಎಚ್‌ಎಂಎಸ್ ಎರಡೂ ತಮ್ಮನ್ನು ಇಂಟರ್ನ್ಯಾಷನಲ್ ಕಾನ್ಫೆಡರೇಶನ್ ಆಫ್ ಫ್ರೀ ಟ್ರೇಡ್ ಯೂನಿಯನ್ಸ್ ಗೆ ಸಂಯೋಜಿಸಿದವು,

ಅವರಲ್ಲಿ ಕೆಲವರು ಡಿಸೆಂಬರ್ 27, 1948 ರಂದು ಕಲ್ಕತ್ತಾದಲ್ಲಿ ಪ್ರತ್ಯೇಕ ಸಭೆಯಲ್ಲಿ ಭೇಟಿಯಾಗಿ ಯುನೈಟೆಡ್ ಟ್ರೇಡ್ ಯೂನಿಯನ್ ಕಮಿಟಿ ಯನ್ನು ರಚಿಸಿದರು. ನಂತರ ಆ ಸಮಿತಿಯು ಏಪ್ರಿಲ್ 30, 1949 ರಂದು ಕಲ್ಕತ್ತಾದಲ್ಲಿ ಕರೆದ ಸಮ್ಮೇಳನದಲ್ಲಿ ಈ ಹೊಸ ರಾಷ್ಟ್ರೀಯ ಟಿಯು ಕೇಂದ್ರವು ವಿಭಜನೆಯಾಯಿತು ಮತ್ತು ಅಂದಿನಿಂದ ಕಾರ್ಮಿಕರು ಯುಟಿಯುಸಿಯ ಒಂದೇ ಹೆಸರನ್ನು ಹೊಂದಿರುವ ಸಂಸ್ಥೆಗಳು ಆದರೆ ವಿಭಿನ್ನ ವಿಳಾಸಗಳೊಂದಿಗೆ ಎರಡು ಕೇಂದ್ರಗಳು ಪರಸ್ಪರ ಸಮಾನಾಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಹಿಂದ್ ಮಜ್ದೂರ್ ಸಭಾ ಕೂಡ ದೀರ್ಘಕಾಲ ಒಗ್ಗಟ್ಟಾಗಿರಲು ಸಾಧ್ಯವಾಗಲಿಲ್ಲ. ಸಮಾಜವಾದಿ ಪಕ್ಷದೊಳಗಿನ ಆಂತರಿಕ ಭಿನ್ನಾಭಿಪ್ರಾಯವು ಹಿಂದ್ ಮಜ್ದೂರ್ ಪಂಚಾಯತ್ ಎಚ್‌ಎಂಎಸ್‌ಗೆ ಸಮಾನಾಂತರವಾಗಿ ಪ್ರತ್ಯೇಕ ಘಟಕವಾಗಿ ಪುನಃ ಕಾಣಿಸಿಕೊಳ್ಳಲು ಕಾರಣವಾಯಿತು

1955 ರಲ್ಲಿ ಕಾರ್ಮಿಕ ರಂಗದಲ್ಲಿ ಭಾರತೀಯ ಮಜ್ದೂರ್ ಸಂಘ(ಬಿಎಂಎಸ್) ಕಾಣಿಸಿಕೊಂಡಿತು. ವಾಸ್ತವವಾಗಿ ಈ ಸಂಘಟನೆಯುನ್ನು ಹಿಂದೂ ಪುನರುಜ್ಜೀವನದ ಪ್ರತಿಗಾಮಿ ತತ್ವಶಾಸ್ತ್ರವನ್ನು ಆಧರಿಸಿದ ರಾಜಕೀಯ ಪಕ್ಷವಾದ ಜನಸಂಘದ ಕಾರ್ಮಿಕ ವಿಭಾಗವಾಗಿ ರಚಿಸಲಾಗಿದೆ. ಆದರೆ ಈಗ ಜನಸಂಘದ ಪ್ರಸ್ತುತ ಆವೃತ್ತಿ, ಬಿಜೆಪಿಯ ಶ್ರಮದಿಂದಾಗಿ ಅದನ್ನು ವಿಸ್ತರಿಸಲು ಸಮರ್ಥವಾಗಿದೆ.

ಈ ಪ್ರಕ್ರಿಯೆಯಲ್ಲಿ ಭಾರತದ ಕಾರ್ಮಿಕ–ವರ್ಗ, ವರ್ಗ ಪಾಲಿಸಬೇಕಾದ ಏಕತೆಗೆ ಹಾನಿಯಾಗುವಂತೆ ಪರಸ್ಪರ ಸ್ಪರ್ಧಿಸುತ್ತಿರುವ ಮತ್ತು ಕೆಲವೊಮ್ಮೆ ಪರಸ್ಪರ ಎದುರಾಗುತ್ತಿರುವ, ಹಲವಾರು ರಾಜಕೀಯ ಮತ್ತು ಸೈದ್ಧಾಂತಿಕ ಪ್ರಭಾವಗಳ ಬಲಿಪಶುವಾಗಿ ನಿರೂಪಿಸಲ್ಪಟ್ಟಿದೆ.

ಸರ್ಕಾರದ ಆರ್ಥಿಕ ನೀತಿ ಮತ್ತು ಸ್ವಾತಂತ್ರ್ಯೋತ್ತರ ಹೋರಾಟಗಳು

ದೇಶದ ಸ್ವಾತಂತ್ರ್ಯ ಹುಟ್ಟಿಹಾಕಿದ ಹೊಸ ಯುಗವು ಭಾರತದ ಜನರ ಎಲ್ಲಾ ವಿಭಾಗಗಳಲ್ಲಿ ಅಪಾರ ಭರವಸೆಗಳನ್ನು ಮತ್ತು ಆಕಾಂಕ್ಷೆಗಳನ್ನು ಹುಟ್ಟುಹಾಕಿತು. ಆದರೆ ಸ್ವಾತಂತ್ರ್ಯವು ಹಣದುಬ್ಬರದ ಸುರುಳಿ, ಬೆಲೆಗಳಲ್ಲಿ ಭಾರಿ ಏರಿಕೆ ಮತ್ತು ಕಾರ್ಮಿಕರ ನೈಜ ವೇತನದಲ್ಲಿ ನಿರಂತರ ಕುಸಿತದೊಂದಿಗೆ ಬಂದಿತು. ಇದಲ್ಲದೆ, ಆಳುವ ವರ್ಗಗಳು ಹೊಸದಾಗಿ ಸ್ವತಂತ್ರವಾದ ದೇಶದಲ್ಲಿ ಬಂಡವಾಳಶಾಹಿಯನ್ನು ನಿರ್ಮಿಸುವ ಹಾದಿಯಲ್ಲಿ ಸಾಗಲು ಪ್ರಾರಂಭಿಸಿದ್ದರಿಂದ, ಅದು ದುಡಿಯುವ ಜನಸಾಮಾನ್ಯರಿಗೆ ಹೇಳಲಾಗದ ಕಷ್ಟಗಳನ್ನು ಮತ್ತು ಸಂಕಟಗಳನ್ನು ತಂದಿತು. ಇದು ದೇಶಾದ್ಯಂತ ಕಾರ್ಮಿಕ ವರ್ಗದ ಪ್ರಬಲ ಪ್ರತಿರೋಧವನ್ನು ಹುಟ್ಟುಹಾಕಿತು.

ಈ ಪ್ರತಿರೋಧವನ್ನು ಎಐಟಿಯುಸಿ ಮುನ್ನಡೆಸಿದ್ದರಿಂದ, ಸರ್ಕಾರವು ಅದರ ಮೇಲೆ ಮತ್ತು ಅದರ ಅಂಗಸಂಸ್ಥೆಗಳ ಮೇಲೆ ಭಯೋತ್ಪಾದನೆಯ ದಾಳಿಯನ್ನು ಹರಿಬಿಟ್ಟಿತು. ಎಐಟಿಯುಸಿ ಸಂಘಗಳ ಅನೇಕ ಕಚೇರಿಗಳಿಗೆ ಮೊಹರು ಹಾಕಲಾಯಿತು, ಎಐಟಿಯುಸಿಯ ಮತ್ತು ಅದರ ಅಂಗಸಂಸ್ಥೆಗಳ ಪ್ರಮುಖ ನಾಯಕರು ಬಂಧನಕ್ಕೊಳಗಾದರು. ಅಥವಾ ಭೂಗತರಾಗಬೇಕಾಯಿತು. ಮತ್ತು ಈ ಪ್ರಕ್ರಿಯೆಯಲ್ಲಿ ಅನೇಕ ಸಮರಶೀಲ ಕಾರ್ಯಕರ್ತರನ್ನು ಅವಮಾನವೀಯವಾಗಿ ಹಿಂಸಿಸಲಾಯಿತು ಅಥವಾ ಕೊಲ್ಲಲಾಯಿತು. ಎಐಟಿಯುಸಿಯ ಶಕ್ತಿ, ಅದು ಯಾವಾಗಲೂ ದುಡಿಯುವ ಜನರ ಹಿತಾಸಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ ಮತ್ತು ಅಭೂತಪೂರ್ವ ಧೈರ್ಯ ಮತ್ತು ನಿಸ್ವಾರ್ಥತೆಯಿಂದ ಕಾರ್ಮಿಕರು ಮತ್ತು ಜನಸಾಮಾನ್ಯರೊಂದಿಗೆ ನಿಂತಿತು ಎನ್ನುವದರಲ್ಲಿತ್ತು. ದುಡಿಯುವ ಜನಸಮೂಹ ಎಐಟಿಯುಸಿಯ ಮಡಿಲಿಗೆ ಬರಲು ಹಿಂಜರಿಯುತ್ತಿದ್ದರೂ ಎಐಟಿಯುಸಿಯನ್ನು ತಮ್ಮ ಹಿತಾಸಕ್ತಿಗಳನ್ನು ಕಾಪಾಡುವ ಸಂಘಟನೆಯಾಗಿ ನೋಡಿದರು.

ಬಂಡವಾಳಶಾಹಿಯ ನೆಲೆಯನ್ನು ಬಲಪಡಿಸುವ ಸಲುವಾಗಿ ಆಳುವ ವರ್ಗಗಳು ಆರ್ಥಿಕತೆಯ ಯೋಜಿತ ಅಭಿವೃದ್ಧಿಯ ಒಂದು ಹಂತಕ್ಕೆ ಪ್ರವೇಶಿಸಿದವು. ಮೊದಲ, ಎರಡನೇ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳನ್ನು ಕ್ರಮವಾಗಿ 1951–56, 1956–61 ಮತ್ತು 1961–66ರ ಅವಧಿಯಲ್ಲಿ ಜಾರಿಗೆ ತರಲಾಯಿತು. ನಾಲ್ಕನೇ ಯೋಜನೆಯನ್ನು 1966–71ರ ಅವಧಿಯಲ್ಲಿ ಜಾರಿಗೆ ತರಲಾಯಿತು.

ಭಾರತದಲ್ಲಿ ಈ ಯೋಜನೆಗಳು ಕಾರ್ಮಿಕ ವರ್ಗ ಮತ್ತು ಇತರ ದುಡಿಯುವ ಜನಸಮೂಹದ ಕನಿಷ್ಠ ಮೂಲಭೂತ ಅಗತ್ಯಗಳನ್ನು ಪೂರೈಸಲಿಲ್ಲ. 1950 ರಿಂದ 1962 ರವರೆಗಿನ ಸಂಪೂರ್ಣ ಅವಧಿಯಲ್ಲಿ, ಕಾರ್ಖಾನೆಯ ಕಾರ್ಮಿಕರ ಸರಾಸರಿ ವಾರ್ಷಿಕ ವೇತನದ ಬಹುತೇಕ ಭಾಗ ಜೀವನ ವೆಚ್ಚದಲ್ಲಿನ ಸ್ಥಿರ ಏರಿಕೆಯಿಂದ ನಾಶವಾಯಿತು.. ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಜೀವನ ವೆಚ್ಚ ಸೂಚ್ಯಂಕ ಸರಣಿಯನ್ನು ಸಿದ್ಧಪಡಿಸುವಲ್ಲಿನ ಮೋಸದ ಅಭ್ಯಾಸಗಳ ವಿರುದ್ಧ ಸಮರ್ಥನೀಯ ದೂರುಗಳನ್ನು ನೀಡಿತ್ತು. ಕಾರ್ಮಿಕ ವರ್ಗವು ತಮ್ಮ ಜೀವನಮಟ್ಟದ ಮೇಲೆ ಈ ದಾಳಿಯ ವಿರುದ್ಧ ತೀವ್ರ ಪ್ರತಿರೋಧವನ್ನು ಮುಷ್ಕರಗಳು, ಕೈಗಾರಿಕಾವಾರು ಮತ್ತು ಪ್ರದೇಶವಾರು ಸಾರ್ವತ್ರಿಕ ಮುಷ್ಕರಗಳು, ಸಾಮೂಹಿಕ ಪ್ರದರ್ಶನಗಳು ಮತ್ತು ಹಲವಾರು ಇತರ ಸಾಮೂಹಿಕ ಕ್ರಿಯೆಗಳ ರೂಪದಲ್ಲಿ ನಡೆಸಬೇಕಾಯಿತು.

ಯೋಜನೆಯ ಅವಧಿಯಲ್ಲಿ ಭಾರತದ ಕೈಗಾರಿಕಾ ನಕ್ಷೆಯಲ್ಲಿ ಅನೇಕ ಹೊಸ ಕೈಗಾರಿಕೆಗಳು ಬಂದವು. ಉಕ್ಕು ಮತ್ತು ಇತರ ಭಾರೀ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಹಡಗು ನಿರ್ಮಾಣ ಮತ್ತು ಲೋಕೋಮೋಟಿವ್‌ನಿಂದ ಹಿಡಿದು ಔಷಧಿಗಳು ಮತ್ತು ರಾಸಾಯನಿಕಗಳು, ಭಾರತಕ್ಕೆ ಅಷ್ಟು ಪರಿಚಿತವಿರದಿದ್ದ ಕೈಗಾರಿಕೆಗಳ ವಿವಿಧ ಶಾಖೆಗಳು, ಈಗ ಭಾರತದಲ್ಲಿ ಸ್ಥಾಪನೆಯಾದವು. ಬ್ಯಾಂಕಿಂಗ್, ವಿಮೆ ಮತ್ತು ಸಂವಹನ ಉದ್ದಿಮೆಗಳು ಪ್ರವರ್ಧಮಾನಕ್ಕೆ ಬಂದವು, ಆಡಳಿತ ಯಂತ್ರವೂ ಸಹ ಸಾಕಷ್ಟು ವಿಸ್ತರಣೆಗೆ ಒಳಗಾಯಿತು. ಈ ಕೈಗಾರಿಕಾ ವಿಸ್ತರಣೆಯು ಕಾರ್ಮಿಕ ವರ್ಗದ ಸಂಖ್ಯಾತ್ಮಕ ಬಲದ ಏರಿಕೆಗೆ ಕಾರಣವಾಯಿತು.

ಜುಲೈ 11–12, 1957 ರಂದು ದೆಹಲಿಯಲ್ಲಿ ನಡೆದ ಭಾರತ ಕಾರ್ಮಿಕ ಸಮ್ಮೇಳನದ 15 ನೇ ಅಧಿವೇಶನವು ಅಗತ್ಯ ಆಧಾರಿತ ಕನಿಷ್ಠ ವೇತನವನ್ನು ಲೆಕ್ಕಾಚಾರ ಮಾಡಲು ಕೆಲವು ಮಾನದಂಡಗಳನ್ನು ನಿರ್ಧರಿಸಿತು ಮತ್ತು 15 ನೇ ಐಎಲ್‌ಸಿಯ ನಿರ್ಧಾರವು ದೇಶದ ನೌಕರರು ಮತ್ತು ಕಾರ್ಮಿಕರನ್ನು ಪ್ರಕ್ಷುಬ್ಧ ಕ್ರಮಗಳಿಗೆ ಪ್ರೇರೇಪಿಸಿತು.

ತುಟ್ಟಿ–ಭತ್ಯೆಗೆ ಸಂಬಂಧಿಸಿದಂತೆ, ಮೇ 1947 ರಲ್ಲಿ ಅಂದರೆ, ಸ್ವಾತಂತ್ರ್ಯದ ಮೊದಲು, ವರದಿ ನೀಡಿದ ಮೊದಲ ಕೇಂದ್ರ ವೇತನ ಆಯೋಗ, ಕೆಲವು ತತ್ವಗಳನ್ನು ವಿವರಿಸಿತ್ತು. ಆಯೋಗದ ವರದಿಯು 'ಖಾಸಗಿ ಉದ್ಯಮಕ್ಕೆ ಕನಿಷ್ಠ ವೇತನ ಶಾಸನವನ್ನು ಪ್ರಾಯೋಜಿಸಲು ಪ್ರಸ್ತಾಪಿಸುವ ಸರ್ಕಾರವು ಆ ತತ್ವದ ಲಾಭವನ್ನು ತನ್ನ ಸ್ವಂತ ಉದ್ಯೋಗಿಗಳಿಗೆ ನೀಡಲು ಸಿದ್ಧವಾಗಿರಬೇಕು. ' ಎಂದಿತು.

ವೇತನ ಮತ್ತು ತುಟ್ಟಿ–ಭತ್ಯೆಯ ಪ್ರಶ್ನೆಯ ಹೊರತಾಗಿ, ಸರ್ಕಾರಿ ನೌಕರರು ಬ್ರಿಟಿಷರು ಮಾಡಿದ ಸರ್ಕಾರಿ ನೌಕರರ ನಡವಳಿಕೆ ನಿಯಮಗಳ ಮುಂದುವರಿಕೆಯ ಬಗ್ಗೆ, ಅದು ಸರ್ಕಾರಿ ನೌಕರರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ನಿರಾಕರಿಸುತ್ತದೆ ಮತ್ತು ಸಾಮಾನ್ಯ ಪ್ರಜಾಪ್ರಭುತ್ವ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸುತ್ತದೆ ಎಂದು ನಿಯಮಗಳ ಸಂಪೂರ್ಣ ನಿರ್ಮೂಲನೆ ಅಥವಾ ಅವನ್ನು ಸಂಪೂರ್ಣವಾಗಿ ಮಾರ್ಪಡಿಸುವಂತೆ ಒತ್ತಾಯಿಸಿದರು.

ಎರಡನೇ ವೇತನ ಆಯೋಗವು ಅಗತ್ಯ–ಆಧಾರಿತ ಕನಿಷ್ಠ ವೇತನದ ತತ್ವವನ್ನು ಸ್ವೀಕರಿಸುವ ಪ್ರಶ್ನೆಯನ್ನು ಸಂಪೂರ್ಣವಾಗಿ ನಿರಾಕರಿಸಿತು, ಮತ್ತು ಬೆಲೆಗಳಲ್ಲಿನ ಪ್ರವೃತ್ತಿಗಳನ್ನು ಸರಿಹೊಂದಿಸಲು ತುಟ್ಟಿ–ಭತ್ಯೆಯ ಸ್ವಯಂಚಾಲಿತ ಹೊಂದಾಣಿಕೆಯ ವ್ಯವಸ್ಥೆಗೆ ವಿರುದ್ಧವಾಗಿ ಸರ್ಕಾರಕ್ಕೆ ಸಲಹೆ ನೀಡಿತು,

ಎರಡನೇ ವೇತನ ಆಯೋಗದ ಪ್ರತಿಗಾಮಿ ಶಿಫಾರಸುಗಳನ್ನು ಕೇಂದ್ರ ಸರ್ಕಾರಿ ನೌಕರರು ಮತ್ತು ದೇಶದ ಬಹುತೇಕ ಇಡೀ ಟ್ರೇಡ್ ಯೂನಿಯನ್ ಆಂದೋಲನವು ಸಾರ್ವತ್ರಿಕವಾಗಿ ನಿರಾಕರಿಸಿತು. ಮೊದಲ ವೇತನ ಆಯೋಗದ ಶಿಫಾರಸುಗಳ ಆಧಾರದ ಮೇಲೆ ತುಟ್ಟಿ–ಭತ್ಯೆ ಪಾವತಿ ಮತ್ತು 15 ನೇ ಐ.ಎಲ್.ಸಿ ಶಿಪಾರಸ್ಸಿನ ಆಧಾರದಲ್ಲಿ ರಾಷ್ಟ್ರೀಯ ಕನಿಷ್ಠ ವೇತನವನ್ನು ಮಂಜೂರು ಮಾಡುವಂತಹ, ಜೊತೆಗೆ IV, III. II ಮತ್ತು I ನೇ ಶ್ರೇಣೀಗಳ ಹಾಗೆಯೇ ಕೌಶಲ್ಯರಹಿತ, ಅರೆ–ನುರಿತ ಮತ್ತು ಹೆಚ್ಚು ನುರಿತ ವರ್ಗಗಳ ನಡುವೆ ತರ್ಕಬದ್ಧ ಮತ್ತು ಸಮನಾದ ಆಧಾರದ ಮೇಲೆ ವೇತನ ವ್ಯತ್ಯಾಸಗಳನ್ನು ನಿರ್ಧರಿಸುವ 6 ಅಂಶಗಳ ಬೇಡಿಕೆಗಳ ಪಟ್ಟಿಯ ಆಧಾರದ ಮೇಲೆ ಸರ್ಕಾರದೊಂದಿಗೆ ಮಾತುಕತೆ ನಡೆಸಲು ಸಮಾವೇಶವು ಪ್ರಯತ್ನಿಸಿತು.

ಆದಾಗ್ಯೂ, ಬೇಡಿಕೆಗಳ ಸಮಾಲೋಚನೆಯ ಇತ್ಯರ್ಥಕ್ಕಾಗಿರುವ ಎಲ್ಲಾ ಬಾಗಿಲುಗಳನ್ನು ಸರ್ಕಾರವು ಮುಚ್ಚಿತು ಮತ್ತು ಜುಲೈ 8, 1960 ರಂದು ಸುಗ್ರೀವಾಜ್ಞೆ,– ಎಸೆನ್ಷಿಯಲ್ ಸರ್ವೀಸಸ್ ಮೆಂಟೆನೆನ್ಸ್ ಆರ್ಡಿನೆನ್ಸ್, 1960 ಘೋಷಣೆಯ ಮೂಲಕ ಮುಷ್ಕರವನ್ನು ಕಾನೂನುಬಾಹಿರವೆಂದು ಘೋಷಿಸಲಾಯಿತು. ಜುಲೈ 11 ರ ಮಧ್ಯರಾತ್ರಿಯಿಂದ ಮುಷ್ಕರ ಪ್ರಾರಂಭವಾಗಬೇಕಿತ್ತು. ಶೂನ್ಯ ಗಂಟೆ ಸಮೀಪಿಸುತ್ತಿದ್ದಂತೆ ಮುಷ್ಕರಕ್ಕಾಗಿ ಅಣಿನೆರೆಯತ್ತಿದ್ದ ಹೆಚ್ಚಿನ ಸಂಖ್ಯೆಯ ನಾಯಕರು ಮತ್ತು ಕಾರ್ಯಕರ್ತರನ್ನು ಬಂಧಿಸಲಾಯಿತು. ಆದರೂ, ಮುಷ್ಕರವು ನಿಗದಿಯಂತೆ ಪ್ರಾರಂಭವಾಯಿತು ಮತ್ತು ಇಡೀ ದೇಶವನ್ನು ಬಹುತೇಕ ಸ್ಥಬ್ದಗೊಳಿಸಿತು. ದೊಡ್ಡ ಪ್ರಮಾಣದ ಬಂಧನಗಳಲ್ಲದೆ, ಮುಷ್ಕರ ಸವಾಲನ್ನು ಎದುರಿಸಲು ಪೊಲೀಸ್, ಹೋಮ್ ಗಾರ್ಡ್ ಮತ್ತು ಪ್ರಾದೇಶಿಕ ಸೈನ್ಯವನ್ನು ಪೂರ್ಣ ಬಲದಿಂದ ಸಜ್ಜುಗೊಳಿಸಲಾಯಿತು. ಸೈನ್ಯವನ್ನು ಸಹ ಸಿದ್ಧತೆಯಲ್ಲಿಡಲಾಗಿತ್ತು. ಹಲವಾರು ಸ್ಥಳಗಳಲ್ಲಿ ಮುಷ್ಕರನಿರತ ನೌಕರರ ಮೇಲೆ ಪೊಲೀಸರು ಲಾಠಿ

ಪುಟ 14 ನೋಡಿ


ಸಿಐಟಿಯು ಸ್ಥಾಪನಾ ರ್‍ಯಾಲಿ, ಮೇ 30, 1970

ಲಸಿಕೆಯ ಬೆಲೆ ನಿರ್ಧಾರ ಮತ್ತು ಹಂಚಿಕೆಯನ್ನು ತಯಾರಕರಿಗೆ ಬಿಡಬೇಡಿ

–ಕೇಂದ್ರ ಸರಕಾರಕ್ಕೆ ಸುಪ್ರಿಂ ಕೋರ್ಟ್‌ನ ಸಲಹೆ ಮತ್ತು ಹಲವು ಪ್ರಶ್ನೆಗಳು

ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಸರಕಾರಕ್ಕೆ ಅದರ ಲಸಿಕೆ ಧೋರಣೆಯ ಬಗ್ಗೆ ಹಲವಾರು ತೀಕ್ಷ್ಣ ಪ್ರಶ್ನೆಗಳನ್ನು ಕೇಳಿದೆ.

ಮಹಾಸೋಂಕಿನ ಗಹನ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರ ಉತ್ಪಾದನೆಯಾಗುತ್ತಿರುವ ಎಲ್ಲ ಲಸಿಕೆ ಡೋಸುಗಳನ್ನು ಖರೀದಿಸುತ್ತಿಲ್ಲವೇಕೆ? ರಾಜ್ಯಗಳಿಗೆ ಸಮಭಾವದಿಂದ ಡೋಸುಗಳ ಹಂಚಿಕೆ ಮಾಡಲು ಸಾಧ್ಯವಿರುವುದು ಕೇಂದ್ರ ಸರಕಾರಕ್ಕೇ ತಾನೇ? ಎಂದು ಮಹಾಸೋಂಕಿಗೆ ಸರಕಾರದ ಸ್ಪಂದನೆಯನ್ನು ಕುರಿತಂತೆ ಸುಪ್ರಿಂ ಕೋರ್ಟ್ ಪ್ರಶ್ನಿಸಿದೆ.

"ಲಸಿಕೆಯ ಬೆಲೆ ನಿರ್ಧಾರ ಮತ್ತು ಹಂಚಿಕೆಯನ್ನು ತಯಾರಕರಿಗೆ ಬಿಡಬೇಡಿ. ನೀವು ಸಾರ್ವಜನಿಕ ಹಿತದೃಷ್ಟಿಯಿಂದ ಜವಾಬ್ದಾರಿ ವಹಿಸಿಕೊಳ್ಳಬೇಕಾಗಿದೆ ಮತ್ತು ನಿಮ್ಮ ಅಧಿಕಾರವನ್ನು ಚಲಾಯಿಸಬೇಕಾಗಿದೆ" ಎಂದು ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಸರಕಾರದ ಪರ ವಾದಿಸುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತರವರಿಗೆ ಹೇಳಿದರು ಎಂದು ವರದಿಯಾಗಿದೆ(ದಿ ಲೀಫ್‌ಲೆಟ್.ಇನ್, ಎಪ್ರಿಲ್ 30)

ನ್ಯಾಯ ಮೂರ್ತಿಗಳಾದ ಡಿ ವೈ ಚಂದ್ರಚೂಡ್, ನ್ಯಾಯ ಮೂರ್ತಿ ರವೀಂದ್ರ ಭಟ್ ಮತ್ತು ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರಿರುವ ಸುಪ್ರಿಂ ಕೋರ್ಟಿನ ಈ ಪೀಠ ನ್ಯಾಯಾಲಯ ತಾನಾಗಿಯೆ ಎತಿಕೊಂಡ ಕೊವಿಡ್ ಸಂದರ್ಭದ ಪ್ರಶ್ನೆಗಳ ಬಗ್ಗೆ ವಿಚಾರಣೆಯ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ಕೇಳಿದೆ ಮತ್ತು ಸೂಚನೆಯನ್ನು ನೀಡಿದೆ.

ಆಸ್ಟ್ರ ಜೆನೆಕ ಅಮೆರಿಕನ್ ನಾಗರಿಕರಿಗೆ ಇಲ್ಲಿಗಿಂತ ಬಹಳ ಕಮ್ಮಿ ಬೆಲೆಯಲ್ಲಿ ಲಸಿಕೆಯನ್ನು ಒದಗಿಸುತ್ತಿದೆ. ಹೀಗಿರುವಾಗ ನಾವೇಕೆ ಹೆಚ್ಚು ತೆರಬೇಕು? ತಯಾರಕರು ನಿಮಗೆ 150 ರೂ. ನಲ್ಲಿ ಕೊಡುತ್ತಾರೆ, ಆದರೆ ರಾಜ್ಯಗಳಿಗೆ 300ರೂ. ಅಥವ 400ರೂ. ನಾವು ಒಂದು ದೇಶವಾಗಿ ಏಕೆ ಇದನ್ನು ತೆರಬೇಕು? ಎಂದು ನ್ಯಾಯಮೂರ್ತಿ ರವೀಂದ್ರ ಭಟ್ ಪ್ರಶ್ನಿಸಿದರು.

ಬೆಲೆ ನಿಗದಿ ಪ್ರಶ್ನೆ ಬಹಳ ಗಂಭೀರವಾದದ್ದು ಎಂದು ನ್ಯಾಯ ಮೂರ್ತಿ ಚಂದ್ರಚೂಡ್ "ಬಹುದೊಡ್ಡ ವಿಭಾಗ ಬಡವರು ಮತ್ತು ಅಂಚಿಗೊತ್ತಲ್ಪಟ್ಟವರು, ನಾವು ಒಂದು ಖಾಸಗೀ ವಲಯ ನಮೂನೆಯನ್ನು ಹೊಂದಲು ಸಾಧ್ಯವಿಲ್ಲ. ನಾವು ರಾಷ್ಟ್ರೀಯ ರೋಗ ನಿರೋಧ ಅಭಿಯಾನ ಮಾದರಿಯನ್ನು ಅನುಸರಿಸಬೇಕು" ಎಂದರು.

ಪ್ರಸಕ್ತ ಲಸಿಕೆ ಬೆಲೆಗಳು ಕೇಂದ್ರ ಸರಕಾರ ಉತ್ಪಾದನೆಗೆ, ಮೂಲರಚನೆಗೆ ಮತ್ತು ಇತರ ಸಹಾಯಗಳಿಗೆ ಕೊಟ್ಟಿರುವ ನಿಧಿಗಳನ್ನು ಲೆಕ್ಕಕ್ಕೆ ತಗೊಂಡಿದೆಯೇ? ಸರಕಾರ ಲಸಿಕೆಗಳ ಸಂಶೋಧನೆ, ಅಭಿವೃದ್ಧಿ ಮತ್ತು ತಯಾರಿಕೆಗೆ ಕೊಟ್ಟಿರುವ ನೇರ ಮತ್ತು ಪರೋಕ್ಷ ಅನುದಾನ/ನೆರವಿನ ಪೂರ್ಣ ವಿವರವನ್ನು ಸೂಚಿಸಲು ಕೇಂದ್ರ ಸರಕಾರಕ್ಕೆ ಸಾಧ್ಯವೇ ಎಂದೂ ಸುಪ್ರಿಂ ಕೋರ್ಟ್ ಪೀಠ ಕೇಳಿತು

ಪೇಟೆಂಟ್ ಕಾಯ್ದೆಯ ಸೆಕ್ಷನ್ 92 ಮತ್ತು 100ರ ಅಡಿಯಲ್ಲಿನ ಅಧಿಕಾರಗಳನ್ನು ಏಕೆ ಬಳಸಿಕೊಳ್ಳಬಾರದು?

ಪೇಟೆಂಟ್ ಕಾಯ್ದೆಯ ವಿಭಾಗ 100ರ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯ ಸರಕಾರೀ ಉದ್ದೇಶಗಳಿಗೆ ಪೇಟೆಂಟ್‌ಗಳನ್ನು ಬಳಸಿಕೊಳ್ಳಲು ಕೇಂದ್ರ ಸರಕಾರಕ್ಕೆ ಅಧಿಕಾರ ನೀಡಬಾರದೇಕೆ ಅಥವ ಪೇಟೆಂಟ್ಸ್ ಕಾಯ್ದೆಯ ವಿಭಾಗ 92 ರ ಅಡಿಯಲ್ಲಿ ರೆಮ್ಡೆಸಿವಿರ್, ಫೆಸಿಪುರವಿರ ಮತ್ತು ಟೊಸಿಲಿಝುಮಬ್ ನಂತಹ ಔಷಧಿಗಳನ್ನು ಕಡ್ಡಾಯ ಪರವಾನಿಗೆಗೆ ಅಧಿಸೂಚಿಸಬಾರದೇಕೆ, ವಿಶೇಷವಾಗಿ, ಇಂತಹ ನಿರ್ದೇಶನ ಜೆನೆರಿಕ್ ಔಷಧಿಗಳ ತಯಾರಕರು ಕಾನೂನಿನ ಕ್ರಮದ ಭಯವಿಲ್ಲದೆ ಇವನ್ನು ತಯಾರಿಸಲು ಅನುವು ಮಾಡಿಕೊಡುವಾಗ?– ಇದು ನ್ಯಾಯಮೂರ್ತಿ ಚಂದ್ರಚೂಡ್ ಮುಂದುವರೆದು ಕೇಂದ್ರ ಸರಕಾರಕ್ಕೆ ಕೇಳಿದ ಪ್ರಶ್ನೆ.

ರಾಜ್ಯಗಳಿಗೆ ಲಸಿಕೆಗಳ ಪೂರೈಕೆಯ ಬಗ್ಗೆ ನ್ಯಾಯಪೀಠ ಹಲವು ಪ್ರಶ್ನೆಗಳನ್ನು ಕೇಂದ್ರ ಸರಕಾರಕ್ಕೆ ಕೇಳಿತು.

* ಕೇಂದ್ರದಿಂದ ಖರೀದಿಸುವ 50% ಡೋಸುಗಳನ್ನು ರಾಜ್ಯಕ್ಕೆ ವಿತರಿಸುವುದುನ್ನು ಯಾವಾಗ ತಿಳಿಸುತ್ತೀರಿ, ಮತ್ತು ಕೇಂದ್ರ ಸರಕಾರ ಖರೀದಿಗೆ, ಮತ್ತು ರಾಜ್ಯಸರಕಾರಗಳ ಖರೀದಿಗೆ ಭಿನ್ನ ಬೆಲೆನಿಗದಿಗೆ ತರ್ಕಾಧಾರವೇನು ?
* ಪ್ರಸ್ತುತ ಮತ್ತು ಮುಂದಿನ ಆರು ತಿಂಗಳುಗಳಲ್ಲಿ ಲಸಿಕೆ ದಾಸ್ತಾನುಗಳ ಲಭ್ಯತೆಯನ್ನು ಮತ್ತು ಲಸಿಕೀಕರಣದ ಯೋಜನೆಗಳನ್ನು ಸೂಚಿಸಲು ಕೇಂದ್ರ ಮತ್ತು ರಾಜ್ಯಕ್ಕೆ ಸಾಧ್ಯವೇ, ಬೇರೆ ಬೇರೆ ರಾಜ್ಯಗಳಲ್ಲಿ ಲಸಿಕೆ ಅಡಳಿತದಲ್ಲಿ ಗೊಂದಲವನ್ನು ತಪ್ಪಿಸಲು ಕೊವಿನ್ ವೆಬ್‌ತಾಣದ ಮೂಲಕ ಸತತ ಪಾರದರ್ಶಕತೆ ಪ್ರಯತ್ನವನ್ನು ಮಾಡಬಹುದೇ?
* ಸದ್ಯ ಇರುವ ಎರಡು ಲಸಿಕಾ ತಯಾರಕರು, ಸೀರಂ ಇನ್ಸ್‌ಟಿಟ್ಯುಟ್ ಮತ್ತು ಭಾರತ್ ಬಯೊಟೆಕ್ ರಾಜ್ಯಗಳಿಗೆ ಲಸಿಕೆಗಳನ್ನು ಹಂಚುವಾಗ ಸಮಭಾವವನ್ನು ಪ್ರದರ್ಶಿಸಬೇಕೇ? ಅಥವ ಒಂದು ರಾಜ್ಯ ಲಸಿಕೆ ಪಡೆಯುವಲ್ಲಿ ಆದ್ಯತೆಯನ್ನು ಪಡೆಯುತ್ತದೆ, ಅದರಿಂದಾಗಿ ಬಹುಪಾಲು ಲಸಿಕೆಗಳನ್ನು ಪಡೆಯುತ್ತದೆ. ಉಳಿದ ರಾಜ್ಯಗಳು ಕಾಯಬೇಕು ಎಂಬ ಪರಿಸ್ಥಿತಿ ಉಂಟಾಗುತ್ತದೆಯೇ? ಲಸಿಕೆ ವಿತರಣೆಗೆ ಜನಸಂಖ್ಯೆ, ಸೋಂಕು ದರ, ಮತ್ತು ಪರಿಣಾಮಕಾರಿ ಲಸಿಕೆ ನಿರ್ವಹಣೆಯ ಆಧಾರದಲ್ಲಿ ತನ್ನ ವಿತರಣಾ ಆಧಾರವನ್ನು ಖಾತ್ರಿಗೊಳಿಸಲು ಮತ್ತು ಇದರ ಮೇಲೆ ನಿಗಾ ಇಡಲು ಕೇಂದ್ರಕ್ಕೆ ಸಾಧ್ಯವೇ?

ಸುಪ್ರಿಂ ಕೋರ್ಟ್ ಪೀಠ ಲಸಿಕೆಗಳ ಕೊರತೆಯ ಪ್ರಶ್ನೆಯನ್ನೂ, ಅದರಲ್ಲೂ 45 ವರ್ಷಕ್ಕಿಂತ ಮೇಲಿನವರರಿಗೂ ಸಿಗದಿರುವ ವಿಷಯವನ್ನು ಎತ್ತಿಕೊಂಡಿತು.

ಸರಕಾರ ಯಾವಾಗ ಲಸಿಕೆ ಲಭ್ಯತೆಯ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದಿದೆ, ನಾಗರಿಕರು ನೇರವಾಗಿ ಹೋಗಿ ಲಸಿಕೆ ಪಡೆಯಬಹುದೇ ಎಂದು ಪೀಠ ಕೇಳಿತು.

18–44 ವಯೋಗುಂಪಿನ ರಾಜ್ಯವಾರು ಪ್ರಮಾಣಕ್ಕೆ ಅನುಸಾರವಾಗಿ ಲಸಿಕೆ ವಿತರಣೆಯ ವಿವರಗಳ ಬಗ್ಗೆ ಕೇಂದ್ರ ಸರಕಾರ ಅಫಿಡವಿಟ್ ಸಲ್ಲಿಸಲು ಸಾಧ್ಯವೇ ಎಂದೂ ಪೀಠ ಪ್ರಶ್ನಿಸಿತು.

ಅನಕ್ಷರಸ್ಥರು ಮತ್ತು ಇಂಟರ್ನೆಟ್ ಸೌಲಭ್ಯ ಇಲ್ಲದವರು ಲಸಿಕೆಗೆ ಆನ್‌ಲೈನ್ ರಿಜಿಸ್ಟ್ರೇಷನ್ ಮಾಡಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಏನು ಮಾಡಬೇಕೆಂದಿವೆ ಎಂಬುದು ಸುಪ್ರಿಂ ಕೋರ್ಟ್ ಪೀಠ ಕೇಳಿದ ಮತ್ತೊಂದು ಪ್ರಶ್ನೆ.

ಲಸಿಕೆಯ ಮೊದಲ ಘಟ್ಟದಲ್ಲಿ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆಯ ಸಂದರ್ಭದಲ್ಲಿ ಬಿಟ್ಟು ಹೋದ ಸ್ಮಶಾನ ಕೆಲಸಗಾರರು ಮತ್ತು ಇತರ ಸಂಯೋಜಕ ಗುಂಪುಗಳಿಗೆ ಲಸಿಕೆ ಹಾಕುವ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರಯತ್ನಿಸಿವೆಯೇ ಎಂದೂ ಸುಪ್ರಿಂ ಕೋರ್ಟ್ ಕೇಳಿತು.

ಈ ವಿಷಯಗಳ ಕುರಿತು ಮುಂದಿನ ವಿಚಾರಣೆಯನ್ನು ಮೇ 10ಕ್ಕೆ ಇಟ್ಟುಕೊಂಡಿರುವ ಸುಪ್ರಿಂ ಕೋರ್ಟ್ ಪೀಠ, ಆ ಹೊತ್ತಿಗೆ ಕೇಂದ್ರ ಸರಕಾರ ಈ ಎಲ್ಲ ವಿಷಯಗಳನ್ನು ಗಮನಕ್ಕೆ ತಗೊಂಡು ತನ್ನ ಧೋರಣೆಯ ಬಗ್ಗೆ ಪುನರಾಲೋಚನೆ ಮಾಡಬಹುದು ಎಂದೂ ಸೂಚಿಸಿತು.

ಎಪ್ರಿಲ್ 22 ರಂದು ಈಗ ನಿವೃತ್ತರಾಗಿರುವ ಮುಖ್ಯ ನ್ಯಾಯಮೂರ್ತಿ ಎಸ್ ಎ ಬೊಬ್ಡೆಯವರ ನೇತೃತ್ವದ ಪೀಠ ಆಕ್ಸಿಜನ್ ಪೂರೈಕೆ, ಅಗತ್ಯ ಔಷಧಿಗಳ ಲಭ್ಯತೆ, ಲಸಿಕೆ ಹಾಕಿಸುವ ವಿಧಾನ ಮುಂತಾದ ಪ್ರಶ್ನೆಗಳನ್ನು ತಾನಾಗಿಯೇ ಎತ್ತಿಕೊಂಡು ಕೇಂದ್ರ ಸರಕಾರಕ್ಕೆ ಈ ಕುರಿತು ನೋಟೀಸು ಕೊಟ್ಟಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇದಕ್ಕೆ ಮೊದಲು ದಿಲ್ಲಿ, ಮುಂಬೈ, ಅಲಹಾಬಾದ್ ಸೇರಿದಂತೆ ಆರು ಹೈಕೋರ್ಟ್‌ಗಳು ಆಯಾಯ ರಾಜ್ಯಗಳಲ್ಲಿ ಕೊವಿಡ್ ಎರಡನೇ ಅಲೆಯನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, "ಇದು ಗೊಂದಲವನ್ನು ಸೃಷ್ಟಿಸುತ್ತಿದ್ದು, ಸಂಪನ್ಮೂಲಗಳನ್ನು ಬೇರೆಡೆಗೆ ತಿರುಗಿಸುವುದರಿಂದ" ಇದನ್ನು ತಾನೇ ಎತ್ತಿಕೊಳ್ಳುವದಾಗಿ ಸುಪ್ರಿಂ ಕೋರ್ಟ್ ಹೇಳಿತು. ಆದರೆ ಇದು ವಾಸ್ತವವಾಗಿ ಬಿಜೆಪಿ ರಾಜ್ಯ ಸರಕಾರಗಳ ಬಗ್ಗೆ ಟೀಕೆಗಳಾಗುವುದನ್ನು ತಪ್ಪಿಸುವ ಒಂದು ಪರೋಕ್ಷ ಪ್ರಯತ್ನ ಎಂದು ದೇಶದ ಹಲವು ನ್ಯಾಯವಿದರು ಟೀಕೆ–ಟಿಪ್ಪಣಿ ಮಾಡಿದರು. ಇದರಿಂದಾಗಿ ನ್ಯಾಯಮೂರ್ತಿ ಬೊಬ್ಡೆಯವರು ಈ ಕೇಸಿನಲ್ಲಿ ನ್ಯಾಯಾಲಯಕ್ಕೆ ಸಲಹೆಗಾರರಾಗಿ (ಎಮಿಕಸ್ ಕ್ಯುರಿಯ) ನೇಮಿಸಿದ ಹರೀಶ್ ಸಾಳ್ವೆಯವರು ತಾನು ಈ ಕೆಲಸವನ್ನು ಮಾಡಲಾರೆ ಎಂದರು.

ನ್ಯಾಯಮೂರ್ತಿ ಬೊಬ್ಡೆಯವರ ನಿವೃತ್ತಿಯ ನಂತರ ಪೀಠದ ನೇತೃತ್ವವನ್ನು ನ್ಯಾಯಮೂರ್ತಿ ಚಂದ್ರಚೂಡ್ ವಹಿಸಿದ್ದಾರೆ. ಈ ಹೊಸ ಪೀಠ ಈ ಪ್ರಶ್ನೆಗಳನ್ನು ಎತ್ತಿಕೊಂಡಿರುವುದು ವಿವಿಧ ಹೈಕೋರ್ಟುಗಳಲ್ಲಿ ನಡೆಯುತ್ತಿರುವ ನ್ಯಾಯಾಂಗ ಪ್ರಕ್ರಿಯೆಯನ್ನು ಬದಿಗೊತ್ತಲು ಅಲ್ಲ ಎಂದು ಎಪ್ರಿಲ್ 27 ರಂದು ಸ್ಪಷ್ಟೀಕರಣ ನೀಡಿತು. ಹಾಗೂ ಹರೀಶ ಸಾಳ್ವೆಯವರ ಬದಲಿಗೆ ಹಿರಿಯ ಸುಪ್ರಿಂ ಕೋರ್ಟ್ ವಕೀಲರಾದ ಜಯದೀಪ್ ಗುಪ್ತ ಮತ್ತು ಮೀನಾಕಶಿ ಅರೋರಾ ಅವರುಗಳನ್ನು ನ್ಯಾಯಾಲಯದ ಸಲಹೆಗಾರರಾಗಿ ನೇಮಿಸಲಾಗಿದೆ.

ಸತ್ಯಾಗ್ರಹದ ಸೋಲು–ಗೆಲುವು.........

ಪುಟ 9 ರಿಂದ



ಕೂಡಾ ಈ ಚಳುವಳಿಯನ್ನು ಒಯ್ಯುವುದು ಸೋಷಲಿಸ್ಟರಿಗೆ ಸಾಧ್ಯ ವಾಗಲಿಲ್ಲ. ಕಾಗೋಡಿನ ಸತ್ಯಾಗ್ರಹವನ್ನು ಉಳಿದೆಡೆಗಳಿಗೂ ಹಬ್ಬಿಸಬೇಕಾದದ್ದು ಅಲ್ಲಿನ ಗೇಣಿ ಒಕ್ಕಲುಗಳ ವಿಮೋಚನೆಯ ದೃಷ್ಟಿಯಿಂದ ಮಾತ್ರ ಅಗತ್ಯವಾಗಿರಲಿಲ್ಲ; ಕಾಗೋಡಿನಲ್ಲಿ ಒಕ್ಕಲುಗಳು ಗೆಲ್ಲುವುದಕ್ಕೂ ಅದು ಅಗತ್ಯವಾಗಿತ್ತು. ಎಲ್ಲೆಡೆ ಸತ್ಯಾಗ್ರಹ ಹಬ್ಬಿದ್ದರೆ, ಸ್ಪಷ್ಟವಾಗಿ ಭೂಮಾಲಕರ ಪಕ್ಷ ವಹಿಸುವುದಾಗಲೀ, ಸತ್ಯಾಗ್ರಹವನ್ನು ದಮನಿಸುವುದಾಗಲೀ ಸರಕಾರಕ್ಕೂ ಕಷ್ಟವಾಗುತ್ತಿತ್ತು. ಕಾಗೋಡಿನಲ್ಲಿ ಒಕ್ಕಲುಗಳ ಭೂಮಿ ಬಿಡಿಸುವುದರಲ್ಲಿ ಭೂಮಾಲಕರು ಸಫಲರಾದರೆ ಕರ್ನಾಟಕದ ಉಳಿದ ಭೂಮಾಲಕರು ಅದೇ ಹಾದಿ ತುಳಿಯುತ್ತಾರೆ ಎಂದು ಗೋಪಾಲ ಗೌಡರು ಸರಿಯಾಗಿಯೇ ಗ್ರಹಿಸಿದ್ದರು. ಸ್ವತಃ ಗೌಡರೇ ಕಾಗೋಡು ರೈತರ ಸತ್ಯಾಗ್ರಹಕ್ಕೆ ಉಳಿದ ಕಡೆಗಳ ಜನರ ಬೆಂಬಲ ಗಳಿಸಲು ತಾಲ್ಲೂಕಿನಾದ್ಯಂತ ತಲೆ ಮರೆಸಿಕೊಂಡು ಓಡಾಡಿದ್ದರು. ಆದರೆ ಅವರು ಹೀಗೆ ಒಟ್ಟು ಮಾಡಿದ ಜನಬೆಂಬಲವೇನಿದ್ದರೂ, ಕೆಲವು ಹಳ್ಳಿಗಳ ಒಕ್ಕಲುಗಳು ಒಂದು ದಿನದ ಮಟ್ಟಿಗೆ ಕಾಗೋಡಿಗೆ ಬಂದು ಸಾಂಕೇತಿಕ ಸತ್ಯಾಗ್ರಹ ಮಾಡುವುದರಲ್ಲಿ ಕೊನೆಗೊಂಡಿತ್ತು. ತಮ್ಮ ಹಳ್ಳಿಗಳಲ್ಲಿ ತಮ್ಮ ಭೂಮಾಲಕರ ವಿರುದ್ಧ ನಿಲ್ಲಲು ಈ ಒಕ್ಕಲುಗಳಿಗೆ ಕಾಗೋಡು ಸತ್ಯಾಗ್ರಹದಿಂದ ಯಾವ ಪ್ರಚೋದನೆಯೂ ಸಿಗಲಿಲ್ಲ.

ಇದಕ್ಕೆ ಸತ್ಯಾಗ್ರಹ ಮೊದಲಿನಿಂದ ಕೊನೆಯವರೆಗೆ ಇಟ್ಟುಕೊಂಡಿದ್ದ ಸೀಮಿತ ಉದ್ದೇಶವೂ ಕಾರಣವಾಗಿತ್ತು. ಸತ್ಯಾಗ್ರಹ ಪ್ರಾರಂಭವಾದದ್ದು ಕೊಳಗದ ತಕರಾರಿನಿಂದ. ಕಾಗೋಡು ಗೌಡರು ಹತಮಾರಿಗಳಾಗಿ ಒಕ್ಕಲುಗಳ ಭೂಮಿ ಕಿತ್ತುಕೊಂಡಾಗ ತಕರಾರು ಸತ್ಯಾಗ್ರಹದ ರೂಪ ಪಡೆದುಕೊಂಡಿತು. ಆದರೆ ಸತ್ಯಾಗ್ರಹಕ್ಕೆ ಸೋಷಲಿಸ್ಟರ ಪ್ರವೇಶವಾದ ಮೇಲೂ ಈ ಬೇಡಿಕೆಗಳಲ್ಲಿ ಆಗಲೀ, ಸತ್ಯಾಗ್ರಹದ ಸ್ವರೂಪದಲ್ಲಿ ಆಗಲಿ ಬದಲಾವಣೆಗಳೇ ಆಗಲಿಲ್ಲ ಎಂಬುದನ್ನು ನಾವು ಮತ್ತೆ ಗಮನಿಸಬೇಕು. ಕೊಳಗದ ವ್ಯಾಜ್ಯ, ಗೌಡರು ಭೂಮಿ ಕಿತ್ತುಕೊಂಡದ್ದು ಇವುಗಳ ಮೂಲದಲ್ಲಿದ್ದ ದನಿ–ಒಕ್ಕಲು ಸಂಬಂಧದ ಮೂಲಭೂತ ವೈಷಮ್ಯಗಳತ್ತ ಸೋಷಲಿಸ್ಟರು ಜನತೆಯ ಗಮನ ಸೆಳೆಯಲಿಲ್ಲ; ಕಾಗೋಡು ಒಕ್ಕಲುಗಳಿಗೂ ಅವರು ಈ ಬಗ್ಗೆ ತಿಳಿಯ ಹೇಳಿದ ಹಾಗಿಲ್ಲ. ಸತ್ಯಾಗ್ರಹದ ಸಂದರ್ಭದಲ್ಲಿ ಸೋಷಲಿಸ್ಟರು ತಮ್ಮ ಸಿದ್ಧಾಂತಗಳನ್ನು ಮರೆತರು;

ಮತ್ತು ಕೇವಲ ಆ ಕ್ಷಣದ ಅಗತ್ಯಗಳತ್ತ ಮಾತ್ರ ಕಣ್ಣು ನೆಟ್ಟರು, ಮೂರೂವರೆ ಸೇರಿನ ಕೊಳಗ ಕಾಗೋಡು ಮತ್ತು ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಮಾತ್ರ ಪ್ರಚಲಿತವಿದ್ದಿತು. ಆ ಪ್ರಶ್ನೆ ಪ್ರಾಂತ್ಯದ ಎಲ್ಲ ಒಕ್ಕಲುಗಳಿಗೂ ಒಂದು ಮಹತ್ವದ ಪ್ರಶ್ನೆಯಾಗುವುದು ಸಾಧ್ಯವೇ ಇರಲಿಲ್ಲ ; ಸಾಗರ ತಾಲ್ಲೂಕಿನಲ್ಲಿ ಕೂಡಾ ಇದು ಎಲ್ಲ ಹಳ್ಳಿಗಳ ಒಕ್ಕಲು ಗಳಿಗೂ ಸಂಬಂಧಿಸಿದ ಪ್ರಶ್ನೆ ಆಗಿರಲಿಲ್ಲ. ಆದರೆ ಈ ಪ್ರಶ್ನೆಯ ಹಿಂದಿದ್ದ ವೈರುಧ್ಯ ಪ್ರಾಂತ್ಯದ್ದೇ ಏಕೆ, ಇಡಿ ದೇಶದ ಹಳ್ಳಿಗಳ ಸಮಸ್ಯೆಯಾಗಿತ್ತು. ಆದರೆ ತಕ್ಷಣದ ಬೇಡಿಕೆಗಳನ್ನು ಸಾರ್ವತ್ರಿಕಗೊಳಿಸುವ ರಾಜಕೀಯ ಕೌಶಲ –ವಾಮಪಂಥೀಯ ಪಕ್ಷಗಳಿಗೆ ಅಗತ್ಯ ಇರಲೇಬೇಕಾದ ಕೌಶಲ – ಪ್ರಾಂತ್ಯದ ಸೋಷಲಿಸ್ಟರಿಗೆ ಸಾಧಿಸಲೇ ಇಲ್ಲ.

ಸತ್ಯಾಗ್ರಹದ ಆವೇಶದಲ್ಲಿ ಸೋಷಲಿಸ್ಟ್ ಕಾರ್ಯಕರ್ತರು "ಉಳುವವನೇ * ನೆಲದೊಡೆಯ" ಎಂಬ ಘೋಷಣೆಯನ್ನು ಕಾಗೋಡಿನ ನೆಲದಲ್ಲಿ ನಿಂತು ಕೂಗಿದರು.ಆದರೆ ಸತ್ಯಾಗ್ರಹದ ಬೇಡಿಕೆಗಳ ಹಿನ್ನೆಲೆಯಲ್ಲಿ ಈ ಘೋಷಣೆಗೆ ಅರ್ಥವೇ ಇರಲಿಲ್ಲ. . ಸ್ವತಃ ಲೋಹಿಯಾ ಅವರೇ, ಅವರು ಒಂದು ದಿನದ ಮಟ್ಟಿಗೆ ಮಾತ್ರ ಕಾಗೋಡಿನಲ್ಲಿ ಇದ್ದರೂ, ಇದನ್ನು ಗ್ರಹಿಸಿದ್ದರು. ಕಾಗೋಡು ಪ್ರಕರಣದಲ್ಲಿ ಭೂಮಿಯ ಒಡೆತನದ ಪ್ರಶ್ನೆ ಅಡಕವಾಗಿಲ್ಲವೆಂದೂ ಅದು ಸ್ವಾಧೀನದ ಪ್ರಶ್ನೆ ಮಾತ್ರವೆಂದೂ ಅವರು ತಿಳಿಸಿದ್ದರು. ಅದಕ್ಕೆ ಅವರು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 79 ನೆಯ ವಿಧಿಯನ್ನು ಉದಾಹರಿಸಿದ್ದರು... ವಿವಾದ ಆರಂಭವಾದಾಗ ರೈತರ ಮತ್ತು ಭೂಮಾಲಕರ ಮಧ್ಯೆ ಸರಕಾರ ತಟಸ್ಥವಾಗಿದ್ದಿದ್ದರೆ ಪ್ರಶ್ನೆ ಸಿವಿಲ್ ದಾವಾದ ಮೂಲಕ ಇತ್ಯರ್ಥಗೊಳ್ಳುತ್ತಿತ್ತೆಂದೂ ಕೂಡಾ ಅವರು ತಿಳಿಸಿದ್ದರು. (ಪ್ರಜಾವಾಣಿ 24–6–51) ಸಿವಿಲ್ ದಾವಾದ ಮೂಲಕ ಫೈಸಲ್ ಆಗಬಹುದಾಗಿದ್ದ ಒಂದು ವಿವಾದಕ್ಕೆ ಸತ್ಯಾಗ್ರಹದ ಅವಶ್ಯಕತೆ ಇರಲಿಲ್ಲ. ಸತ್ಯಾಗ್ರಹಿಗಳ ಘೋಷಣೆಗೂ ಅವರ ಉದ್ದೇಶಕ್ಕೂ ಸಂಬಂಧವಿರಲೇ ಇಲ್ಲ. ಕಾಗೋಡು ಒಕ್ಕಲುಗಳು ತಾವು ಉಳುವ ಜಮೀನಿನ ಒಡೆಯರಾಗಬೇಕು ಎಂಬುದು ಎಂದೂ ಸತ್ಯಾಗ್ರಹದ ಉದ್ದೇಶವಾಗಿರಲಿಲ್ಲ.


.. .. ..

ಸತ್ಯಾಗ್ರಹದಲ್ಲಿ ಭಾಗವಹಿಸಿದ ಸೋಷಲಿಸ್ಟರು, ಕರ್ನಾಟಕದ ಭೂಸುಧಾರಣೆಗಳಿಗೆ ಕಾಗೋಡು ಸತ್ಯಾಗ್ರಹವೇ ಕಾರಣವಾಯಿತು ಎನ್ನುತ್ತಾರೆ. ಈ ಅಭಿಪ್ರಾಯ ವ್ಯಾಪಕವಾಗಿ ಚಲಾವಣೆಯಲ್ಲಿದೆ. ಆದರೆ ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ಭೂಸುಧಾರಣೆಯ ಇತಿಹಾಸ ಸೋಷಲಿಸ್ಟರ್ರ ಈ ಹೆಗ್ಗಳಿಕೆಯನ್ನು ಸಮರ್ಥಿಸುವುದಿಲ್ಲ.

.. .. ..

ಕಾಗೋಡು ಸತ್ಯಾಗ್ರಹ ರಾಜ್ಯದಲ್ಲಿ ಭೂಸುಧಾರಣಾ ಶಾಸನಗಳಿಗೆಭೂಮಿಕೆ ಸೃಟಿಸಿತು ಎಂದು ಸೋಷಲಿಸ್ಟರು ಹೆಮ್ಮೆಪಟ್ಟುಕೊಳ್ಳುವುದು, ವಾಸ್ತವದ ವಿವರಗಳನ್ನು ಮರೆತು ಘೋಷಣೆಯ ಮಾತುಗಳಿಗೆ ಮರುಳಾಗುವ ಅವರ ಭೋಳೆತನವಷ್ಟೇ ಆಗಿದೆ. ■

ಕನಿಷ್ಠ ಜಾಗತಿಕ ಕಾರ್ಪೊರೇಟ್ ತೆರಿಗೆ–ಪ್ರಯತ್ನಯೋಗ್ಯ ಪ್ರಸ್ತಾಪ



ಹಣಕಾಸು ಬಂಡವಾಳದ ಆಟವನ್ನೇ ಬದಲಾಯಿಸಬಲ್ಲ, ಆದರೆ ದೀರ್ಘಕಾಲದಿಂದಲೂ ನೆನೆಗುದಿಗೆ ಬಿದ್ದಿದ್ದ ಈ ಪ್ರಸ್ತಾಪವನ್ನು ಈಗ ಕೋರೊನಾ ಸಾಂಕ್ರಾಮಿಕದ ಪರಿಣಾಮಗಳಿಂದಾಗಿ ಶ್ರೀಮಂತ ದೇಶಗಳು ಗಮನಿಸಲೇ ಬೇಕಾಗಿ ಬಂದಿದೆ. ಇದು ಅಮೆರಿಕಾದ ಆಡಳಿತದಿಂದಲೇ ಬಂದಿರುವುದು ಗಮನಾರ್ಹ. ಏಕೆಂದರೆ ಜಾಗತಿಕ ಸಮನ್ವಯವಿಲ್ಲದೆ, ಕಾರ್ಪೊರೇಟ್ ತೆರಿಗೆ ದರಗಳನ್ನು ಏರಿಸುವುದು ಸಾಧ್ಯವಿಲ್ಲ. ಈ ಸಮನ್ವಯವನ್ನು ಸಾಧಿಸುವಲ್ಲಿ ಅಮೇರಿಕಾ ನಿರ್ಣಾಯಕವಾಗುತ್ತದೆ. ಅಮೇರಿಕಾದ ಸಹಕಾರ ಮತ್ತು ಒಪ್ಪಿಗೆ ಇಲ್ಲದೆ, ಇತರ ದೇಶಗಳು ತೆರಿಗೆ ದರಗಳನ್ನು ಹೆಚ್ಚಿಸುವುದು ಸಾಧ್ಯವಿಲ್ಲವಲ್ಲ!

ಪ್ರೊ. ಅರುಣ್ ಕುಮಾರ್ ಅನು: ಕೆ.ಎಂ.ನಾಗರಾಜ್
(ಮೂಲ ಲೇಖನ: 'ದಿ ಹಿಂದು' , ಎಪ್ರಿಲ್27)

ಕಾರ್ಪೊರೇಟ್ ತೆರಿಗೆಗಳಿಗೆ ಒಂದು ಕನಿಷ್ಠ ಜಾಗತಿಕ ದರವನ್ನು ನಿಗದಿಪಡಿಸಬೇಕೆಂದು ಅಮೇರಿಕಾದ ಖಜಾನೆ ಕಾರ್ಯದರ್ಶಿ (ಹಣಕಾಸು ಸಚಿವೆ) ಜಾನೆಟ್ ಯೆಲೆನ್ ಬಯಸುತ್ತಾರೆ. ಈ ಬಗ್ಗೆ ಜಾಗತಿಕ ಮಟ್ಟದಲ್ಲಿ ಒಂದು ಹೊಂದಾಣಿಕೆ ಇರಬೇಕು ಎನ್ನುತ್ತಾರೆ. ಅವರು ಪ್ರಸ್ತಾಪಿಸಿರುವ ಕಾರ್ಪೊರೇಟ್ ತೆರಿಗೆಗಳ ಜಾಗತಿಕ ಕನಿಷ್ಠ ದರವು ದೂರಗಾಮೀ ಪರಿಣಾಮಗಳಿಂದ ಕೂಡಿದೆ. ವಿಶ್ವದ ಪ್ರಮುಖ ದೇಶಗಳು ಅವರ ಈ ಕೋರಿಕೆಯನ್ನು ಒಪ್ಪಿಕೊಂಡರೆ ಮತ್ತು ಅಮೇರಿಕಾದ ಕಾಂಗ್ರೆಸ್(ಸಂಸತ್ತು) ಅವರ ಈ ಪ್ರಸ್ತಾಪವನ್ನು ಅನುಮೋದಿಸಿದರೆ, 30 ವರ್ಷಗಳ ಹಿಂದೆ ಸೋವಿಯತ್ ಬಣ ಕುಸಿತದ ನಂತರದ ತೆರಿಗೆ ನೀತಿಗಳ ಪ್ರವೃತ್ತಿಯನ್ನು ಹಿಮ್ಮೆಟ್ಟಿಸಿದಂತಾಗುತ್ತದೆ. ಒ.ಇ.ಸಿ.ಡಿ.ದೇಶಗಳ ಮತ್ತು ಅಮೇರಿಕಾದ ಕಾಂಗ್ರೆಸ್‌ನ ಮನವೊಲಿಸುವಲ್ಲಿ ಶ್ರೀಮತಿ ಯೆಲೆನ್ ಯಶಸ್ವಿಯಾಗುತ್ತಾರಾ? ಜಾಗತಿಕ ಬಂಡವಾಳದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ವಿಶ್ವ ಬ್ಯಾಂಕ್‌ನ ಅಧ್ಯಕ್ಷ ಡೇವಿಡ್ ಆರ್. ಮಾಲ್ಪಾಸ್, ಈ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಬಡ ದೇಶಗಳ ಹೆಗಲಮೇಲೆ ತಮ್ಮ ಬಂದೂಕನ್ನು ಇಟ್ಟು ಅವರು ಗುಂಡು ಹಾರಿಸುತ್ತಾರೆ: "... ಇದು ಹೂಡಿಕೆಯನ್ನು ಆಕರ್ಷಿಸುವ ಬಡ ರಾಷ್ಟ್ರಗಳ ಸಾಮರ್ಥ್ಯವನ್ನು ಕುಂದಿಸುತ್ತದೆ".

ದೀರ್ಘಕಾಲದಿಂದಲೂ ನೆನೆಗುದಿಗೆ ಬಿದ್ದಿದ್ದ ಈ ಪ್ರಸ್ತಾಪವನ್ನು ಈಗ ಕೋರೊನಾ ಸಾಂಕ್ರಾಮಿಕದ ಪರಿಣಾಮಗಳಿಂದಾಗಿ ಶ್ರೀಮಂತ ದೇಶಗಳು ಗಮನಿಸಲೇ ಬೇಕಾಗಿ ಬಂದಿದೆ. ಪ್ರಸಕ್ತ ಸನ್ನಿವೇಶದಲ್ಲಿ, ಜನರಿಗೆ ತಮ್ಮ ದಿನ ನಿತ್ಯದ ಜೀವನ ನಿರ್ವಹಣೆಗೆ ಬೇಕಾಗುವ ಒಂದಿಷ್ಟು ಹಣದ ನೇರ ವರ್ಗಾವಣೆ, ಅವರಿಗೆ ಅವಶ್ಯವಿರುವ ಸಾರ್ವಜನಿಕ ಸೇವೆಗಳ ಒದಗಣೆ ಮತ್ತು ವ್ಯಾಪಾರ–ವಹಿವಾಟುಗಳ ವೈಫಲ್ಯಗಳನ್ನು ತಡೆಯುವ ಸಲುವಾಗಿ ಸಹಾಯ ಒದಗಿಸಲು ಸರ್ಕಾರಗಳಿಗೆ ಹಣಕಾಸು ಸಂಪನ್ಮೂಲಗಳ ಅಗತ್ಯವಿದೆ. ಆದರೆ, ಆರ್ಥಿಕ ಕುಸಿತದಿಂದಾಗಿ ಸರ್ಕಾರಗಳ ತೆರಿಗೆ ಸಂಗ್ರಹಗಳು ಇಳಿದಿವೆ. ಪರಿಣಾಮವಾಗಿ, ಸರ್ಕಾರಗಳ ವಿತ್ತೀಯ ಕೊರತೆಗಳು ದಾಖಲೆಯ ಎತ್ತರದ ಮಟ್ಟವನ್ನು ತಲುಪಿವೆ. ಸಾಂಕ್ರಾಮಿಕ ಹರಡುವ ಮುಂಚಿನ ದಿನಗಳಲ್ಲಿ ಈ ಪ್ರಮಾಣದ ವಿತ್ತೀಯ ಕೊರತೆಗಳು ಷೇರು ಮಾರುಕಟ್ಟೆಗಳ ಪತನಕ್ಕೆ ಕಾರಣವಾಗುತ್ತಿದ್ದವು. ಆದರೆ, ಈಗ ಷೇರು ಮಾರುಕಟ್ಟೆಗಳು ಉತ್ಕರ್ಷದ ಹಾದಿಯಲ್ಲಿವೆ. ಏಕೆಂದರೆ, ಸರ್ಕಾರಗಳು ಕೈಗೊಳ್ಳುತ್ತಿರುವ ಹೆಚ್ಚಿನ ಮಟ್ಟದ ಖರ್ಚುಗಳಿಂದಾಗಿ ಬೇಡಿಕೆ ಕುದುರುತ್ತದೆ ಎಂಬ ನಿರೀಕ್ಷೆಯಲ್ಲಿವೆ, ಷೇರು ಮಾರುಕಟ್ಟೆಗಳು. ಪರಿಣಾಮವಾಗಿ, ಷೇರು ಮಾರುಕಟ್ಟೆಗಳಲ್ಲಿ ಹಣ ಗಳಿಸಿದವರು ಮತ್ತು ಉದ್ಯೋಗ ಮತ್ತು ಆದಾಯವನ್ನು ಕಳೆದುಕೊಂಡವರ ನಡುವಿನ ಅಸಮಾನತೆಗಳು ಹೆಚ್ಚಿವೆ.

ಬೃಹತ್ ಬಜೆಟ್ ಕೊರತೆಗಳು

ಅಮೇರಿಕಾದ ಅರ್ಥವ್ಯವಸ್ಥೆಯನ್ನು ಉತ್ತೇಜಿಸಲು ಜೋ ಬಿಡೆನ್ ಆಡಳಿತವು 3 ಟ್ರಿಲಿಯನ್ ಮೊತ್ತದ ಬೃಹತ್ ಪ್ಯಾಕೇಜ್‌ಅನ್ನು ಪ್ರಸ್ತಾಪಿಸಿದೆ. ಇದರ ಹೆಚ್ಚಿನ ಭಾಗವನ್ನು 2021 ರಲ್ಲಿ ಖರ್ಚು ಮಾಡಲಾಗುತ್ತದೆ ಮತ್ತು ಉಳಿದದ್ದನ್ನು ಬರುವ ವರ್ಷಗಳಲ್ಲಿ ಹಂತ ಹಂತವಾಗಿ ಖರ್ಚುಮಾಡಲಾಗುವುದು. ಇದಕ್ಕೂ ಹಿಂದೆ, ಬಿಡೆನ್ ಆಡಳಿತವು ಅಧಿಕಾರ ವಹಿಸಿಕೊಂಡ ಕೂಡಲೇ $1.9 ಟ್ರಿಲಿಯನ್ ಮೊತ್ತದ ಒಂದು ಪರಿಹಾರ ಪ್ಯಾಕೇಜ್ ಅನ್ನು ಅನಾವರಣಗೊಳಿಸಿತ್ತು. ಅದಕ್ಕೂ ಹಿಂದೆ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಕೋರೊನಾ ಅಪ್ಪಳಿಸಿದ ಹಿನ್ನೆಲೆಯಲ್ಲಿ 2020 ರ ಮಧ್ಯಭಾಗದಲ್ಲಿ 2 ಟ್ರಿಲಿಯನ್ ಡಾಲರ್ ಮೊತ್ತದ ಒಂದು ಪ್ಯಾಕೇಜ್ ಬಿಡುಗಡೆ ಮಾಡಿದ್ದರು. ಮತ್ತೊಮ್ಮೆ ಡೊನಾಲ್ಡ್ ಟ್ರಂಪ್, ಡಿಸೆಂಬರ್ 2020ರ ಕೊನೆಯಲ್ಲಿ, 900 ಬಿಲಿಯನ್ ಮೊತ್ತದ ಪ್ಯಾಕೇಜ್‌ಗೆ ಸಹಿ ಹಾಕಿದ್ದರು. ಹೀಗಾಗಿ, ಅಮೇರಿಕಾದಲ್ಲಿ. ಕೊರೊನಾ ಅವಧಿಗೂ ಮೊದಲೇ ಇದ್ದ ಅಗಾಧ ಕೊರತೆಯ ಜೊತೆಗೆ 2020 ಮತ್ತು 2021 ರಲ್ಲಿ ಜಿಡಿಪಿಯ ಶೇ.15ರಷ್ಟು ಮೊತ್ತದ ಹೆಚ್ಚುವರಿ ಕೊರತೆಯನ್ನು ಸೇರಿಸಲಾಗುತ್ತಿದೆ. ಅಮೇರಿಕಾದ ಈ ಕೊರತೆಯ ಪ್ರಮಾಣವು ಅಭೂತಪೂರ್ವ ಎತ್ತರದ ಮಟ್ಟದಲ್ಲಿದೆ.

ಈ ಪ್ರಮಾಣದ ಕೊರತೆಯನ್ನು ನೀಗಿಸಿಕೊಳ್ಳಲು ತೆರಿಗೆಗಳನ್ನು ಅಧಿಕ ಮಟ್ಟದಲ್ಲಿ ಸಂಗ್ರಹಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ, ಅಮೇರಿಕಾದ ಆಡಳಿತವು ಕಾರ್ಪೊರೇಟ್ ತೆರಿಗೆಗಳ ಕನಿಷ್ಠ ದರದ ಈ ಪ್ರಸ್ತಾಪವನ್ನು ಮುಂದಿಟ್ಟಿದೆ. ಆದರೆ, ಅಮೇರಿಕಾದ ಅನೇಕ ಉದ್ದಿಮೆದಾರರು ಮತ್ತು ಸಂಪ್ರದಾಯವಾದಿ ಶಾಸಕರು ಈ ಪ್ರಸ್ತಾಪವನ್ನು ವಿರೋಧಿಸುತ್ತಾರೆ. ಆದಾಗ್ಯೂ, ಜೆಫ್ ಬೆಜೋಸ್‌ನಂತಹ ಕೆಲವು ಶ್ರೀಮಂತ ಅಮೆರಿಕನ್ನರು ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ವಿಚಾರವನ್ನು ಬೆಂಬಲಿಸಿದ್ದಾರೆ. ಇಂತಹ ವಿಚಾರಗಳು 2011 ರಿಂದಲೂ ಆಗಾಗ ಸದ್ದು ಮಾಡಿವೆ. ಅಂತಹ ಸಂದರ್ಭಗಳಲ್ಲಿ ಈ ವಿಚಾರವನ್ನು ಅಮೇರಿಕಾ ಮತ್ತು ಯುರೋಪಿನ ಅನೇಕ ಶ್ರೀಮಂತರು ಬೆಂಬಲಿಸಿದ್ದಾರೆ. 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಬಂಡವಾಳಶಾಹಿ ಆರ್ಥಿಕತೆಗಳನ್ನು ಬಲಪಡಿಸುವ ಸಲುವಾಗಿ ಈ ಪ್ರಸ್ತಾಪವನ್ನು ಮೊದಲಿಗೆ ತೇಲಿಬಿಟ್ಟವರು ಷೇರು ಹೂಡಿಕೆದಾರ, ಬಿಲಿಯನೇರ್, ವಾರೆನ್ ಬಫೆಟ್. ತದನಂತರ, ಈ ಪ್ರಸ್ತಾಪದ ಬಗ್ಗೆ ಹಲವಾರು ಬಾರಿ ಚರ್ಚೆಗಳು ನಡೆದಿವೆ. ಆದರೆ, ಕಾರ್ಪೊರೇಟ್‌ಗಳ ಮೇಲಿನ ತೆರಿಗೆ ದರವನ್ನು ಹೆಚ್ಚಿಸುವ ಬದಲು, ಟ್ರಂಪ್ ಆಡಳಿತವು ಜನವರಿ 1, 2018 ರಿಂದ ಜಾರಿಗೆ ಬಂದಂತೆ, ಪ್ರಮುಖವಾಗಿರದ ಅತಿ ಹೆಚ್ಚಿನ ಮಟ್ಟದ ತೆರಿಗೆ ದರವನ್ನು 35% ರಿಂದ 21% ಗೆ ಕಡಿತಗೊಳಿಸಿತು. ಈ ವಿದ್ಯಮಾನವು ಕಾರ್ಪೊರೇಟ್‌ಗಳ ಮೇಲಿನ ತೆರಿಗೆ ದರವನ್ನು ಹೆಚ್ಚಿಸುವುದು ಎಷ್ಟು ಕಷ್ಟ ಎಂಬುದರ ಮತ್ತು ಈ ಬಗ್ಗೆ ಜಾಗತಿಕ ಒಮ್ಮತ ಏಕೆ ಬೇಕಾಗುತ್ತದೆ ಎಂಬುದರ ಸುಳಿವನ್ನು ಶ್ರೀಮತಿ ಯೆಲೆನ್ ಅವರ ಪ್ರಸ್ತಾಪವು ಕೊಡುತ್ತದೆ.



ಜಾನೆಟ್ ಯೆಲೆನ್

1990ರಲ್ಲಿ ಸೋವಿಯತ್ ಒಕ್ಕೂಟದ ಬಣ ಪತನವಾದಾಗ, ಪೂರ್ವ ಯೂರೋಪಿನ ದೇಶಗಳು ಆರ್ಥಿಕವಾಗಿ ತೊಂದರೆಯಲ್ಲಿದ್ದವು. ಈ ಆರ್ಥಿಕ ಸಂಕಟಗಳಿಂದ ಹೊರಬರಲು ಅವುಗಳಿಗೆ ಬಂಡವಾಳದ ಅಗತ್ಯವಿತ್ತು. ಹಾಗಾಗಿ, ಈ ದೇಶಗಳು ತಮ್ಮ ತಮ್ಮ ದೇಶದಲ್ಲಿ ಬಂಡವಾಳ ಹೂಡಿಕೆ ಮಾಡುವಂತೆ ಜಾಗತಿಕ ಮಟ್ಟದ ಬಂಡವಾಳದಾರರನ್ನು ಆಕರ್ಷಿಸಲು ತಮ್ಮ ತಮ್ಮ ಕಾರ್ಪೊರೇಟ್ ತೆರಿಗೆ ದರಗಳನ್ನು ತೀವ್ರವಾಗಿ ಕಡಿತಗೊಳಿಸಿದವು. ಬಂಡವಾಳವನ್ನು ಆಕರ್ಷಿಸುವ ಭರದಲ್ಲಿ ಈ ದೇಶಗಳ ತೆರಿಗೆ ಇಳಿಕೆಗಳು 'ಪಾತಾಳಕ್ಕಿಳಿಯುವ ಸ್ಪರ್ಧೆ'ಯಾಗಿ ಪರಿಣಮಿಸಿದವು. ಬಂಡವಾಳವನ್ನು ಆಕರ್ಷಿಸುವ ಉದ್ದೇಶದಿಂದ ಮಾತ್ರವಲ್ಲ, ಆ ಬಂಡವಾಳವು ತಮ್ಮ ದೇಶವನ್ನು ತೊರೆಯದಂತೆ ನೋಡಿಕೊಳ್ಳುವ ಉದ್ದೇಶದಿಂದಲೂ, ಒಂದರ ನಂತರ ಮತ್ತೊಂದರಂತೆ ಸ್ಪರ್ಧೆಗಿಳಿದ ಯುರೋಪಿನ ದೇಶಗಳು ತಮ್ಮ ತಮ್ಮ ತೆರಿಗೆ ದರಗಳನ್ನು ಕಡಿತಗೊಳಿಸಿದವು. ತೆರಿಗೆ ದರ ಕಡಿತದ ಈ ಅಂಶವು ಜಾಗತಿಕವಾಗಿ ಪರಿಣಾಮ ಬೀರಿತ್ತು.

ತೆರಿಗೆಗಳನ್ನು ಇಳಿಸಿದ ಪರಿಣಾಮವಾಗಿ ದೇಶ ದೇಶಗಳು ಸಂಪನ್ಮೂಲಗಳ ಕೊರತೆಯನ್ನು ಅನುಭವಿಸಿದವು. ಸಂಪನ್ಮೂಲಗಳ ಕೊರತೆಯ ಕಾರಣದಿಂದ ಕಂಗಾಲಾದ ಈ ದೇಶಗಳು, ಆರೋಗ್ಯ, ಶಿಕ್ಷಣ ಮುಂತಾದ ಸಾರ್ವಜನಿಕ ಸೇವೆಗಳ ಮೇಲಿನ ವೆಚ್ಚಗಳನ್ನು ಕಡಿತಗೊಳಿಸಿದವು. ಖಾಸಗಿ ಉದ್ದಿಮೆಗಳು–ಸಂಸ್ಥೆಗಳು–ಮಾರುಕಟ್ಟೆಗಳು, ಬಡ ಜನರ ಸಮಸ್ಯೆಗಳಿಗೆ ಉತ್ತರವಲ್ಲ ಎಂಬ ಅರಿವಿದ್ದರೂ ಸಹ, ಈ ದೇಶಗಳು ತಮ್ಮ ಒಡೆತನದ ಉದ್ದಿಮೆ/ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಿದವು. ಅಭಿವೃದ್ಧಿಶೀಲ ದೇಶಗಳು ತೆರಿಗೆ ಇಳಿಕೆಯ ಮತ್ತು ಖಾಸಗೀಕರಣದ ಕ್ರಮಗಳನ್ನು ಅನುಸರಿಸಿದವು. ಹೀಗಾಗಿ, ದೇಶ ದೇಶಗಳ ನಡುವೆ ಮತ್ತು ದೇಶಗಳಲ್ಲಿ ಆಂತರಿಕ ಅಸಮಾನತೆಗಳು ಹೆಚ್ಚಿದವು.

ಬಿಇಪಿಎಸ್ ಮತ್ತು ಆದಾಯದ ನಷ್ಟ

ಕಾರ್ಪೊರೇಟ್ ತೆರಿಗೆಗಳ ಇಳಿಕೆಯಿಂದ ತೃಪ್ತರಾಗದ ಬಹುರಾಷ್ಟ್ರೀಯ ಕಂಪೆನಿಗಳು, ಬೆಂಕಿ ಹತ್ತಿದ ಮನೆಯಿಂದ ಹಿರಿದದ್ದೇ ಲಾಭ ಎನ್ನುವ ರೀತಿಯಲ್ಲಿ ತೆರಿಗೆ ತಪ್ಪಿಸಿಕೊಳ್ಳುವ ಹಪಾ ಹಪಿಗೆ ಬಿದ್ದವು. ಈ ವಿದ್ಯಮಾನವನ್ನು ಬಿ.ಇ.ಪಿ.ಎಸ್. (BEPS - Base Erosion Profit Shifting) ಎಂದು ಕರೆಯುತ್ತಾರೆ. ಬಿಇಪಿಎಸ್ ಅಂದರೆ, ಕಂಪನಿಗಳು ತಮ್ಮ ಲಾಭವನ್ನು ಕಡಿಮೆ ತೆರಿಗೆ ಹಾಕುವ ದೇಶಗಳಿಗೆ, ವಿಶೇಷವಾಗಿ ತೆರಿಗೆ ಧಾಮಗಳಿಗೆ ವರ್ಗಾಯಿಸುವ ಕ್ರಮ. ಉದಾಹರಣೆಗೆ, ಗೂಗಲ್ ಮತ್ತು ಫೇಸ್ ಬುಕ್‌ನಂತಹ ಅನೇಕ ಅತ್ಯಂತ ಲಾಭದಾಯಕ ಕಂಪನಿಗಳು ತಮ್ಮ ಲಾಭವನ್ನು ಐರ್ಲೆಂಡ್ ಮತ್ತು ಇತರ ತೆರಿಗೆ ಧಾಮಗಳಿಗೆ ವರ್ಗಾಯಿಸಿವೆ. ಕಡಿಮೆ ತೆರಿಗೆ ಪಾವತಿಸುತ್ತವೆ ಎಂಬ ಆರೋಪ ಹೊತ್ತಿವೆ. ಇಂತಹ ಕೃತ್ಯಗಳಲ್ಲಿ ತೊಡಗಿದ ಅಪರಾಧಕ್ಕಾಗಿ, ಗೂಗಲ್ ಮತ್ತು ಆಪಲ್ ಕಂಪೆನಿಗಳ ಮೇಲೆ ಯೂರೋಪ್ ಒಕ್ಕೂಟವು ದಂಡ ವಿಧಿಸಿದೆ. ತೆರಿಗೆ ತಪ್ಪಿಸಿಕೊಳ್ಳುವ ಕ್ರಮಗಳಿಂದಾಗಿ ಅಮೇರಿಕಾ $100 ಬಿಲಿಯನ್ ಡಾಲರ್ ತೆರಿಗೆ ಆದಾಯವನ್ನು ಕಳೆದುಕೊಳ್ಳುತ್ತಿದೆ ಎಂದು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರು 2009ರಲ್ಲಿ ಹೇಳಿದ್ದರು.

ತೆರಿಗೆ ದರ ಕಡಿತಗಳು ಮತ್ತು ಬಿಇಪಿಎಸ್‌ನಿಂದಾಗಿ ಎಲ್ಲಾ ಒಇಸಿಡಿ ದೇಶಗಳೂ ತೊಂದರೆ ಅನುಭವಿಸಿರುವುದರಿಂದ, ತೆರಿಗೆ ತಪ್ಪಿಸಿಕೊಳ್ಳುವ ಕ್ರಮಗಳನ್ನು ತಡೆಗಟ್ಟುವ ಕಾರ್ಯವನ್ನು ಆರಂಭಿಸಲಾಗಿದೆ. ಆದರೆ, ಎಲ್ಲಾ ದೇಶಗಳ ನಡುವೆ ಈ ಬಗ್ಗೆ ಒಮ್ಮತವಿಲ್ಲದಿದ್ದರೆ ಅವು ಕೈಗೊಂಡ ಕಾರ್ಯಗಳು ಯಶಸ್ವಿಯಾಗುವುದಿಲ್ಲ. ಆರ್ಥಿಕ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ಯಾವುದೇ ಒಂದು ದೇಶವು ಬಂಡವಾಳವನ್ನು ಆಕರ್ಷಿಸುವ ಸಲುವಾಗಿ, ತನ್ನ ತೆರಿಗೆ ದರಗಳನ್ನು ಕಡಿತಗೊಳಿಸಬಹುದು. ಈ ಕ್ರಮವನ್ನು ಅನುಸರಿಸುವ ಒತ್ತಾಯಕ್ಕೆ ಇತರ ದೇಶಗಳು ಒಳಗಾಗುತ್ತವೆ. ಹಾಗಾಗಿಯೇ, ಭಾರತವೂ ಸಹ 1990ರ ದಶಕದಿಂದಲೇ

ಪುಟ 14 ನೋಡಿ



ಕ್ಯಾಥರಿನ್ ತಾಯ್

ಜಾಗತಿಕ ಕಾರ್ಪೊರೇಟ್ ತೆರಿಗೆ–ಬಿಡೆನ್ ಆಡಳಿತದ ಮಿಶ್ರ ಸಂಕೇತಗಳು – ಪ್ರೊ. ಸಿ.ಪಿ. ಚಂದ್ರಶೇಖರ್

(–ಫ್ರಂಟ್‌ಲೈನ್, ಮೇ7, 2021ರಲ್ಲಿ ಪ್ರಕಟವಾದ Biden's global corporate tax plans send mixed signals ಲೇಖನದಿಂದ)

ಸರಕಾರ ಮಾಡಬೇಕಾದ ವೆಚ್ಚದ ಪ್ರಮಾಣವನ್ನು ಹೆಚ್ಚಿಸುವುದೇ ಅಜೆಂಡಾ. ಇದಕ್ಕೆ ಹೆಚ್ಚಿನ ತೆರಿಗೆ ಆದಾಯ ಮತ್ತು ಒಂದು ಜಾಗತಿಕ ತೆರಿಗೆ ಒಪ್ಪಂದ ಒಂದು ಪೂರ್ವಷರತ್ತು. ಆದರೆ ಈ ಕುರಿತು ಒಂದು ಜಾಗತಿಕ ಒಪ್ಪಂದಕ್ಕೆ ಬರುವುದು ಸುಲಭಸಾಧ್ಯವಲ್ಲ. ಇದು, ಉದಾಹರಣೆಗೆ, ಡಿಜಿಟಲ್‌ಸೇವಾ ತೆರಿಗೆ(ಡಿಎಸ್‌ಟಿ) ಕುರಿತಂತೆ ಅಮೆರಿಕಾದ ನಿಲುವಿನಲ್ಲಿ ಬಿಂಬಿತವಾಗುತ್ತದೆ.

ಭಾರತ, ಅಸ್ಟ್ರೇಲಿಯ, ಇಟೆಲಿ, ಸ್ಪೇನ್, ಟರ್ಕಿ ಮತ್ತು ಯುಕೆ ಅಮೆರಿಕನ್ ಡಿಜಿಟಲ್ ಕಂಪನಿಗಳು ತಮ್ಮ ದೇಶಗಳಲ್ಲಿ ಮಾಡುವ ವ್ಯವಹಾರಗಳ ಆದಾಯಗಳ ಮೇಲೆ ತೆರಿಗೆಯನ್ನು ಹಾಕಿರುವುದರ ಬಗ್ಗೆ ಕುಪಿತಗೊಂಡ ಅಮೆರಿಕನ್ ಆಡಳಿತ ತನ್ನ ಸೆಕ್ಷನ್ 301ರ ಅಡಿಯಲ್ಲಿ ಕ್ರಮಕ್ಕೆ ಒಳಪಡುತ್ತಾರೆ ಎಂದು ಯುಎಸ್ ವ್ಯಾಪಾರ ಪ್ರತಿನಿಧಿ(ಯುಎಸ್‌ಟಿಆರ್) ಕಚೇರಿ ಬಿಡೆನ್ ಆಡಳಿತ ಬಂದ ಮೇಲೂ ಒಂದಿಷ್ಟು ವರದಿಗಳನ್ನು ಕಳಿಸಿತ್ತು.

ಬಿಡೆನ್ ಈಗ ಯುಎಸ್‌ಟಿಆರ್ ಹುದ್ದೆಗೆ ನೇಮಿಸಿರುವ ಕ್ಯಾಥರಿನ್ ತಾಯ್ ಕೂಡ ಅಂತರ್ರಾಷ್ಟ್ರೀಯ ತೆರಿಗೆಗಳನ್ನು ಕುರಿತಂತೆ ಒಇಸಿಡಿ ಮೂಲಕ ಅಂತರ್ರಾಷ್ಟ್ರೀಯ ಒಮ್ಮತಕ್ಕೆ ಬರುವ ವರೆಗೆ ಸೆಕ್ಷನ್ 301ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಬದ್ಧರಾಗಿದ್ದೇವೆ ಎಂದಿದ್ದಾರೆ.

ಭಾರತ 2016ರಲ್ಲಿ ಡಿಜಿಟಲ್ ಸೇವಾ ತೆರಿಗೆ(ಡಿಎಸ್‌ಟಿ) ಎಂಬುದನ್ನು ಆರಂಭಿಸಿತು, 2020ರಲ್ಲಿ ಇದನ್ನು ವಿಸ್ತರಿಸಿ ಅನಿವಾಸಿ ಇ–ವಾಣಿಜ್ಯ ಕಂಪನಿಗಳು ಭಾರತದಲ್ಲಿ ಮಾಡುವ ವ್ಯಹಾಗಳಿಮದ ಗಳಿಸುವ ಆದಾಯಗಳ ಮೇಲೆ 2% ತೆರಿಗೆ ವಿಧಿಸಿತು. ಇದರ ಹಿಂದಿರುವ ಮೂಲ ವಿಚಾರ ಎಂದರೆ, ಇಂತಹ ಕಂಪನಿಗಳು ಭಾರತದಲ್ಲಿ ಪಡೆಯುವ ಆದಾಯಗಳು ಮತ್ತು ಲಾಭಗಳ ದಾಖಲೆಗಳನ್ನು ಕೊಡುವುದಿಲ್ಲ, ಇದರಿಂದ ಭಾರತ ಸರಕಾರಕ್ಕೆ ಇಂತಹ ಚಟುವಟಿಕೆಗಳಿಂದ ಬರಬೇಕಾಗಿರುವ ತೆರಿಗೆ ಆದಾಯ ಸಿಗದಂತಾಗುತ್ತದೆ. ಅಂತರ್ರಾಷ್ಟ್ರೀಯ ತೆರಿಗೆಗಳನ್ನು ಕುರಿತಂತೆ ಒಇಸಿಡಿ ತಯಾರಿಸಿರುವ ನೀಲನಕ್ಷೆ ಅನಿವಾಸಿ ಕಂಪನಿಗಳು ಬೇರೆ ದೇಶಗಳಲ್ಲಿ ಪಡೆಯುವ ಆದಾಯಗಳು ಮತ್ತು ಲಾಭಗಳ ಮೇಲೆ ತೆರಿಗೆಯಲ್ಲಿ ಪಾಲು ಪಡೆಯುವ ಒಂದು ಹಕ್ಕು ಹೊಂದಿದ್ದಾರೆ ಎಂದು ಗುರುತಿಸಿದೆ.

ಆದ್ದರಿಂದ ಜಾಗತಿಕ ಕನಿಷ್ಟ ಕಾರ್ಪೊರೇಟ್ ತೆರಿಗೆಯ ತನ್ನ ಪ್ರಸ್ತಾವಕ್ಕೆ ಒಪ್ಪಿಗೆ ಪಡೆಯಬೇಕಾದರೆ ಈ ಡಿಎಸ್‌ಟಿಯ ಯಾವುದಾದರೊಂದು ಪ್ರಸ್ತಾವವನ್ನು ಸ್ವೀಕರಿಸಬೇಕಾಗುತ್ತದೆ.

ಹೀಗಿರುವಾಗ ತನ್ನ ಸೆಕ್ಷನ್ 301ರ ಅಡಿಯಲ್ಲಿ ಸುಂಕಪಟ್ಟಿಯನ್ನು ಹಾಕುವ ಬೆದರಿಕೆಯನ್ನು ಮುಂದುವರೆಸುವುದೆಂದರೆ , ಒಂದು ಅಂತರರಾಷ್ಟ್ರೀಯ ತೆರಿಗೆ ಸಂರಚನೆಯನ್ನು ರೂಪಿಸುವುದರಲ್ಲಿ ಸಹಕರಿಸಲು ಅಮೆರಿಕಾ ನಿಜವಾಗಿಯೂ ಸಿದ್ಧವಿದೆಯೇ ಎಂಬ ಬಗ್ಗೆ ವೈರುಧ್ಯಪೂರ್ಣ ಸಂಕೇತಗಳನ್ನು ಕಳಿಸಿದಂತಾಗುತ್ತದೆ. ತನ್ನ ಆರ್ಥಿಕ ಸ್ಪರ್ಧಾತ್ಮಕತೆ ಮತ್ತು ಪ್ರಾಬಲ್ಯವನ್ನು ಮತ್ತೆ ಗಳಿಸುವ ಆಕಾಂಕ್ಷೆಯ ಈಡೇರಿಕೆಗಾಗಿ ಜಾಗತಿಕ ಕನಿಷ್ಟ ಕಾರ್ಪೊರೇಟ್ ತೆರಿಗೆಯ ಮಾತಾಡುತ್ತಿದೆಯೇ ಎಂಬ ಸಂದೇಹ ಮೂಡಿಸುವಂತದ್ದು.

ಜಾಗತಿಕ ಕಾರ್ಪೋರೇಟ್ ತೆರಿಗೆ

ಪುಟ 13 ರಿಂದ

ತನ್ನ ತೆರಿಗೆ ದರಗಳನ್ನು ಕಡಿತಗೊಳಿಸಿದೆ. ತೀರಾ ಇತ್ತೀಚೆಗೆ, 2019 ರಲ್ಲಿ, ಆಗ್ನೇಯ ಏಷ್ಯಾದ ದೇಶಗಳ ಚಾಲ್ತಿ ತೆರಿಗೆ ದರಗಳಿಗೆ ಸರಿಹೊಂದುವ ರೀತಿಯಲ್ಲಿ ಕಾರ್ಪೊರೇಟ್ ತೆರಿಗೆ ದರಗಳನ್ನು ಕಡಿತಗೊಳಿಸಲಾಗಿದೆ. ತೆರಿಗೆಗಳನ್ನು ಈ ರೀತಿಯಲ್ಲಿ ಕಡಿತಗೊಳಿಸುವುದರಿಂದಾಗಿ ಆರ್ಥಿಕ ಅಸಮಾನತೆಗಳು ಹೆಚ್ಚುತ್ತವೆ, ಸಾರ್ವಜನಿಕ ಸೇವೆಗಳ ಗುಣಮಟ್ಟ ಕುಸಿಯುತ್ತದೆ ಮತ್ತು ಬಡವರಿಗಾಗಿ ಆಯೋಜಿಸಿದ ಕಲ್ಯಾಣ ಯೋಜನೆಗಳನ್ನು ನಿಲ್ಲಿಸಬೇಕಾಗುತ್ತದೆ.

ಹಿಂದಕ್ಕೆ ಸರಿಯುವ ತೆರಿಗೆ ಸಂರಚನೆ

ಕಳೆದ ನಾಲ್ಕೈದು ದಶಕಗಳಿಂದಲೂ ಸರ್ಕಾರಗಳ ತೆರಿಗೆ ಆದಾಯದಲ್ಲಿ ನೇರ ತೆರಿಗೆಗಳ ಪಾಲು ಇಳಿಯುತ್ತಿದೆ ಮತ್ತು ಪರೋಕ್ಷ ತೆರಿಗೆಗಳ ಪಾಲು ಏರುತ್ತಿದೆ. ನೇರ ತೆರಿಗೆ ಆದಾಯದ ಇಳಿಕೆಯನ್ನು ಸರಿದೂಗಿಸಿಕೊಳ್ಳಲು ಸರ್ಕಾರಗಳು ಪರೋಕ್ಷ ತೆರಿಗೆಗಳನ್ನೇ (ಅಂದರೆ, ಮೌಲ್ಯವರ್ಧಿತ ತೆರಿಗೆ ಮತ್ತು ಸರಕು ಮತ್ತು ಸೇವಾ ತೆರಿಗೆಗಳನ್ನು) ಹೆಚ್ಚು ಹೆಚ್ಚು ಅವಲಂಬಿಸಿವೆ. ಈ ಪರೋಕ್ಷ ತೆರಿಗೆಗಳ ಹೊರೆಯ ಹೆಚ್ಚಿನ ಭಾರವನ್ನು ಬಡ ಜನರೇ ಹೊರಬೇಕಾಗುತ್ತದೆ. ಜೊತೆಗೆ ಹಣದುಬ್ಬರವೂ ಉಂಟಾಗುತ್ತದೆ. ಪ್ರತಿಯಾಗಿ, ನೇರ ತೆರಿಗೆಗಳು, ತೆರಿಗೆ ನಂತರದ ಆದಾಯಗಳ ಅಸಮಾನತೆಯನ್ನು ಕಡಿಮೆ ಮಾಡುವ ಸಾಮರ್ಥ್ಯ ಹೊಂದಿವೆ. ಹೆಚ್ಚುತ್ತಿರುವ ಅಸಮಾನತೆಗಳು ಬೇಡಿಕೆಯ ಕೊರತೆಗೆ ಕಾರಣವಾಗುತ್ತವೆ. ಜೊತೆಗೆ, ಅರ್ಥವ್ಯವಸ್ಥೆಯ ನಿಧಾನಗತಿಗೂ ಕಾರಣವಾಗುತ್ತವೆ. ಅರ್ಥವ್ಯವಸ್ಥೆಯಲ್ಲಿ ಹಿಂಜರಿಕೆ ಉಂಟಾದಾಗ, ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸಲು ಹೆಚ್ಚಿನ ಬಂಡವಾಳ ಹೂಡಿಕೆಯ ಅಗತ್ಯ ಬೀಳುತ್ತದೆ. ಆಗ, ಬಂಡವಾಳವು ಹೆಚ್ಚಿನ ರಿಯಾಯಿತಿಗಳನ್ನು ಕೋರುತ್ತದೆ. ಅಷ್ಟಾಗಿಯೂ ಅರ್ಥವ್ಯವಸ್ಥೆಯು ಪುನಶ್ಚೇತನಗೊಳ್ಳುವುದಿಲ್ಲ. ಏಕೆಂದರೆ, ತೆರಿಗೆ ಕಡಿಮೆ ಇದೆ ಎಂಬ ಕಾರಣದ ಮೇಲೆ ಮಾಡುವ ಹೂಡಿಕೆಗಳು ಬೇಡಿಕೆಯನ್ನು ಹೆಚ್ಚಿಸುವುದು ಅನಿಶ್ಚಿತವೇ. ಬದಲಾಗಿ, ಹೆಚ್ಚಿನ ಮಟ್ಟದ ಸರ್ಕಾರಿ ವೆಚ್ಚಗಳು ಬೇಡಿಕೆಯನ್ನು ಹೆಚ್ಚಿಸುವುದು ಖಚಿತವೇ.

ಬಹಳಷ್ಟು ಓಡಾಡುವ ಪ್ರವೃತ್ತಿಯ ಜಾಗತಿಕ ಹಣಕಾಸು ಬಂಡವಾಳವು ವಿಶ್ವದಾದ್ಯಂತ ಸ್ಥಳಾಂತರಗೊಳ್ಳಲು ಮತ್ತು ತನ್ನ ಲಾಭವನ್ನು ವರ್ಗಾಯಿಸಲು ಚಿಪ್ಪು(ಹುಸಿ) ಕಂಪನಿಗಳನ್ನು ಮತ್ತು ತೆರಿಗೆ ಧಾಮಗಳನ್ನು ಧಾರಾಳವಾಗಿ ಬಳಸಿಕೊಂಡಿದೆ. ಬಂಡವಾಳದ ಈ ಓಡಾಡುವ ಪ್ರವೃತ್ತಿಯು ದೇಶ ದೇಶಗಳಿಂದ ರಿಯಾಯಿತಿಗಳನ್ನು ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಒಂದು ದೇಶವು ಕೊಟ್ಟ ರಿಯಾಯ್ತಿಗಳನ್ನು ಮತ್ತೊಂದು ದೇಶವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೊಡುವ 'ಪಾತಾಳಕ್ಕಿಳಿಸುವ ಸ್ಪರ್ಧೆ'ಯನ್ನು ಉಂಟುಮಾಡಿದೆ. ಹಾಗಾಗಿ, ಜಾಗತಿಕ ಸಮನ್ವಯವಿಲ್ಲದೆ, ಕಾರ್ಪೊರೇಟ್ ತೆರಿಗೆ ದರಗಳನ್ನು ಏರಿಸುವುದು ಸಾಧ್ಯವಿಲ್ಲ.

ಈ ಸಮನ್ವಯವನ್ನು ಸಾಧಿಸುವಲ್ಲಿ ಅಮೇರಿಕಾ ನಿರ್ಣಾಯಕವಾಗುತ್ತದೆ. ಅಮೇರಿಕಾದ ಸಹಕಾರ ಮತ್ತು ಒಪ್ಪಿಗೆ ಇಲ್ಲದೆ, ಇತರ ದೇಶಗಳು ತೆರಿಗೆ ದರಗಳನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಈ ಬಗ್ಗೆ ಅಮೇರಿಕಾ ಈಗ ಮುಂದಾಳತ್ವ ವಹಿಸುತ್ತಿರುವುದರಿಂದ, ದೇಶ ದೇಶಗಳ ಅಧಿಕಾರದ ಪಡಸಾಲೆಗಳಲ್ಲಿ ಜಾಗತಿಕ ಬಂಡವಾಳವು ಹೊಂದಿರುವ ಪ್ರಭಾವವನ್ನು ಗಮನದಲ್ಲಿ ಇಟ್ಟುಕೊಂಡು ನೋಡಿದಾಗ ಈ ಕಾರ್ಯವು ಸುಲಭವಲ್ಲ ಎನಿಸಿದರೂ ಸಹ, ಬಹುಶಃ ಇದು ಸಂಭವಿಸಬಹುದು. ಸೂಕ್ತ ಜಾಗತಿಕ ನೀತಿಗಳನ್ನು ಜಾರಿಗೆ ತರುವ ಮೂಲಕ ತೆರಿಗೆ ಧಾಮಗಳ ಆಕರ್ಷಣೆಯನ್ನು ನಿಭಾಯಿಸಲು ದೇಶ ದೇಶಗಳ ನಡುವೆ ಸಹಕಾರವೂ ಇರಬೇಕಾಗುತ್ತದೆ. ಈ ಎಲ್ಲವೂ ದೂರಗಾಮಿ ಪರಿಣಾಮಗಳನ್ನು ಹೊಂದಿವೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳಿಂದ ಬಂಡವಾಳವು ಹೊರಹೋಗುವುದನ್ನು ನಿಲ್ಲಿಸುವ, ಬಡತನವನ್ನು ಕಡಿಮೆ ಮಾಡುವ, ಅಸಮಾನತೆಗಳನ್ನು ತಗ್ಗಿಸುವ, ಸಾರ್ವಜನಿಕ ಸೇವೆಗಳನ್ನು ಉತ್ತಮಪಡಿಸುವ ಸಾಧ್ಯತೆಗಳಿವೆ. ಆದ್ದರಿಂದ, ವಿಶ್ವಬ್ಯಾಂಕ್‌ನ ಅಧ್ಯಕ್ಷರು ಎತ್ತಿದ ಆಕ್ಷೇಪಣೆಯ ಹೊರತಾಗಿಯೂ ಜಾಗತಿಕ ಕನಿಷ್ಠ ತೆರಿಗೆ ದರ ಪ್ರಸ್ತಾಪವು ಪ್ರಯತ್ನಯೋಗ್ಯವಾಗಿದೆ.

ಹೊಸ ನೋಟದಲ್ಲಿ ಭಾರತದ ಕಾರ್ಮಿಕ ವರ್ಗ

ಪುಟ 11 ರಿಂದ

ಪ್ರಹಾರ ಮಾಡಿದರು ಮತ್ತು ಎರಡು ಸಂದರ್ಭಗಳಲ್ಲಿ ಮುಷ್ಕರ ನಿರತರ ಮೇಲೆ ಗುಂಡು ಹಾರಿಸಲಾಯಿತು.. ಪಶ್ಚಿಮ ರೈಲ್ವೆಯ ದೋಹಾದ್ ರೈಲ್ವೆ ಕಾರ್ಯಾಗಾರದಲ್ಲಿ ಪೊಲೀಸರ ಗುಂಡಿನೇಟಿನಿಂದ ಐದು ಮಂದಿ ಕಾರ್ಮಿಕರು ಸಾವನ್ನಪ್ಪಿದರು.

20.000 ಕ್ಕೂ ಹೆಚ್ಚು ಜನರನ್ನು ಬಂಧಿಸುವುದರ ಜೊತೆಗೆ ಕನಿಷ್ಠ 1.500 ಉದ್ಯೋಗಿಗಳನ್ನು ಸೇವೆಯಿಂದ ವಜಾಗೊಳಿಸಲಾಯಿತು. ಸುಮಾರು 10.000 ಜನರನ್ನು ಅಮಾನತುಗೊಳಿಸಲಾಯಿತು ಮತ್ತು 1.500 ಕ್ಕೂ ಹೆಚ್ಚು ಜನರನ್ನು ದೋಷಾರೋಪಣೆ ಮಾಡಿ ಜೈಲು ಶಿಕ್ಷೆಗೆ ಗುರಿಪಡಿಸಲಾಯಿತು. ಜುಲೈ 17 ರಂದು ನೌಕರರು ಕೆಲಸಕ್ಕೆ ಮರಳಿದರು. ಹೀಗೆ ಕೇಂದ್ರ ಸರ್ಕಾರಿ ನೌಕರರ ಅದ್ಭುತ ಐದು ದಿನಗಳ ಹೋರಾಟ ಕೊನೆಗೊಂಡಿತು.

1962 ರಲ್ಲಿ ನೇಮಕಗೊಂಡ ಮತ್ತು 1964 ರಲ್ಲಿ ವರದಿ ನೀಡಿದ ಬೋನಸ್ ಆಯೋಗವು ಬೋನಸ್‌ನ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ಕ್ರಮವಾಗಿ ಶೇಕಡಾ 4 ಮತ್ತು 20 ಕ್ಕೆ ನಿಗದಿಪಡಿಸಿತು. ಬೋನಸ್ ಅನ್ನು ಕನಿಷ್ಠ ಮಟ್ಟದಲ್ಲಿ ಇರಿಸಲು ಮಾಲಿಕರಿಗೆ ಬ್ಯಾಲೆನ್ಸ್ ಶೀಟ್‌ಗಳನ್ನು ಕುಶಲತೆಯಿಂದ ನಿರ್ವಹಿಸಲು ಮುಕ್ತ ಅವಕಾಶ ಮಾಡಿಕೊಟ್ಟಿತು.

ಮುಂದೆ 1966-68ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ ರಾಷ್ಟ್ರೀಯ ಕಾರ್ಮಿಕ ಆಯೋಗವು 15 ನೇ ಭಾರತ ಕಾರ್ಮಿಕ ಸಮ್ಮೇಳನವು ಅಗತ್ಯ-ಆಧಾರಿತ ಕನಿಷ್ಠ ವೇತನವನ್ನು ಲೆಕ್ಕಹಾಕಲು ನಿಗದಿಪಡಿಸಿದ ಮಾನದಂಡಗಳನ್ನು ಸಂಪೂರ್ಣವಾಗಿ ಋಣಾತ್ಮಕಗೊಳಿಸಿತು, ಅಗತ್ಯ-ಆಧಾರಿತ ಕನಿಷ್ಠ ವೇತನದ ಮೂಲಭೂತ ಹಕ್ಕುಗಳನ್ನು ಕೈಗಾರಿಕೆಯ ಪಾವತಿಸುವ ಸಾಮರ್ಥ್ಯಕ್ಕೆ ಅಧೀನಗೊಳಿಸಿತು. ಎಲ್‌ಐಸಿ, ತೈಲ ಕಂಪನಿಗಳ ಮತ್ತು ಇತರ ಹಲವಾರು ಕೈಗಾರಿಕೆಗಳ ನೌಕರರು ಮತ್ತು ಕಾರ್ಮಿಕರು, ಕಾರ್ಮಿಕರ ಉದ್ಯೋಗ-ಭದ್ರತೆಗೆ ಅಪಾಯಕಾರಿಯಾದ ಮತ್ತು ಉದ್ಯೋಗನೀಡುವ ಸಾಮರ್ಥ್ಯವನ್ನು ಕಡಿಮೆ ಮಾಡುವ, ಯಾಂತ್ರೀಕರಣದ ವಿರುದ್ಧ ಕಠಿಣ ಹೋರಾಟಗಳನ್ನು ನಡೆಸುತ್ತಿದ್ದರು. ಆಯೋಗವು ತನ್ನ ವರದಿಯಲ್ಲಿ ಉದ್ಯೋಗ-ಕೊಲ್ಲುವ ಎಲ್ಲಾ ಸಾಧನಗಳ ಪರಿಚಯಕ್ಕೆ ಹಸಿರು ಸಂಕೇತವನ್ನು ನೀಡಿತು

ಜೊತೆಯಲ್ಲಿ, ಸರ್ಕಾರವು ಕೆಲವು ಶಾಸನಗಳನ್ನು ಸಹ ರಚಿಸಿತು, ಕಾರ್ಮಿಕ ವರ್ಗದ ಮುಷ್ಕರಗಳು ಮತ್ತು ಇತರ ಕೈಗಾರಿಕಾ ಕ್ರಮಗಳನ್ನು ನಿಗ್ರಹಿಸುವಂತೆ ವಿನ್ಯಾಸಗೊಳಿಸಲಾದ ಇವುಗಳನ್ನು ಕಾರ್ಮಿಕರು 'ಕಪ್ಪು ಕಾಯಿದೆಗಳು' ಎಂದು ಖಂಡಿಸಿದರು. ಜುಲೈ 1960 ರ ಕೇಂದ್ರ ಸರ್ಕಾರಿ ನೌಕರರ ಮುಷ್ಕರವನ್ನು ಮತ್ತು ನಂತರದ ಸೆಪ್ಟೆಂಬರ್ 19, 1968 ರಂದು ಸಾಂಕೇತಿಕ ಮುಷ್ಕರವನ್ನು ಕಾನೂನುಬಾಹಿರಗೊಳಿಸುವ ಅಧಿನಿಯಮವಾಗಿ ಘೋಷಿಸಲ್ಪಟ್ಟ ಅಗತ್ಯ ಸೇವೆಗಳ ನಿರ್ವಹಣೆ ಕಾಯ್ದೆ ಭಾರತದ ಶಾಸನ ಪುಸ್ತಕದಲ್ಲಿ ಶಾಶ್ವತವಾಗಿ ಉಳಿಯಿತು. ಕಾರ್ಮಿಕರ ಟ್ರೇಡ್ ಯೂನಿಯನ್ ಚಟುವಟಿಕೆಗಳಿಗೆ ಪ್ರತಿಕ್ರಮವಾಗಿ ವಿವಿಧ ಕೈಗಾರಿಕಾ ಘಟಕಗಳಲ್ಲಿ ನಿಯೋಜನೆ ಮಾಡಲು ಕೇಂದ್ರ ಕೈಗಾರಿಕಾ ಭದ್ರತಾ ಪಡೆ ರಚನೆ ಈ ಕಾಯಿದೆಯೊಂದಿಗೆ ಬಂದಿತು.

ದೊಡ್ಡ ಕೈಗಾರಿಕಾ ಮನೆತನಗಳಿಗೆ ಹೆಚ್ಚಿನ ಲಾಭವನ್ನು ಸಂತೋಷದಿಂದ ಜೇಬಿಗೆ ಸೇರಿಸಿಕೊಳ್ಳಲು ಅವಕಾಶ ನೀಡಲಾಯಿತು. ದಿ ಎಕನಾಮಿಕ್ ಟೈಮ್ಸ್ ಅಧ್ಯಯನ ಮಾಡಿದ 101 ದೈತ್ಯ ಕಂಪನಿಗಳ ತೆರಿಗೆ ನಂತರದ ನಿವ್ವಳ ಲಾಭವು 1967-68ರ ಅವಧಿಯಲ್ಲಿ 10,290 ಮಿಲಿಯನ್ ರೂಪಾಯಿಗಳಿಂದ 1968-69ರ ಅವಧಿಯಲ್ಲಿ 11.233 ಮಿಲಿಯನ್ ರೂಪಾಯಿಗಳಿಗೆ ಏರಿಕೆಯಾಯಿತು, ಕಾರ್ಮಿಕರ ನಿಜವಾದ ವೇತನವು ಸ್ಥಿರವಾದ ಕುಸಿತಕ್ಕೆ ಒಳಗಾಯಿತು.. ನೈಜ ಆದಾಯದ ಈ ಕುಸಿತದ ಜೊತೆಗೆ, ರಿಟ್ರೆಂಚ್‌ಮೆಂಟ್, ರಿಆರ್ಗನೈಜೇಶನ್ ಮತ್ತು ಯಾಂತ್ರೀಕರಣ ಮತ್ತು ನಿರುದ್ಯೋಗದ ಬೃಹತ್ ಬೆಳವಣಿಗೆ ಕಾರ್ಮಿಕ ವರ್ಗ ಮತ್ತು ಮಧ್ಯಮ ವರ್ಗದ ಕುಟುಂಬಗಳ ಮೇಲೆ ತೀವ್ರ ಪರಿಣಾಮ ಬೀರಿತು.

1960 ರ ನಂತರದ ದಶಕವು ಸಮರಶೀಲ ಮುಷ್ಕರಗಳು ಮತ್ತು ಇತರ ರೀತಿಯ ಘಟಕ ಮತ್ತು ಕಾರ್ಖಾನೆವಾರು, ಕೈಗಾರಿಕಾವಾರು ಮತ್ತು ಪ್ರದೇಶವಾರು ಕಾರ್ಮಿಕ ವರ್ಗದ, ವೈಟ್ ಕಾಲರ್ ಉದ್ಯೋಗಿಗಳು ಮತ್ತು ಶಾಲಾ ಮತ್ತು ಕಾಲೇಜು ಶಿಕ್ಷಕರ ಟ್ರೇಡ್ ಯೂನಿಯನ್ ಕ್ರಮಗಳ ಪ್ರಕಾಶಮಾನವಾದ ಪ್ರದರ್ಶನವನ್ನು ಒದಗಿಸಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಜಂಟಿ ಹೋರಾಟಗಳು ಈ ಅವಧಿಯ ಮತ್ತೊಂದು ಮಹತ್ವದ ಲಕ್ಷಣವಾಗಿದೆ.

ನಿರ್ದಿಷ್ಟವಾಗಿ 1967-69ರ ಅವಧಿಯಲ್ಲಿ ಗರಿಷ್ಠ ಎತ್ತರವನ್ನು ತಲುಪಿದ ಎಲ್.ಐ.ಸಿ. ನೌಕರರ ಗಣೀಕರಣ-ವಿರೋಧಿ ಆಂದೋಲನವು ಭಾರತದ ಟ್ರೇಡ್ ಯೂನಿಯನ್ ಆಂದೋಲನಕ್ಕೆ ಹೊಸ ನಿರ್ದೇಶನವನ್ನು ನೀಡಿತು.

ನೌಕರರ ಕುಂದುಕೊರತೆಗಳ ಸಮಾಲೋಚನೆಯ ಇತ್ಯರ್ಥಕ್ಕಾಗಿ ಎಲ್ಲಾ ಪ್ರಯತ್ನಗಳು ವಿಫಲವಾದಾಗ, ಕಾನಫೆಡರೇಶನ್ ಆಫ್ ದ ಸೆಂಟ್ರಲ್ ಗವರ್ನ್‌ಮೆಂಟ್ ಎಂಪ್ಲಾಯಿಸ್ ಅಂಡ್ ವರ್ಕರ್ಸ್ ಅಸ್ಸೋಶಿಯೇಶನ್ಸ್ ಅಂಡ್ ಯೂನಿಯನ್ಸ್, ಆಲ್ ಇಂಡಿಯಾ ಡಿಫೆನ್ಸ್ ಎಂಪ್ಲಾಯಿಸ್ ಅಸ್ಸೋಶಿಯೇಶನ್ಸ್, ಆಲ್ ಇಂಡಿಯಾ ರೇಲ್ವೆಮೆನ್ಸ್ ಫೆಡರೇಶನ್ ಮತ್ತು ನ್ಯಾಶನಲ್ ಫೆಡರೇಶನ್ ಆಫ್ ಪೋಸ್ಟ್ ಅಂಡ್ ಟೆಲಿಗ್ರಾಫ್ ಎಂಪ್ಲಾಯಿಸ್ ಒಳಗೊಂಡಿರುವ ಜಂಟಿ ಕೌನ್ಸಿಲ್ ಆಫ್ ಆಕ್ಷನ್. ಮುಷ್ಕರಕ್ಕೆ ಕರೆನೀಡಿತು..

ಈ ಅವಧಿಯ ಹೋರಾಟದ ಕೆಲವು ವಿಶೇಷ ಲಕ್ಷಣಗಳೆಂದರೆ, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಹೆಚ್ಚಿನ ಸಂಖ್ಯೆಯ ಹೋರಾಟಗಳು ನಡೆದವು, ಮತ್ತು ವಿವಿಧ ಕೇಂದ್ರ ಕಾರ್ಮಿಕ ಸಂಘಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳ ರಾಷ್ಟ್ರೀಯ ಮಟ್ಟದ ಸಂಯೋಜನೆಗೆ ಕಾರಣವಾದವು, ಸಾಮಾನ್ಯ ವಿಷಯಗಳ ಕುರಿತು ಹಲವಾರು ಜಂಟಿ ಮತ್ತು ಸಮನ್ವಯ ಕಾರ್ಯಕ್ರಮಗಳಿಗೆ ಕಾರಣವಾಯಿತು,

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜನನ

1970 ರ ಏಪ್ರಿಲ್ 9-10 ರಂದು ಗೋವಾದಲ್ಲಿ ನಡೆದ ಸಮಾವೇಶದಲ್ಲಿ ಮುಖ್ಯ ನಾಯಕತ್ವದ ವರ್ಗ-ಸಹಯೋಗಿ ನೀತಿ ನಿರ್ಧಾರಗಳಿಗೆ ವಿರುದ್ಧವಾಗಿದ್ದ ಎಐಟಿಯುಸಿ ಜನರಲ್ ಕೌನ್ಸಿಲ್ ಮತ್ತು ರಾಜ್ಯ ಸಮಿತಿ ಸದಸ್ಯರು ಭೇಟಿಯಾದರು. ಭಾರತದ ಕಾರ್ಮಿಕರ ಹೊಸ ಮತ್ತು ಹೋರಾಟದ ರಾಷ್ಟ್ರೀಯ ಕೇಂದ್ರಕ್ಕೆ ಆಕಾರ ನೀಡುವ ಉದ್ದೇಶದಿಂದ, ಆ ಸಮಾವೇಶವು ಅಖಿಲ ಭಾರತ ಟ್ರೇಡ್ ಯೂನಿಯನ್ ಸಮ್ಮೇಳನವನ್ನು ನಡೆಸಲು ನಿರ್ಧರಿಸಿತು. ನಂತರ ಅಖಿಲ ಭಾರತ ಟ್ರೇಡ್ ಯೂನಿಯನ್ ಸಮ್ಮೇಳನ ಮೇ 28-30 ರಂದು ಕಲ್ಕತ್ತಾದ ರಣಜಿ ಕ್ರೀಡಾಂಗಣದ ಲೆನಿನ್ ನಗರದಲ್ಲಿ ನಡೆಯಿತು.,

ರಾಮಮೂರ್ತಿ ಸಮ್ಮೇಳನದಲ್ಲಿ ಮಂಡಿಸಿದ ವರದಿ, "ನಾವು ಒಂದು ಕೈಗಾರಿಕೆ ಅಥವಾ ಕಾರ್ಖಾನೆಯಲ್ಲಿ ಒಂದೇ ಸಂಘದ ಪರವಾಗಿ ನಿಲ್ಲುತ್ತೇವೆ. ರಾಜಕೀಯ ಸಂಯೋಜನೆಯ ಆಧಾರದ ಮೇಲೆ ಕಾರ್ಮಿಕ ಸಂಘಗಳನ್ನು ವಿಭಜಿಸಲು ನಾವು ಬಯಸುವುದಿಲ್ಲ. ಸಾಮಾನ್ಯ ಕಾರ್ಮಿಕ ಸಂಘದಲ್ಲಿ ಕಾರ್ಮಿಕರನ್ನೆಲ್ಲಾ ಒಂದುಗೂಡಿಸಲು ನಾವು ಪ್ರಯತ್ನಿಸುತ್ತೇವೆ ಏಕೆಂದರೆ ಮಾಲಿಕರಿಗೆ ವಿರುದ್ಧವಾಗಿ ಕಾರ್ಮಿಕರ ಹಿತಾಸಕ್ತಿಗಳು ಸಾಮಾನ್ಯವಾಗಿವೆ ಮತ್ತು ಅವರು ತಮ್ಮ ಹೋರಾಟವನ್ನು ಒಗ್ಗಟ್ಟಿನಿಂದ ಮುಂದುವರಿಸಬೇಕಾಗುತ್ತದೆ. " ಎಂದು ಹೇಳಿತು.

ಒಟ್ಟು 804.637 ಸದಸ್ಯತ್ವ ಹೊಂದಿದ್ದ 1759 ಸಂಘಗಳು ಸಮ್ಮೇಳನದಲ್ಲಿ ಭಾಗವಹಿಸಲು 4,264 ಸಂಖ್ಯೆಯ ಪ್ರತಿನಿಧಿಗಳನ್ನು ಕಳುಹಿಸಿದ್ದವು. ಇದಲ್ಲದೆ. 116 ಪ್ರತಿನಿಧಿಗಳು ಮತ್ತು 1.134 ವೀಕ್ಷಕರನ್ನು ಸೌಹಾರ್ದ ಸಂಘಗಳು ಕಳುಹಿಸಿದ್ದು, ಒಟ್ಟು ಭಾಗವಹಿಸುವಿಕೆಯ ಸಂಖ್ಯೆ 5,514 ಕ್ಕೆ ತಲುಪಿತ್ತು.

ಸಮ್ಮೇಳನದ ನಡಾವಳಿಗಳನ್ನು ಬಿ. ಟಿ. ರಣದಿವೆ ಸಮಾರೋಪ ಮಾಡಿದರು.. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸನ್ನಿವೇಶ ಮತ್ತು ಸಮರಶೀಲ ಟ್ರೇಡ್ ಯೂನಿಯನ್ ಕೇಂದ್ರದ ಜನನದ ಅಗತ್ಯತೆಗಳ ಬಗ್ಗೆ ವಿವರಿಸುತ್ತಾ,. ರಣದಿವೆ ಅವರು ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಮಹತ್ತರ ಕಾರ್ಯಗಳನ್ನು ಬಹಳ ತೀಕ್ಷ್ಣವಾಗಿ ವಿವರಿಸಿದರು. ಬಿ. ಟಿ ರಣದಿವೆಯವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾದ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ಮೇ 31, 1970 ರಂದು ನಡೆದ ಬಹಿರಂಗ ಅಧಿವೇಶನದಲ್ಲಿ ಸಮ್ಮೇಳನ ಕೊನೆಗೊಂಡಿತು. ಅಲ್ಲಿ ಸುಮಾರು ಹತ್ತು ಲಕ್ಷ ಕಾರ್ಮಿಕರು ಮತ್ತು ಇತರ ಜನಸಾಮಾನ್ಯರು ಭಾಗವಹಿಸಿದ್ದರು.

ಹೊಸದಾಗಿ ಹುಟ್ಟಿದ ಈ ಸಂಘಟನೆಯ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ನ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಬಿ.ಟಿ.ರಣದಿವೆ ಮತ್ತು ಪಿ.ರಾಮಮೂರ್ತಿ ಆಯ್ಕೆಯಾದರು.

ಅಂದಿನಿಂದ ಭಾರತದ ರಾಜಕೀಯ ರಂಗದಲ್ಲಿ, ಭಾರತದ ಜನರ ಜೀವನಕ್ಕೆ ಗಂಭೀರ ಪ್ರಾಮುಖ್ಯತೆ ಇರುವ ಭಾರಿ ಬದಲಾವಣೆಗಳು ನಡೆದಿವೆ. ಕಾರ್ಮಿಕ ವರ್ಗದ ಹೋರಾಟಗಳು ಸಹ ಹಿಂದಿನ ಎಲ್ಲ ದಾಖಲೆಗಳಿಗಿಂತ ಉತ್ತಮವಾಗಿವೆ.

ಈ ಬಾರಿಯೂ ಸೋಂಕು ಮತ್ತು ಸಾವುಗಳ ನಡುವೆ ಬಂದಿದೆ ಮೇದಿನ

ಪುಟ 6 ರಿಂದ

ಉದ್ಯೋಗದಾತರಿಗೆ ಮತ್ತು ಸಂಬಂಧಪಟ್ಟ ಎಲ್ಲರಿಗೂ ರಿಟ್ರೆಂಚಮೆಂಟ್, ವೇತನ ಕಡಿತ ಮತ್ತು ವಸತಿಗಳಿಂದ ಹೊರಹಾಕುವಿಕೆಯನ್ನು ನಿಷೇಧಿಸುವ ಕಟ್ಟುನಿಟ್ಟಿನ ಆದೇಶಗಳೊಂದಿಗೆ ಇರಬೇಕು. ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

- ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲಾ ಕುಟುಂಬಗಳಿಗೆ ತಿಂಗಳಿಗೆ 7500 ರೂ ಪಾವತಿಸಬೇಕು.
- ಮುಂದಿನ ಆರು ತಿಂಗಳವರೆಗೆ ಪ್ರತಿ ವ್ಯಕ್ತಿಗೆ 10 ಕೆಜಿ ಉಚಿತ ಆಹಾರ ಧಾನ್ಯಗಳನ್ನು ಒದಗಿಸಬೇಕು.
- ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಿ ಮತ್ತು ನಿರ್ದಿಷ್ಟ ಸಮಯದೊಳಗೆ ಸಾರ್ವತ್ರಿಕ ಉಚಿತ ವ್ಯಾಕ್ಸಿನೇಷನ್ ಅನ್ನು ಖಚಿತಪಡಿಸಬೇಕು.
- ಕೋವಿಡ್ ಉಲ್ಬಣವನ್ನು ಎದುರಿಸಲು ಸಾಕಷ್ಟು ಆಸ್ಪತ್ರೆ ಹಾಸಿಗೆಗಳು, ಆಮ್ಲಜನಕ ಮತ್ತು ಇತರ ವೈದ್ಯಕೀಯ ಸೌಲಭ್ಯಗಳನ್ನು ಖಚಿತಪಡಿಸಬೇಕು.
- ಅಗತ್ಯ ಆರೋಗ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಸೇರಿದಂತೆ ಸಾರ್ವಜನಿಕ ಆರೋಗ್ಯ ಮೂಲ ಸೌಕರ್ಯಗಳನ್ನು ಬಲಪಡಿಸಬೇಕು.
- ಕೋವಿಡೇತರ ರೋಗಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಣಾಮಕಾರಿ ಚಿಕಿತ್ಸೆ ಪಡೆಯುವುದನ್ನು ಖಚಿತಪಡಿಸಬೇಕು.
- ಎಲ್ಲಾ ಆರೋಗ್ಯ ಮತ್ತು ಮುಂಚೂಣಿ ಕೆಲಸಗಾರರಿಗೆ ಮತ್ತು ಆಶಾ ಮತ್ತು ಅಂಗನವಾಡಿ ನೌಕರರು ಸೇರಿದಂತೆ ಸಾಂಕ್ರಾಮಿಕ-ನಿರ್ವಹಣಾ ಕೆಲಸದಲ್ಲಿ ತೊಡಗಿರುವವರಿಗೆ ರಕ್ಷಣಾತ್ಮಕ ಉಡುಗೆ, ಸಲಕರಣೆಗಳು ಇತ್ಯಾದಿಗಳ ಲಭ್ಯತೆಯನ್ನು ಖಚಿತಪಡಿಸಿ ಮತ್ತು ಅವರೆಲ್ಲರಿಗೂ ಸಮಗ್ರ ವಿಮಾ ರಕ್ಷಣೆಯನ್ನು ಒದಗಿಸಬೇಕು.

ಮೇ ದಿನವನ್ನು ಆಚರಿಸುವಾಗ ಈ ಬೇಡಿಕೆಗಳನ್ನು ಫಲಕಗಳು, ತೋರಣಗಳು ಮತ್ತು ಬ್ಯಾನರ್‌ಗಳ ಮೂಲಕ ಪರಿಣಾಮಕಾರಿಯಾಗಿ ಎತ್ತಬೇಕು ಎಂದೂ ಸಿಐಟಿಯು ತನ್ನ ಸಂಯೋಜಿತ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಕೋವಿಡ್ ಶಿಷ್ಟಾಚಾರ ಸಂಹಿತೆಗಳಾದ – ಮಾಸ್ಕ್ ಧರಿಸುವುದು, ದೈಹಿಕ ದೂರವನ್ನು ಕಾಪಾಡಿಕೊಳ್ಳುವುದು ಇತ್ಯಾದಿಗಳನ್ನು ಎಲ್ಲ ನಾಯಕರು, ಕೇಡರ್ಸ್, ಕಾರ್ಯಕರ್ತರು ಮತ್ತು ಸದಸ್ಯರು ತಮ್ಮ ಮತ್ತು ತಮ್ಮ ಸಂಗಾತಿಗಳ, ಸಹೋದ್ಯೋಗಿಗಳ ಮತ್ತು ಕುಟುಂಬ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಳ್ಳಲು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದೂ ಅದು ಹೇಳಿದೆ.

ಕ್ಯೂಬಾ ನಾಯಕತ್ವ: 'ಸಿಯೆರಾ ಮಿಸ್ತ್ರಾ ಪೀಳಿಗೆ'ಯಿಂದ ಹೊಸ ಪೀಳಿಗೆಯತ್ತ



ಜಗದ ಸುತ್ತ

ಎನ್.ಕೆ. ವಸಂತ್‌ರಾಜ

ಕ್ಯೂಬಾ ಕೊವಿದ್ ಮಹಾಸೋಂಕಿನ ಮೊದಲ ಅಲೆಯ ಅವಧಿಯಲ್ಲಿ ಅದರ ಉತ್ತಮ ನಿರ್ವಹಣೆಗೆ ಜಗತ್ತಿನ ಗಮನ ಸೆಳೆದಿತ್ತು. ಅದೇ ರೀತಿ ಇತ್ತೀಚಿನ ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ 8ನೇ ಮಹಾಧಿವೇಶನವು, 'ಕ್ಯಾಸ್ಟ್ರೋ ಯುಗ'ದ ಕೊನೆ ಮತ್ತು ಹೊಸ ಯುಗದ ಆರಂಭ, ಎಂಬ ಜಾಗತಿಕ ಮಾಧ್ಯಮಗಳು ವರದಿಗಳ ಮೂಲಕ ಮತ್ತೆ ಜಗತ್ತಿನ ಗಮನ ಸೆಳೆದಿತ್ತು. ಈ ಮಹಾಧಿವೇಶನದಲ್ಲಿ ಆದ ಪಕ್ಷದ ನಾಯಕತ್ವದ ಬದಲಾವಣೆಯನ್ನು ಹೀಗೆ ಬಣ್ಣಿಸಲಾಗಿತ್ತು. ಇದು ಮಹತ್ತರ ಚಾರಿತ್ರಿಕ ಬದಲಾವಣೆಗಳನ್ನು ಬಹುತೇಕ ವ್ಯಕ್ತಿಗಳ ಮೇಲೆ ಕೇಂದ್ರೀಕರಿಸಿ ಗುರುತಿಸುವ ಮಾಧ್ಯಮಗಳ ಚಾಳಿಯ ಪರಿಣಾಮ ಇರಬೇಕು. ಇತರ ಕೆಲವು ಮಾಧ್ಯಮಗಳು ಗುರುತಿಸಿದಂತೆ ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ನಾಯಕತ್ವವು 'ಸಿಯೆರಾ ಮಿಸ್ತ್ರಾ ಪೀಳಿಗೆ'ಯ ಕ್ರಾಂತಿಕಾರಿಗಳಿಂದ ಹೊಸ ಪೀಳಿಗೆಯ ಕ್ರಾಂತಿಕಾರಿಗಳಿಗೆ ಬದಲಾಗಿದೆ, ಎಂದು ಅದನ್ನು ಬಣ್ಣಿಸುವುದು ಹೆಚ್ಚು ಸರಿಯಾದೀತು.

ಕ್ಯೂಬಾದ ಸರ್ವಾಧಿಕಾರಿ ಬಾಟಿಸ್ಟಾ ನನ್ನು ಓಡಿಸುವ ಪ್ರಯತ್ನಗಳನ್ನು 1953ರಿಂದ ಆರಂಭಿಸಿ ಅಗಾಧ ಸವಾಲುಗಳನ್ನು ಹಲವು ವೈಫಲ್ಯಗಳ ನಂತರ ಸಿಯೆರಾ ಮಿಸ್ತ್ರಾ ಪರ್ವತ ಶ್ರೇಣಿಯಿಂದ ಫಿಡೆಲ್ ಮತ್ತು ರಾವುಲ್ ಕ್ಯಾಸ್ಟ್ರೋ ಹಾಗೂ ಚೆ ಗವೇರಾ ಅವರ ನಾಯಕತ್ವದಲ್ಲಿ 1959ರಲ್ಲಿ ಕ್ರಾಂತಿ ಸಾಧಿಸಿದ ಮೊದಲ ಪೀಳಿಗೆಯ ಕ್ರಾಂತಿಕಾರಿಗಳನ್ನು 'ಸಿಯೆರಾ ಮಿಸ್ತ್ರಾ ಪೀಳಿಗೆ' ಎಂದು ಕರೆಯಲಾಗುತ್ತದೆ. ಈ ಪೀಳಿಗೆಯ ನಾಯಕರು ಕ್ಯೂಬಾದ ಸಮಾಜವಾದಿ ಕ್ರಾಂತಿಯನ್ನು ದೈತ್ಯ ಅಮೆರಿಕನ್ ಸಾಮ್ರಾಜ್ಯಶಾಹಿ ದಾಳಿಯ ವಿರುದ್ಧ ರಕ್ಷಿಸಿ ಮುನ್ನಡೆಸಿದ್ದರು. ಇವರಿಂದ ಹೊಸ ಪೀಳಿಗೆಯ ಕ್ರಾಂತಿಕಾರಿ ಕಮ್ಯುನಿಸ್ಟರು ನಾಯಕತ್ವ ವಹಿಸಿಕೊಂಡಿದ್ದಾರೆ. ಇದು ಕ್ಯೂಬಾದಲ್ಲಿ ನಾಯಕತ್ವದ ಬದಲಾವಣೆಯೊಂದಿಗೆ ಕ್ರಾಂತಿಕಾರಿ ಕಮ್ಯುನಿಸ್ಟ್ ಪರಂಪರೆಯನ್ನು ಮುಂದುವರೆಸಿದೆ ಎಂಬುದು ಗಮನಾರ್ಹ.

ರಾವುಲ್ ಕ್ಯಾಸ್ಟ್ರೋ ಅವರ ಸ್ಥಾನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದ ಮಿಗೆಲ್ ಡಿಯಾಝ್ ಕನೆಲ್ ಅಧಿಕಾರ ವಹಿಸಿಕೊಳ್ಳುತ್ತಾ "ಕ್ರಾಂತಿಕಾರಿ ಹೋರಾಟಗಳ ಕಾಲದಲ್ಲಿ, ಕ್ರಾಂತಿಯನ್ನು ರಕ್ಷಿಸುವುದು ಬದ್ಧ ಕರ್ತವ್ಯವಾಗಿರುವಾಗಲೇ, ಕಮ್ಯುನಿಸ್ಟ್ ಪಕ್ಷವನ್ನು ಕಾಪಾಡಿಕೊಳ್ಳುವುದು ಅತ್ಯಂತ ಪ್ರಮುಖ ಕ್ರಾಂತಿಕಾರಿ ಕರ್ತವ್ಯವಾಗಿರುತ್ತದೆ" ಎಂದು ಹೇಳುವ ಮೂಲಕ ಕ್ಯೂಬಾದಲ್ಲಿ ಕ್ರಾಂತಿಕಾರಿ ಕಮ್ಯುನಿಸ್ಟ್ ಪರಂಪರೆಯ ಮುಂದುವರಿಕೆಯನ್ನು ಖಚಿತಪಡಿಸಿದರು. "ಮಹಾಧಿವೇಶನವು ಯೋಚನೆಗಳನ್ನು ದೃಢಗೊಳಿಸುವ, ಇತಿಹಾಸವನ್ನು ಗುರುತಿಸುವ, ಭವಿಷ್ಯವನ್ನು ರೂಪಿಸುವ ಸ್ಥಳ." ನಿಜವಾಗಿಯೂ 8ನೇ ಮಹಾಧಿವೇಶನವು ಇಂತಹ ಸ್ಥಳವಾಗಿತ್ತು.

ಕೊವಿದ್ ಪರಿಸ್ಥಿತಿಯಿಂದಾಗಿ ಎಪ್ರಿಲ್ 16ರಿಂದ 19ರ ವರೆಗೆ ಹವಾನಾದಲ್ಲಿ ನಡೆದ 8ನೇ ಮಹಾಧಿವೇಶನದಲ್ಲಿ 7 ಲಕ್ಷ ಪಕ್ಷದ ಸದಸ್ಯರನ್ನು ಪ್ರತಿನಿಧಿಸುವ ಕೇವಲ 300 ಪ್ರತಿನಿಧಿಗಳು ಭಾಗವಹಿಸಿದ್ದರು. 7ನೇ ಮಹಾಧಿವೇಶನದಲ್ಲಿ 1 ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಮಾರ್ಚ್ 4 ರಂದು ಮಹಾಧಿವೇಶನಕ್ಕೆ ಪ್ರತಿನಿಧಿಗಳನ್ನು ಆರಿಸಲು ಪ್ರಾಂತೀಯ ಮಟ್ಟದ ಸಭೆಗಳು ನಡೆದಿದ್ದವು. ಮಹಾಧಿವೇಶನದಲ್ಲಿ ಪ್ರಸ್ತುತಪಡಿಸಲಾದ ದಸ್ತಾವೇಜುಗಳನ್ನು ಮಾರ್ಚ್ 15–20 ಅವಧಿಯಲ್ಲಿ ಚರ್ಚಿಸಿ ತಿದ್ದುಪಡಿ ಮೊದಲೇ ಕಳಿಸಲು ಅನುವಾಗುವಂತೆ ಮೊದಲೇ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಹಂಚಲಾಗಿತ್ತು. ಮೂರು ಪ್ರಮುಖ ದಸ್ತಾವೇಜುಗಳನ್ನು ಮಹಾಧಿವೇಶನವು ಮೂರು ಸಮಾನಾಂತರ ಕಮಿಶನ್ ಗಳಲ್ಲಿ ಒಂದುವರೆ ದಿನಗಳ ಕಾಲ ವಿವರವಾಗಿ ಚರ್ಚಿಸಿ ತಿದ್ದುಪಡಿಗಳೊಂದಿಗೆ ಮುಖ್ಯ ಅಧಿವೇಶನಕ್ಕೆ ಅಂಗೀಕಾರಕ್ಕೆ ಕಳಿಸಿತು.

'ಆರ್ಥಿಕ ಮತ್ತು ಸಾಮಾಜಿಕ ಕಮಿಶನ್' 2016ರಲ್ಲಿ ನಡೆದ 7ನೇ ಮಹಾಧಿವೇಶನ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಅಂಗೀಕರಿಸಿದ ನಿರ್ಣಯಗಳ ಜಾರಿ ಮತ್ತು ಪರಾಮರ್ಶೆಯನ್ನು ಮಾಡಿತು. ಎರಡನೆಯ ಕಮಿಶನ್ ಪಕ್ಷದ ಸಂಘಟನಾ ಸಾಧನೆ–ವೈಫಲ್ಯಗಳು ಮತ್ತು ಬಲ–ನ್ಯೂನತೆಗಳ ಕುರಿತು ಪರಾಮರ್ಶಿಸಿ ಪಕ್ಷವನ್ನು ಬಲಪಡಿಸುವ ವಿಧಾನಗಳ ಕುರಿತು ಚರ್ಚಿಸಿತು. ಮೂರನೆಯ ಕಮಿಶನ್ ಪಕ್ಷದ ಕಾರ್ಯಕರ್ತರ ಸಮಸ್ಯೆಗಳು ಸವಾಲುಗಳಿಗೆ ಮೀಸಲಾಗಿತ್ತು. ಈ ಕಮಿಶನ್ ಗಳ ವರದಿ ಮತ್ತು ಕರಡು ನಿರ್ಣಯಗಳನ್ನು ಪ್ರಧಾನ ಅಧಿವೇಶನ ಚರ್ಚಿಸಿ ಅಂಗೀಕರಿಸಿತು. 7ನೇ ಮಹಾಧಿವೇಶನ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಅಂಗೀಕರಿಸಿದ ಮಾರ್ಗದರ್ಶಿ ಸೂತ್ರಗಳಲ್ಲಿ 17 ಸೂತ್ರಗಳನ್ನು ಮುಂದುವರೆಸಲಿದೆ, 92 ಸೂತ್ರಗಳನ್ನು ಕೈಬಿಡಲಿದೆ, 165 ಸೂತ್ರಗಳನ್ನು ಬದಲಾಯಿಸಲಿದೆ, 18 ಸೂತ್ರಗಳನ್ನು ಸೇರಿಸಲಿದೆ.

ಕೊನೆಯ ದಿನ ಕೇಂದ್ರ ಸಮಿತಿ, ಪೊಲಿಟ್‌ಬ್ಯುರೊ, ಮಹಾಕಾರ್ಯದರ್ಶಿಗಳ ಸ್ಥಾನಗಳ ಆಯ್ಕೆ ನಡೆಯಿತು. ಈಗಾಗಲೇ ತಿಳಿಸಿದಂತೆ ಮಹಾಕಾರ್ಯದರ್ಶಿ ಸೇರಿದಂತೆ 'ಸಿಯೆರಾ ಮಿಸ್ತ್ರಾ ಪೀಳಿಗೆ'ಯ ಜಾಗದಲ್ಲಿ ಹೊಸ ಪೀಳಿಗೆ ನಾಯಕರು ಬಂದಿದ್ದಾರೆ. ಈಗಾಗಲೇ ಹೊಸ ಸಂವಿಧಾನ ಮತ್ತು ಪಕ್ಷದ ನಿರ್ಣಯಗಳ ಪ್ರಕಾರ, ಸರಕಾರ ಮತ್ತು ಪಕ್ಷದ ಉನ್ನತ ಹುದ್ದೆಗಳಿಗೆ 5 ವರ್ಷಗಳ ಎರಡು ಅವಧಿಗಳ ಅವಕಾಶ ಮಾತ್ರ ಕೊಡಲಾಗಿದೆ. ಕೇಂದ್ರ ಸಮಿತಿಯ ಸದಸ್ಯರ ವಯೋಮಿತಿಯನ್ನು 60 ಮತ್ತು ಪೊಲಿಟ್ ಬ್ಯುರೊ ಸದಸ್ಯರದ್ದು 70 ಎಂದು ನಿಗದಿ ಮಾಡಲಾಗಿದೆ. ಆಡಳಿತದ/ಸರಕಾರದ ಕ್ಷೇತ್ರದಲ್ಲಿ ಅಧ್ಯಕ್ಷರು, ಪ್ರಧಾನಿ ಮತ್ತು ರಾಷ್ಟ್ರೀಯ ಅಸೆಂಬ್ಲಿಯ ಅಧ್ಯಕ್ಷರು ಇರುವ ಒಂದು ಸಾಮೂಹಿಕ ನಾಯಕತ್ವವನ್ನು ಸರಕಾರಕ್ಕೆ ನಿಗದಿ ಮಾಡಲಾಗಿದೆ. ಒಂದೇ ವ್ಯಕ್ತಿ ಒಂದಕ್ಕಿಂತ ಹೆಚ್ಚಿನ ಈ ಸ್ಥಾನಗಳನ್ನು ಹೊಂದಿರುವುದಿಲ್ಲ.

ಆದರೆ ಸ್ಥಾನಗಳಿಗೆ ಹೊಸ ಆಯ್ಕೆಗೆ ವಯಸ್ಸು ಮಾತ್ರ ಮಾನದಂಡ ಆಗಿರಲಿಲ್ಲ. ತಳಮಟ್ಟದ ಮತ್ತು ಹಲವು ಹಂತಗಳ ಕೆಲಸದ ಅನುಭವ, ಸೈದ್ಧಾಂತಿಕ ಬದ್ಧತೆ, ಸಂಘಟನಾ ಶಿಸ್ತು ಮುಂತಾದ ಹಲವು ಮಾನದಂಡಗಳನ್ನು ರೂಪಿಸಲಾಗಿದೆ. ಈಗ ಮಹಾಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಮತ್ತು ಕಳೆದ ಮೂರು ವರ್ಷಗಳಿಂದ ದೇಶದ ಅಧ್ಯಕ್ಷರಾಗಿರುವ ಮಿಗೆಲ್ ಇಲೆಕ್ಟ್ರಾನಿಕ್ಸ್ ಇಂಜಿನೀಯರ್. ಕ್ರಾಂತಿಯ ಒಂದು ವರ್ಷದ ನಂತರ ಹುಟ್ಟಿ 61 ವರ್ಷ ವಯಸ್ಸಿನವರು. ಅವರು ಯಂಗ್ ಕಮ್ಯುನಿಸ್ಟ್ ಲೀಗ್ ನಲ್ಲಿ ಕೆಲಸ ಮಾಡಿ ಪಕ್ಷಕ್ಕೆ ಸೇರಿದವರು. ಮೂರು ವರ್ಷ ಮಿಲಿಟರಿ ಸೇವೆ ಮಾಡಿ, ನಿಕರಾಗುವದಲ್ಲಿ ಸೌಹಾರ್ದ ಮಿಲಿಟರಿ ಬೆಂಬಲ ಕೊಡಲು ಹೋದ ಒಂದು ಬ್ರಿಗೇಡಿನ ನಾಯಕರಾಗಿದ್ದವರು. ಎರಡು ಪ್ರಾಂತಗಳಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ಆ ಮೇಲೆ ಕೇಂದ್ರಕ್ಕೆ ಬಂದು ಉಚ್ಚ ಶಿಕ್ಷಣದ ಮಂತ್ರಿಯಾಗಿದ್ದರು. 2003ರಿಂದ ಪೊಲಿಟ್ ಬ್ಯುರೊ ಸದಸ್ಯರಾಗಿದ್ದಾರೆ. ಹೊಸ ಕೇಂದ್ರ ಸಮಿತಿಯ ಅರ್ಧದಷ್ಟು ಮಹಿಳಾ ಸದಸ್ಯರಿದ್ದಾರೆ. ಪೊಲಿಟ್ ಬ್ಯುರೊದ 14 ಸದಸ್ಯರಲ್ಲಿ ಮೂವರು ಮಹಿಳೆಯರು. ಪಕ್ಷದ ಕಾರ್ಯಕರ್ತರಲ್ಲಿ ಸಹ ಶೇ. 54.2 ಮಹಿಳೆಯರು. ಶೇ.47.7 ಕರಿಯರು ಮತ್ತು ಬುಡಕಟ್ಟು ಮೂಲದವರು.

ಕ್ಯೂಬಾ ಎರಡು ತೀವ್ರ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಒಂದು ಜಗತ್ತಿನ ಇತರ ದೇಶಗಳಂತೆ ಕೊವಿದ್ ಸೃಷ್ಟಿ ಮಾಡಿರುವ ಆರೋಗ್ಯ ಬಿಕ್ಕಟ್ಟು. ಪ್ರಬಲ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಇರುವ ಕ್ಯೂಬಾ ಇದನ್ನು ಸುಲಭವಾಗಿ ಎದುರಿಸುತ್ತಿದೆ. ತನ್ನದೇ ವ್ಯಾಕ್ಸೀನ್ ಅಭಿವೃದ್ಧಿಪಡಿಸಿ ಉತ್ಪಾದಿಸುವ ಹಾದಿಯಲ್ಲಿದೆ. ಆದರೆ ಎರಡನೆಯ ಬಿಕ್ಕಟ್ಟು ಅಮೆರಿಕನ್ ಸಾಮ್ರಾಜ್ಯಶಾಹಿಯು ಆರು ದಶಕಗಳ ಕಾಲ ಕ್ಯೂಬಾದ ಮೇಲೆ ಹೊರಿಸಿರುವ ಕ್ರೂರ ಆರ್ಥಿಕ ದಿಗ್ಬಂಧನ ತೀವ್ರವಾಗುತ್ತಾ ನಡೆದಿದ್ದು ದೊಡ್ಡ ಸವಾಲಾಗಿ ಮುಂದುವರೆದಿದೆ. ಕೆಲವು ಆವಶ್ಯಕ ವೈದ್ಯಕೀಯ ಸಾಮಗ್ರಿಗಳ ಆಮದು ಮಾಡಲಾಗದೆ ಆರೋಗ್ಯ ಬಿಕ್ಕಟ್ಟಿನ ಪರಿಹಾರದ ಮೇಲೂ ದುಷ್ಪರಿಣಾಮ ಬೀರಿದೆ. ಈ ಕ್ರೂರ ಆರ್ಥಿಕ ದಿಗ್ಬಂಧನವನ್ನು ತೆಗೆಯಬೇಕೆಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಪ್ರತಿ ವರ್ಷ (ಯು. ಎಸ್. ನ 2–3 ಬಾಲಬಡುಕ ದೇಶಗಳನ್ನು ಬಿಟ್ಟರೆ) 190ರಷ್ಟು ದೇಶಗಳು ಬೆಂಬಲಿಸಿದ ನಿರ್ಣಯವನ್ನು ಅಂಗೀಕರಿಸಿದರೂ ಸಹ ಅದು ಮುಂದುವರೆದಿದೆ. ಒಬಾಮ ಅವಧಿಯಲ್ಲಿ ಸ್ವಲ್ಪ ಮಟ್ಟಿಗೆ ಸಡಿಲಿಸಿ, ಆದರೆ ಟ್ರಂಪ್ ಅವಧಿಯಲ್ಲಿ ಮತ್ತೆ ಬಿಗಿಗೊಳಿಸಿ ಇನ್ನಷ್ಟು ಕ್ರೂರಗೊಳಿಸಲಾಗಿದೆ. ಕ್ಯೂಬಾದ ಆರ್ಥಿಕ ಈ ದಿಗ್ಬಂಧನದಿಂದಾಗಿ 2018ರಲ್ಲಿ 144 ಕೋಟಿ ಡಾಲರುಗಳಷ್ಟು ಭಾರೀ ನಷ್ಟ ಅನುಭವಿಸಿದೆ ಎಂದು ಅಂದಾಜು ಮಾಡಲಾಗಿದೆ.

ಈ ಅಭೂತಪೂರ್ವ ವಿಶೇಷ ಪರಿಸ್ಥಿತಿ ಎದುರಿಸಲು ಕ್ಯೂಬಾವು ಯೋಜಿತ ಸಾರ್ವಜನಿಕ ಒಡೆತನವು ಪ್ರಧಾನವಾಗಿರುವ ಸಮಾಜವಾದಿ ಆರ್ಥಿಕವನ್ನು ಮುಂದುವರೆಸುತ್ತಲೇ, ಕೆಲವು ಆಯ್ದ ಕ್ಷೇತ್ರಗಳಲ್ಲಿ ಸಣ್ಣ ಖಾಸಗಿ ಉದ್ಯಮಗಳು ಮತ್ತು ವಿದೇಶೀ ಬಂಡವಾಳಕ್ಕೆ ಅವಕಾಶ ಕೊಡುವ ನೀತಿಯನ್ನು ಅನುಸರಿಸುತ್ತಿದೆ. ಲೆನಿನ್ ಕಾಲದಲ್ಲಿ ತಂದ ನವ ಆರ್ಥಿಕ ನೀತಿ ಮತ್ತು ಚೀನಾದ ಆರ್ಥಿಕ ಸುಧಾರಣೆಗಳನ್ನು ಪರಾಮರ್ಶೆ ಮಾಡಿ ಅದರ ನಕಲು ಮಾಡದೆ, ಆದರೆ ಅವುಗಳ ಸಾಧನೆ–ವೈಫಲ್ಯಗಳೆರಡರಿಂದಲೂ ಪಾಠ ಕಲಿತು ತನ್ನದೇ ನೀತಿಗಳನ್ನು ರೂಪಿಸುತ್ತಿದೆ. ಕ್ಯೂಬಾಕ್ಕೆ 1991ರ ನಂತರದ 'ವಿಶೇಷ ಅವಧಿ'ಯನ್ನು ನಿಭಾಯಿಸಿದ ಅನುಭವವೂ ಇದೆ. ಕ್ಯೂಬಾ ಯಾವತ್ತೂ ಚೀನಾ, ರಶ್ಯಾ ಗಳ ಆರ್ಥಿಕ ಮಾದರಿಗಳನ್ನು ನಕಲು ಮಾಡಲಿಲ್ಲ. ತನ್ನದೇ ಮಾದರಿಗಳನ್ನು ರೂಪಿಸಿಕೊಂಡಿದೆ. ಈಗಲೂ ಅದನ್ನೇ ಮಾಡುತ್ತಿದೆ. ಕ್ಯೂಬಾ ಹೇಗೆ ಇದನ್ನು ನಿಭಾಯಿಸುತ್ತದೆ ಎಂದು ಜಗತ್ತೇ ಕಾತರದಿಂದ ನೋಡುತ್ತಿದೆ.

ಅದೇ ರೀತಿ ರಾಜಕೀಯ ಕ್ಷೇತ್ರದಲ್ಲಿ ಕಮ್ಯುನಿಸ್ಟ್ ಪಕ್ಷದ ಪ್ರಾಥಮಿಕತೆಯನ್ನು ಬಿಟ್ಟುಕೊಡದೆ ಸಾರ್ವಜನಿಕ ಅಭಿಮತ ಸಂಗ್ರಹದ ಮೂಲಕ ಬಂದ ಪ್ರಸ್ತಾವಗಳನ್ನು ಸಂವಿಧಾನದ ತಿದ್ದುಪಡಿಗಳ ಮೂಲಕ ಜಾರಿಗೊಳಿಸುತ್ತಿದೆ. ಬಹು–ಪಕ್ಷೀಯ ವ್ಯವಸ್ಥೆ ತರದೆ ರಾಜಕೀಯ ಸುಧಾರಣೆಗಳಿಗೆ ಅರ್ಥವಿಲ್ಲ ಮತ್ತು ಕ್ಯೂಬಾ 'ಏಕಪಕ್ಷೀಯ ಸರ್ವಾಧಿಕಾರ' ಎಂಬ ಟೀಕೆಗಳಿಗೆ "ಹೌದು. ಏಕಪಕ್ಷೀಯ ಜೋಸ್ ಮಾರ್ತಿ ಹೇಳಿದ ಅರ್ಥದಲ್ಲಿ. ಯಾಕೆಂದರೆ ನಮ್ಮ ಸಮಾಜವನ್ನು ಸಾವಿರ ಹೋಳಾಗಿ ಒಡೆಯುವ ಕನಸು ಕಾಣುತ್ತಿರುವ ಸಾಮ್ರಾಜ್ಯಶಾಹಿಯ ಮಸಲತ್ತಿನ ವಿರುದ್ಧ ನಮ್ಮ ಬಳಿ ಇರುವ ಒಂದೇ ಗುರಾಣಿ ಜನತೆಯ ಐಕ್ಯತೆ. ಜನತೆಯ ಮುಂಚೂಣಿ ಸಂಘಟನೆಯಾದ ಕಮ್ಯುನಿಸ್ಟ್ ಪಕ್ಷ ಮಾತ್ರ ಈ ಐಕ್ಯತೆಯನ್ನು ಮತ್ತು ಕ್ರಾಂತಿಯ ಚಾರಿತ್ರಿಕ ನಿರಂತರತೆಯನ್ನು ಖಚಿತ ಪಡಿಸಲು ಸಾಧ್ಯ." ಎಂದು ಹಿಂದಿನ ಉಪ ಮಹಾಕಾರ್ಯದರ್ಶಿ ಮಚಾದೊ ವೆಂಚುರಾ ಉತ್ತರಿಸಿದ್ದಾರೆ. ■



ಉದ್ಯೋಗ ಖಾತ್ರಿ ಯೋಜನೆ ಕೂಲಿಕಾರರಿಗೆ ಕಾನೂನು ಬದ್ಧ ಕನಿಷ್ಟ ಕೂಲಿ ಕೊಡಲು ಆಗ್ರಹ



JANASHAKTHI KANNADA VARA PATRIKE May 3-9, 2021 Price: Rs. 10/- Date of Publication: 30 April 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ಹೋರಾಟ ಜೀವಿ ಕಾಮ್ರೇಡ್ ಕೆ. ವೀರಮಣಿ ಇನ್ನಿಲ್ಲ

80ರ ದಶಕವೆಂದರೆ ಹೋರಾಟಗಳ ಕಾಲ. ಬೆಂಗಳೂರು ನಗರ ಹತ್ತಿಗಿರಣಿ ಕಾರ್ಮಿಕರಿಂದ ತುಂಬಿಹೋಗಿತ್ತು. ಮಾಗಡಿ ರಸ್ತೆಯಲ್ಲಿ ಬಿನ್ನಿ ಮಿಲ್, ಮಿನರ್ವ ಮಿಲ್, ಶ್ರೀರಾಮಪುರಕ್ಕೆ ಹೊಂದಿಕೊಂಡಂತಿದ್ದ ರಾಜ ಮಿಲ್, ಚಾಮರಾಜಪೇಟೆಯಲ್ಲಿ ಟಿ.ಆರ್.ಮಿಲ್, ರಾಮಕುಮಾರ್ ಮಿಲ್ ಹೀಗೆ ಬೃಹತ್ ಹತ್ತಿಗಿರಣಿಗಳು ಇದ್ದವು. ಸಾವಿರಾರು ಹತ್ತಿಗಿರಣಿ ಕಾರ್ಮಿಕರ ವಾಸಸ್ಥಾನ ಬೆಂಗಳೂರು.

ಬಿನ್ನಿಮಿಲ್ ಕಾರ್ಮಿಕರಾದ ವೀರಮಣಿಯವರು ಹತ್ತಿಗಿರಣಿ ಕಾರ್ಮಿಕರ ಹೋರಾಟದಿಂದ ಮೂಡಿಬಂದವರು. ಆ ಮೂಲಕ ಕಮ್ಯೂನಿಸ್ಟ್ ಸಿದ್ಧಾಂತ ಒಪ್ಪಿಕೊಂಡು ಸಿಐಟಿಯು ಸಂಘದ ಹೋರಾಟದಲ್ಲಿ ಮುಂಚೂಣಿ ನಾಯಕರಾಗಿದ್ದಾರೆ. ಮಾಲೀಕರು ನಡೆಸುತ್ತಿದ್ದ ದೌರ್ಜನ್ಯಗಳ ವಿರುದ್ಧ ಹಲವಾರು ಹೋರಾಟಗಳನ್ನು ನಡೆಸಿದ್ದರು. ಬಿನ್ನಿಮಿಲ್ ಮುಚ್ಚಿ ಮಾಲೀಕರು ಕಾರ್ಮಿಕರನ್ನು ಬೀದಿಪಾಲು ಮಾಡಿದರು. ಆರಂಭದಲ್ಲಿ ಇತರೆ ಸಂಘಗಳ ಜಂಟಿ ಹೋರಾಟ ಸಂಘಟಿಸಿದ್ದರು. ಪೊಲೀಸ್ ದೌರ್ಜನ್ಯ, ಲಾಟಿ ಚಾರ್ಜ್, ಜೈಲುವಾಸ ಅನುಭವಿಸಿದವರು.

ಕೇಂದ್ರ ಸರಕಾರದ 'ನೂತನ ಜವಳಿ ನೀತಿ'ಯ ವಿರುದ್ಧ ಹೋರಾಟ ನಡೆಸಿದಾಗ, ಮಾಲೀಕರು ಇವರ ಮೇಲೆ ಸುಳ್ಳು ಪೊಲೀಸ್ ಕೇಸುಗಳನ್ನು ಹಾಕಿ ಕೆಲಸದಿಂದ ಅಮಾನತ್ತು ಮಾಡಿದರು. ಇಂತಹ ಕಠಿಣ ಸಂದರ್ಭದಲ್ಲಿ ಹೋರಾಟದಲ್ಲಿ ಹಿಂಜರಿಯದ ಕೆ.ವೀರಮಣಿ ಕಮ್ಯುನಿಸ್ಟ್ ಚಿಂತನೆಯತ್ತ ಆಕರ್ಷಿತರಾದರು. ಬೆಂಗಳೂರಿನಲ್ಲಿ ಡಿವೈಎಫ್ಐ ಸಂಘಟನೆ ಸೇರಿ ಮಾಗಡಿ ರಸ್ತೆ, ಕೆಂಪಾಪುರ ಅಗ್ರಹಾರದಲ್ಲಿ ಡಿವೈಎಫ್ಐ ಸಂಘಟನೆಯ ಘಟಕವನ್ನು ಆರಂಭಿಸಿದರು. ಹತ್ತು ಹಲವು ಸ್ಥಳೀಯ ಹೋರಾಟಗಳನ್ನು ನಡೆಸಿದರು.

ಸಿಪಿಐ(ಎಂ) ನಾಯಕ

ಸಿಪಿಐ(ಎಂ) ಪಕ್ಷದ ಶ್ರೀರಾಮಪುರ ಶಾಖೆಯ ಸದಸ್ಯರಾದರು. ಯಾವುದೇ ಚಳುವಳಿಯಲ್ಲಿ ವೀರಮಣಿ ಖಂಡಿತ ಭಾಗವಹಿಸುತ್ತಿದ್ದರು. 90ರ ದಶಕದಲ್ಲಿ ನಡೆದ ಗ್ಯಾಟ್ ಒಪ್ಪಂದ ವಿರುದ್ಧ ಕಮ್ಯೂನಿಸ್ಟ್ ಕಾರ್ಮಿಕರು ನಡೆಸಿದ ರಾಜಭವನ ಮುತ್ತಿಗೆ ಹೋರಾಟದಲ್ಲಿ ಏಟು ತಿಂದು ಮೊಕ್ಕದಮೆ ಅಲ್ಲದೆ, ಗ್ಯಾಟ್ ಒಪ್ಪಂದ ವಿರುದ್ಧ ಹೋರಾಟದಲ್ಲಿ ನಮ್ಮೊಂದಿಗೆ ಆರು ದಿನಗಳ ಜೈಲುವಾಸ ಅನುಭವಿಸಿದ್ದರು.

ಬಿನ್ನಿಮಿಲ್ ನಲ್ಲಿ ಹಿರಿಯ ಸಂಗಾತಿಗಳಾದ ದೇವರಾಜ್, ಬೃಹಸ್ಪತಿ, ರಾಜಗೋಪಾಲ್ ಇತ್ಯಾದಿ ಸಂಗಾತಿಗಳಿದ್ದ ಪಕ್ಷದ ಬಿನ್ನಿಮಿಲ್ ಶಾಖೆಯನ್ನು ರಚಿಸಿ ಅದರ ಕಾರ್ಯದರ್ಶಿಯಾಗಿದ್ದರು.

ನಂತರ ಶ್ರೀರಾಮಪುರದ ಸ್ಥಳೀಯ ಸಮಿತಿ ಸದಸ್ಯರಾಗಿ ಅಗರಬತ್ತಿ ಕಾರ್ಮಿಕರನ್ನು ಸಂಘಟಿಸಿದ್ದರು. ಪಕ್ಷದ ನೇತೃತ್ವದಲ್ಲಿ ಬೆಲೆ ಏರಿಕೆ ವಿರುದ್ಧ, ಕೋಮುವಾದ ವಿರುದ್ಧ, ಸ್ಥಳೀಯ ಜನರ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತ ಶ್ರೀರಾಮಪುರ – ಮಾಗಡಿ ರಸ್ತೆ, ಕೆಂಪಾಪುರ ಅಗ್ರಹಾರದಲ್ಲಿ ಕಮ್ಯೂನಿಸ್ಟ್ ನಾಯಕರಾಗಿ ಚಿರಪರಿಚಿತರಾಗಿದ್ದರು. ಸಿಪಿಐ(ಎಂ) ಪಕ್ಷದ ರಾಜಾಜಿನಗರ ವಲಯ ಸಮಿತಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸಿಪಿಐ(ಎಂ) ಪಕ್ಷದ ಬೆಂಗಳೂರು 22ನೇ ಜಿಲ್ಲಾ ಸಮ್ಮೇಳನದಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಕಟ್ಟಡ ಕಾರ್ಮಿಕರ ನಾಯಕ

ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ವಿಶೇಷವಾಗಿ ರಾಜಾಜಿನಗರ ವಲಯದಲ್ಲಿ ಕಟ್ಟಡ ಕಾರ್ಮಿಕರ ಸಂಘಟಿಸಲು ಮುಂದಾದರು. ಶ್ರೀರಾಮಪುರ, ಕಮಲನಗರ, ಮಾಗಡಿ ರಸ್ತೆ, ನಾಯಂಡಳ್ಳಿ, ಸ್ವತಂತ್ರ್ಯ ಪಾಳ್ಯ, ಪ್ರಕಾಶನಗರ ಈ ಪ್ರದೇಶದಲ್ಲಿ ಕಟ್ಟಡ ಕಾರ್ಮಿಕರನ್ನು ಸಂಘಟಿಸಿದ್ದರು. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಸಂಘ(ಸಿಐಟಿಯು) ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷರಾಗಿದ್ದರು.

ಕಟ್ಟಡ ಕಾರ್ಮಿಕರು ಜೀವನ ಉತ್ತಮ ಪಡಿಸಲು ಕಾರ್ಮಿಕ ಇಲಾಖೆಗೆ ಸೇವಾ ಸೌಲಭ್ಯಗಳು ಕಾರ್ಮಿಕರಿಗೆ ಸಿಗಬೇಕೆಂದು ಹಲವು ಹೋರಾಟ ನಡೆಸಿದ್ದರು. ಕಟ್ಟಡ ಕಾರ್ಮಿಕರು ಕೆಲಸ ಮಾಡುವಾಗ ಸತ್ತ ಸಮಯದಲ್ಲಿ ಅವರ ಕುಟುಂಬಕ್ಕೆ ಪರಿಹಾರಕ್ಕಾಗಿ ಹೋರಾಟ ನಡೆಸಿ ಹಲವಾರು ಪರಿಹಾರ ಕಾರ್ಯಕ್ರಮ ನಡೆಸಿದ್ದರು. ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು, ವಿದ್ಯಾರ್ಥಿ ವೇತನ, ಮದುವೆ ಪರಿಹಾರ ಮತ್ತು ಪಿಂಚಣಿ ಸೇವೆ ಒದಗಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಕೆ.ವೀರಮಣಿ ದುಡಿಯುವ ವರ್ಗಕ್ಕಾಗಿ ತಮ್ಮ ಜೀವವನ್ನು ಒತ್ತೆ ಇಟ್ಟ ಹೋರಾಟ ಜೀವಿ.

ಅವರು ಹೃದಯ, ಕಿಡ್ನಿ, ಜಾಂಡೀಸ್ ಇತ್ಯಾದಿ ಸಮಸ್ಯೆಗಳಿಂದ ಅನಾರೋಗ್ಯ ಪೀಡಿತರಾಗಿದ್ದರು. ಕೆಲವು ದಿನಗಳಿಂದ ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಅವರು ಇಬ್ಬರು ಮಕ್ಕಳು ಮತ್ತು ಪತ್ನಿಯನ್ನು ಅಗಲಿದ್ದಾರೆ. ಅಲ್ಲದೆ ಅಪಾರ ಕಾರ್ಮಿಕರ ಮಿತ್ರರಾಗಿದ್ದ ವೀರಮಣಿಯವರ ಸಾವು ತುಂಬಲಾರದ ನಷ್ಟವಾಗಿದೆ.

–ಗೋಪಾಲಕೃಷ್ಣ ಅರಳಹಳ್ಳಿ

ಬಿನ್ನಿಮಿಲ್‌ನಲ್ಲಿ ವೀರಮಣಿ ಮತ್ತು ನಾನು ಮಿನರ್ವ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ವೀರಮಣಿ ಅವರು ಬೆಂಗಳೂರಿನ ಹತ್ತಿ ಗಿರಣಿ ಕಾರ್ಮಿಕರ ಮಧ್ಯೆ ಕಾರ್ಮಿಕ ಸಂಘಟನೆಯನ್ನು ಕಟ್ಟುವಲ್ಲಿ ಶ್ರಮವಹಿಸಿದವರು. ನಂತರದ ದಿನಗಳಲ್ಲಿ ಕೆಲಸ ಕಳೆದುಕೊಂಡ ನಂತರವೂ ಬೇರೆ ಉದ್ಯೋಗವನ್ನು ಅರಸದೆ ಕಾರ್ಮಿಕ ಚಳುವಳಿಯಲ್ಲಿಯೇ ದುಡಿದವರು. ವೀರಮಣಿ ಅವರು. ಕಾರ್ಮಿಕರನ್ನು ಸೈದ್ಧಾಂತಿಕವಾಗಿ ವಿಚಾರಗಳನ್ನು ತಿಳಿದುಕೊಳ್ಳಲು ಕನ್ನಡ, ತಮಿಳು ಸಾಹಿತ್ಯ ಕೃತಿಗಳ ಮಾರಾಟ, ವಾರಪತ್ರಿಕೆ, ಮಾಸ ಪತ್ರಿಕೆಗಳ ಮಾರಾಟವನ್ನು ದಶಕಗಳ ಕಾಲ ಸಕ್ರಿಯವಾಗಿ ಮಾಡುತ್ತಿದ್ದರು ಮತ್ತು ಓದಲೂ ಪ್ರೇರೇಪಿಸುತ್ತಿದ್ದರು. ಪ್ರಸಕ್ತ ಬೆಂಗಳೂರು ನಗರದ ಕಟ್ಟಡ ಕಾರ್ಮಿಕರ ನಡುವೆ ಅವರನ್ನು ಸಂಘಟಿಸುವಲ್ಲಿ ವಿಶೇಷ ಪಾತ್ರ ಕಾಂ.ವೀರಮಣಿ ಅವರಿಗೆ ಇತ್ತು.

–ಡಿ. ಚಂದ್ರಶೇಖರ್,
ಸಿಪಿಐ(ಎಂ) ರಾಜಾಜಿನಗರ ವಲಯ ಸಮಿತಿ

ಬಟ್ಟೆ ಗಿರಣಿಯ ಕಾರ್ಮಿಕರಲ್ಲಿ ಇಂದಿನವರೆಗೂ ಚಳುವಳಿಯಲ್ಲಿ ಉಳಿದವರು ಬೆರಳೆಣಿಕೆಯ ಸಂಗಾತಿಗಳು, ಅದರಲ್ಲಿ ಕಾಂ.ವೀರಮಣಿಯವರು ಒಬ್ಬರು. ಇವರು, ಬಹುಶಃ ಗಿರಣಿ ಕಾರ್ಮಿಕರ ಹೋರಾಟದ ಪ್ರಾರಂಭಿಕ ದಿನಗಳಲ್ಲಿ ಕಾಣಿಸಿಕೊಂಡವರಲ್ಲ. ಮುಂಚೂಣಿಯ ನಾಯಕತ್ವದಲ್ಲಿಯೂ ಇದ್ದವರಲ್ಲ. ಆದರೆ, ಕಾರ್ಮಿಕರ ಮೇಲಿನ ಆಕ್ರಮಣಗಳನ್ನು ಎದುರುಗೊಂಡು, ಹಿಮ್ಮೆಟ್ಟಿಸಿ ಚಳುವಳಿಯಲ್ಲಿ ದೃಢವಾಗಿ ನಿಂತವರು. ದಿಢೀರನೆ ಮೇಲ್ಸಮಿತಿಯ ಸ್ಥಾನಗಳನ್ನು ಪಡೆದವರಂತೂ ಅಲ್ಲವೇ ಅಲ್ಲ.

ಚಳುವಳಿಯ ಮೂಸೆಯಲ್ಲಿ, ಕಮ್ಯುನಿಸ್ಟ್ ಪಕ್ಷದ ವರ್ಗ ಸಿದ್ಧಾಂತವನ್ನು ತಮ್ಮ ಸೀಮಿತ ವಿಧ್ಯಾಭ್ಯಾಸದ ಹಿನ್ನೆಲೆಯನುಸಾರ ನಿಧಾನವಾಗಿ ಕಲಿತವರು. ನಿಧಾನ ಹೆಜ್ಜೆಗಳನ್ನಿಡುತ್ತಾ ಮೊಲವನ್ನು ಹಿಂದೆ ಹಾಕಿದ ಆಮೆಯ ರೂಪಕದಂತೆ ಬೆಳೆದವರು ಕಾಂ.ವೀರಮಣಿ. ವೇದಿಕೆಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಸುಲಲಿತವಾಗಿ ಭಾಷಣ ಮಾಡುತ್ತಿದ್ದರು. ಹಲವು ಕಾರ್ಮಿಕ ಹೋರಾಟಗಳನ್ನು ನಡೆಸುತ್ತಿದ್ದರು. ಪತ್ರಿಕೆಗಳನ್ನು ಓದುತ್ತಿದ್ದರು, ಮಾರುತ್ತಿದ್ದರು, ಪಕ್ಷದ ಪ್ರಕಟಣೆಗಳು ಮತ್ತು ಸಾಹಿತ್ಯವನ್ನು ಅಭ್ಯಾಸ ಮಾಡುತ್ತಿದ್ದರು.

ತಮಿಳಿನಲ್ಲಿ, ಕನ್ನಡದಲ್ಲಿ ಆಟೋ ಪ್ರಚಾರ ಮಾಡುತ್ತಿದ್ದರು. ಕನ್ನಡವನ್ನ ಬಹಳ ಅಚ್ಚುಕಟ್ಟಾಗಿ ಮಾತನಾಡುತ್ತಿದ್ದರು. ಪಕ್ಷದ ಯಾವುದೇ ಹೋರಾಟ, ಪ್ರದರ್ಶನಗಳಲ್ಲಿ ತಪ್ಪದೆ ಹಾಜರಿರುತ್ತಿದ್ದರು.

ಏನೇ ಇರಲಿ, ಬಟ್ಟೆ ಗಿರಣಿಯ ಸಾಧಾರಣ ಕಾರ್ಮಿಕನೊಬ್ಬ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯಲ್ಲಿ ಸಾಕಷ್ಟು ಓದು–ಬರೆದ, ಉನ್ನತ ವ್ಯಾಸಂಗವನ್ನೂ ಮಾಡಿದ ಸಂಗಾತಿಗಳ ಜೊತೆ ಸೈದ್ಧಾಂತಿಕ ಚರ್ಚೆಗಳಲ್ಲಿ ಭಾಗವಹಿಸುವುದು, ಪಕ್ಷ ತೀರ್ಮಾನಗಳನ್ನು ರೂಪಿಸಲು ಸಹಕಾರಿಯಾಗುವುದು, ಪ್ರಚಾರ–ಪ್ರಕ್ಷೋಭೆಗಳನ್ನ ಕೈಗೊಳ್ಳುವುದು ನಿಜಕ್ಕು ಇಂದಿನ ಆಧುನಿಕ ವಿದ್ಯಾವಂತರಿಗೆ ಸೋಜಿಗವೂ, ಮಾದರಿಯೂ ಆಗಬೇಕಿರುವ ವಿಚಾರ.

– ಪ್ರಭಾ ಬೆಳವಂಗಲ ಬೆಂಗಳೂರು

ದಶಕಗಳ ಕಾಲ ಹೆಚ್ಚಿನ ಒಡನಾಡಿಯಾಗಿರುವ ಸಂಗಾತಿ ವೀರಮಣಿ ಮಿಲ್ ಕಾರ್ಮಿಕರ ನಡುವೆ ಸಕ್ರಿಯವಾಗಿ ಸಂಘಟನೆ ರೂಪುಗೊಳ್ಳಲು ಪ್ರಮುಖ ಪಾತ್ರವಹಿಸಿದ್ದರು. ಅವರ ಅಗಲಿಕೆ ನೋವು ತಂದಿದೆ. ಗ್ಯಾಟ್ ಒಪ್ಪಂದ ವಿರುದ್ಧ ಚಳುವಳಿಯಲ್ಲಿ ಸಾಕಷ್ಟು ಪೆಟ್ಟು ತಿಂದ ಸಂಗಾತಿ, ಮೊಕದ್ದಮೆ ಹಾಕಿಸಿಕೊಂಡು ಜೈಲುವಾಸ ಅನುಭವಿಸಿದವರು. ಕಾಂ.ಸೂರಿ ಮತ್ತು ಕಾಂ.ಪಿ.ಕೆ.ಸುಬ್ರಮಣಿ ಅವರೊಟ್ಟಿಗೆ ಜೊತೆಗೂಡಿ ಬೆಂಗಳೂರಿನಲ್ಲಿ ಹತ್ತಿಗಿರಣಿ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಸಂಘಟನಾತ್ಮಕವಾಗಿ ಹೋರಾಟದ ರೂಪುರೇಷೆಗಳ ತಯಾರಿಯಲ್ಲಿ ಮುಂಚೂಣಿಯಾಗಿ ಕೆಲಸ ಮಾಡಿದ ಹಿರಿಯ ಸಂಗಾತಿ. ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಮಟ್ಟದ ಕಾರ್ಯಕ್ರಮಗಳಲ್ಲಿ ಸ್ವಯಂ ಸ್ಪೂರ್ತಿಯಿಂದ ಸಾಮಾನ್ಯ ಕಾರ್ಯಕರ್ತನಾಗಿ ದುಡಿದ ಹಿರಿಯ ಸಂಗಾತಿ ಕಾಂ.ವೀರಮಣಿ.

–ಬಿ.ಎನ್. ರಘು, ಸಿಡಬ್ಲ್ಯೂ.ಎಫ್ಐ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ

ಉದ್ಯೋಗ ಖಾತ್ರಿ ಯೋಜನೆ ಕೂಲಿಕಾರರಿಗೆ ಕಾನೂನು ಬದ್ಧ ಕನಿಷ್ಟ ಕೂಲಿ ಕೊಡಲು ಆಗ್ರಹ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**